ಜನಶಕ್ತಿ


ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 48
ನವೆಂಬರ್ 25, 2012

ಪುಟ 16 ರೂ. 5/-





ಕಾಂಗ್ರೆಸ್-ಬಿಜೆಪಿಗಳನ್ನು ಕಿತ್ತೊಗೆಯಿರಿ......




ನೈಸ್ ಕರ್ಮಕಾಂಡಗಳು : ಸಂತ್ರಸ್ತರು ಸಂಘಟಿತರಾಗಬೇಕು



ರಾಜಕೀಯ ಪ್ರಚಾರಾಂದೋಲನ



ಕೆಎಸ್ಆರ್‌ಟಿಸಿ : ಹೊಸ ಒಪ್ಪಂದ : ವೇತನ ಹೆಚ್ಚಳವೋ, ಕಡಿತವೋ?



ಉತ್ತಮವಾದದ್ದು ಇನ್ನಷ್ಟೇ ಬರಲಿದೆಯೇ?



ರಾಜ್ಯ ರಾಜಕಾರಣದಲ್ಲಿ ಕಾಣದ ಕೈ

ತುಮಕೂರಿನಲ್ಲಿ ಕೆ.ಎಸ್.ಆರ್.ಟಿ.ಸಿ. ನೌಕರರ ಪ್ರತಿಭಟನಾ ಸಮಾವೇಶ

"ಒಂದು ಸಂಸ್ಥೆಯಲ್ಲಿ ಒಂದೇ ಸಂಘ ಇರಲಿ"-ವಿಜೆಕೆ ನಾಯರ್

ಕಾರ್ಮಿಕರು ಮತ್ತು ನೌಕರರಿಗೆ ಅನ್ಯಾಯವಾದರೆ ಸಹಿಸಲು ಸಾಧ್ಯವೇ ಇಲ್ಲ ಎಂದು ಸಿಐಟಿಯು ರಾಜ್ಯಾಧ್ಯಕ್ಷ ವಿ.ಜೆ.ಕೆ.ನಾಯರ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ತುಮಕೂರು ನಗರದ ಬಾಲಭವನದಲ್ಲಿ ಸಿಐಟಿಯು ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಕೆಎಸ್ಆರ್‌ಟಿಸಿ ನೌಕರರ ನಿಗಮ ಮಟ್ಟದ ಪ್ರತಿಭಟನಾ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ನೌಕರರಿಗೆ ಹಿಂಸೆ ನೀಡಲಾಗುತ್ತಿದೆ. ಸಣ್ಣ ತಪ್ಪಿಗೂ ದಂಡ ವಿಧಿಸುವುದು ಹಾಗೂ ವರ್ಗಾವಣೆ ಮಾಡುತ್ತಿದ್ದು ನೌಕರರಿಗೆ ಆಗುತ್ತಿರುವ ಇಂತಹ ಶೋಷಣೆ ನಿಲ್ಲಬೇಕು. ಸಾರಿಗೆ ನೌಕರರಿಗೆ ಸೂಕ್ತ ಭದ್ರತೆ ನೀಡಬೇಕು ಎಂದು ಅವರು ಆಗ್ರಹಿಸಿದರು.

ಆರ್ಥಿಕ ಉದಾರೀಕರಣ ನೀತಿಗಳ ಜಾರಿಯಿಂದಾಗಿ ಸಾರಿಗೆ ನೌಕರರು ಸಂಕಷ್ಟ ಅನುಭವಿಸಬೇಕಾಗಿ ಬಂದಿದೆ. 1991ರ ನಂತರ ಯಾವುದೇ ಮುಷ್ಕರ ನಡೆದಿಲ್ಲ. ಖಾಸಗೀಕರಣ ಮತ್ತು ಉದಾರೀಕರಣದ ವಿರುದ್ಧ ಬೆಂಗಳೂರು ನಗರದಲ್ಲಿ ಬಿಎಂಟಿಸಿ ಭಸ್‌ಗಳ ಬಂದ್ ಆದರೆ ಮಾತ್ರ ಮುಷ್ಕರ ಯಶಸ್ವಿಯಾಗುತ್ತದೆ. ಆದರೆ ಈವರೆಗೆ ಇದ್ದ ಸಂಘಟನೆಗಳ ವೈಫಲ್ಯವೇ ನೌಕರರು ಎದುರಿಸುತ್ತಿರುವ ಸಂಕಷ್ಟಗಳಿಗೆ ಕಾರಣ ಎಂದು ವಿಜೆಕೆ ನಾಯರ್ ಟೀಕಿಸಿದರು. ಸೆಪ್ಟೆಂಬರ್ ತಿಂಗಳಲ್ಲಿ ಎಐಟಿಯುಸಿ ಮಾಡಿಕೊಂಡ ಒಪ್ಪಂದದಿಂದ ನೌಕರರ ವೇತನದಲ್ಲಿ ಅನ್ಯಾಯವಾಗಿದೆ. ಇದನ್ನು ಸರಿಪಡಿಸುವಂತೆ ನಮ್ಮ ಸಂಘಟನೆ ಸರ್ಕಾರಕ್ಕೆ ಮನವಿ ಮಾಡಿದೆ. ಈಗ ಉದ್ಭವಿಸಿರುವ ಸಮಸ್ಯೆಯನ್ನು ಮಾತುಕತೆಯ ಮೂಲಕ ನಿವಾರಣೆ ಮಾಡಬೇಕು. ಒಂದು ಕಾರ್ಖಾನೆಯಲ್ಲಿ / ಸಂಸ್ಥೆಯಲ್ಲಿ ಒಂದೇ ಯೂನಿಯನ್ ಇರಬೇಕು ಎಂಬ ತತ್ವದಲ್ಲಿ ಸಿಐಟಿಯುಗೆ ನಂಬಿಕೆ ಇದೆ. ಯಾವುದೇ ಕೇಂದ್ರ ಕಾರ್ಮಿಕ ಸಂಘಟನೆಗೂ ಸೇರದ ಸ್ವತಂತ್ರವಾದ ಒಂದೇ ಸಂಘಟನೆ ಇದ್ದು ಕಾಲಕಾಲಕ್ಕೆ ನಾಯಕತ್ವದ ಸ್ಥಾನಗಳಿಗೆ ಮುಕ್ತವಾದ ಚುನಾವಣೆಯನ್ನು ನಡೆಸುವ ಪದ್ಧತಿಯನ್ನು ರಾಜ್ಯ ರಸ್ತೆ ಸಾರಿಗೆ ನೌಕರರ ನಡುವೆ ಅಸ್ತಿತ್ವಕ್ಕೆ ತರಲು ಸಿಐಟಿಯು ಸಿದ್ಧತೆ ನಡೆಸಿದೆ. ಅಲ್ಲಿಯವರೆಗೆ ಸಾರಿಗೆ ನೌಕರರ ಹಿತ ಕಾಪಾಡುವುದರಲ್ಲಿ ಸಿಐಟಿಯು ಅನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಹೇಳಿದರು.

ಸಿಐಟಿಯು ಮುಖಂಡ ಮೀನಾಕ್ಷಿ ಸುಂದರಂ ಮಾತನಾಡಿ ಕೆಎಸ್ಆರ್‌ಟಿಸಿಯಲ್ಲಿ ಖಾಸಗಿ ಮಾಲಿಕರು ಕೊಡದಷ್ಟು ಹಿಂಸೆಯನ್ನು ಆಡಳಿತ ವರ್ಗದವರು ನೌಕರರಿಗೆ ಕೊಡುತ್ತಿರುವುದು ಖಂಡನೀಯ ಎಂದರು. ಕೆಲಸ ನಿರ್ವಹಿಸುವಾಗ ಹೃದಯಾಘಾತದಿಂದ ಮೃತಪಟ್ಟ ಕೇಶವನ್ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು. ಪ್ರಸನ್ನಕುಮಾರ್, ಮಂಜುನಾಥ್ ಮತ್ತು ರೇವಪ್ಪ ಅವರ ಮೇಲೆ ಹಾಕಿರುವ ಸುಳ್ಳು ಪ್ರಕರಣಗಳನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ಮುಖಂಡ ಕೆ.ಎನ್.ಉಮೇಶ್ ಮಾತನಾಡಿ ಎಐಟಿಯುಸಿ ಸಂಘಟನೆ ಸಾರಿಗೆ ಸಚಿವರ ಜೊತೆ ಶಾಮೀಲಾಗಿ ಒಪ್ಪಂದ ಮಾಡಿಕೊಂಡಿದೆ. ಇದರಿಂದ ಸಾರಿಗೆ ನೌಕರರಿಗೆ ಅನ್ಯಾಯವಾಗಿದೆ. ಒಪ್ಪಂದ ಮಾಡಿಕೊಳ್ಳುವ ಸಂದರ್ಭದಲ್ಲಿ ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ಮಾಹಿತಿಯೇ ನೀಡಿಲ್ಲ. ಇದು ಕೂಡ ನಿಯಮದ ಉಲ್ಲಂಘನೆಯಾಗಿದೆ ಎಂದು ಟೀಕಿಸಿದರು.



ನವೆಂಬರ್ 9ರ ಸಮಾವೇಶದಲ್ಲಿ ಮಾತನಾಡುತ್ತಿರುವ ಕಾಂ॥ ವಿ.ಜೆ.ಕೆ.ನಾಯರ್

ಪ್ರತಿಭಟನಾ ಸಮಾವೇಶದಲ್ಲಿ ಈ ಸಮಾವೇಶದಲ್ಲಿ ಕೆಎಸ್ಆರ್‌ಟಿಸಿ ನೌಕರರ ಫೆಡರೇಷನ್‌ನ ನರಸಿಂಹಯ್ಯ, ಬಿಎಂಟಿಸಿ ನೌಕರರ ಸಂಘಟನೆಯ ಮುಖಂಡರಾದ ನಾಗರಾಜು, ಶಿವಲಿಂಗಯ್ಯ, ಕುಸುಮ ಓಂಪ್ರಕಾಶ್ ಇವರು ಮಾತನಾಡಿದರು.

ಸಾರಿಗೆ ನೌಕರರ ನಡುವೆ ಇರುವ ಎಲ್ಲಾ ಸಂಘಟನೆಗಳನ್ನು ಒಂದೇ ವೇದಿಕೆಯಡಿಗೆ ತರುವ ಅಗತ್ಯವಿದೆ ಎಂದು ಯುನೈಟೆಡ್ ವರ್ಕರ್ಸ್ ಅಧ್ಯಕ್ಷರಾದ ಡಿಸೋಜರವರು ಅಭಿಪ್ರಾಯಪಟ್ಟರು. ನೌಕರರ ಐಕ್ಯತಾ ವೇದಿಕೆಯ ಕಾರ್ಯದರ್ಶಿಗಳಾದ ವಿಜಯಕುಮಾರ್ ಮಾತನಾಡಿ ಇತ್ತೀಚೆಗೆ ನಡೆದ ಮುಷ್ಕರದ ಯಶಸ್ಸು ಭಾಗವಹಿಸಿ ಯಶಸ್ಸಿಗೊಳಿಸಿದ ಎಲ್ಲಾ ಕಾರ್ಮಿಕರಿಗೆ ಸೇರಿದ್ದು ಎಂದರಲ್ಲದೇ ಮಾತುಕತೆಯಲ್ಲಿ ಸಿಐಟಿಯು ಸಂಘವನ್ನು ಸೇರಿಸಿದ್ದರೆ ಕಾರ್ಮಿಕರಿಗೆ ಅನ್ಯಾಯ ಆಗುತ್ತಿರಲಿಲ್ಲ ಎಂದರು. ಸಮಾವೇಶದ ವೇದಿಕೆಯಲ್ಲಿದ್ದ ಸಿಐಟಿಯುವಿನ ರಾಜ್ಯಕಾರ್ಯದರ್ಶಿ ಕೆ.ಮಹಂತೇಶ್, ಸಾರಿಗೆ ನೌಕರರ ಸಂಘದ ಜಿಲ್ಲಾ ಗೌರವಾಧ್ಯಕ್ಷ ಸೈಯದ್ ಮುಜೀಬ್, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ ಮಾತನಾಡಿದರು. ಸಂಘದ ಜಿಲ್ಲಾಧ್ಯಕ್ಷ ಎ.ಆರ್.ದೇವರಾಜು, ಉಪಾಧ್ಯಕ್ಷ ಸಿ.ಎ.ಶಮೀಉಲ್ಲಾ, ಸಂಘಟನಾ ಕಾರ್ಯದರ್ಶಿ ಕೆ.ರಾಜಣ್ಣ, ಪ್ರಧಾನ ಕಾರ್ಯದರ್ಶಿ ಜಿ.ರಮೇಶ್ ಉಪಸ್ಥಿತರಿದ್ದರು. ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಿಐಟಿಯುನ ಅಖಿಲ ಭಾರತ ಕಾರ್ಯದರ್ಶಿ ಎಸ್. ವರಲಕ್ಷ್ಮಿಯವರು ತಂತ್ರ, ಕುತಂತ್ರಗಳಿಂದ ಕಾರ್ಮಿಕರಿಗೆ ಮೋ[illegible] ಮಾಡಿ ಸತ್ಯ ಹೇಳುವವರನ್ನು ಬಾಯಿಮುಚ್ಚಿಸುವ ಕೀಳು ಪ್ರವೃತ್ತಿಯನ್ನು ಕಾರ್ಮಿಕರು ಸಹಿಸಬಾರದು. ಸಾರಿಗೆ ನೌಕರರು ಧೈರ್ಯದಿಂದ ಸಂಘಟಿತರಾಗಿ ತಮ್ಮ ಹಕ್ಕುಗಳನ್ನು ಪಡೆಯಲು ಮುಂದಾಗಬೇಕು ಎಂದು ಕರೆನೀಡಿದರು.

ಇದಕ್ಕೂ ಮುನ್ನ ನಗರದ ಪುರಭವನದಿಂದ ಹೊರಟ ಮೆರವಣಿಗೆಯಲ್ಲಿ ನೂರಾರು ಸಾರಿಗೆ ನೌಕರರು ಭಾಗವಹಿಸಿದ್ದರು. ಸಮಾವೇಶವು ಇತ್ತೀಚೆಗೆ ಹೃದಯಾಘಾತದಿಂದ ಮರಣಹೊಂದಿದ ಸಾರಿಗೆ ನೌಕರ ಕೇಶವನ್‌ಗೆ ಶ್ರದ್ಧಾಂಜಲಿ ಅರ್ಪಿಸಿತು.

ಎಐಟಿಯುಸಿಯವರ ಸುಳ್ಳು ಕೊಲೆ ಕೇಸಿನ ಕಾರಣದಿಂದಾಗಿ ಕಾಂ. ಪ್ರಸನ್ನ ಕುಮಾರ್ ಕಾಂ. ಎಚ್.ಎಸ್. ಮಂಜುನಾಥ್ ಎಚ್.ಡಿ. ರೇವಪ್ಪ, ಅವರುಗಳು ಸಮವೇಶದಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದುದರಿಂದ ಸಮಾವೇಶವನ್ನು ಪ್ರತಿಭಟನಾ ಸಮಾವೇಶವಾಗಿ ನಡೆಸಲಾಯಿತು.

ಸಿಐಟಿಯು ಮುಂದಾಳುಗಳ ಮೇಲೆ ಸುಳ್ಳು ಕೊಲೆ ಆರೋಪ ಕೇಸು; ಪ್ರತಿಭಟನೆ:

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್ ಮತ್ತು ಇತರರ ವಿರುದ್ಧ ಎಐಟಿಯುಸಿಯವರು ಸುಳ್ಳು ದೂರು ನೀಡಿ ಕೊಲೆ ಆರೋಪ ಪ್ರಕರಣವೊಂದನ್ನು ದಾಖಲು ಮಾಡಿಸಿರುವುದನ್ನು ಖಂಡಿಸಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಸಿಐಟಿಯು ಕಾರ್ಯಕರ್ತರು ನವಂಬರ್ 7 ರಂದು ಮಂಗಳೂರಿನ ಕೆಎಸ್ಸಾರ್ಟಿಸಿ ಬಸ್ಸು ನಿಲ್ದಾಣದ ಮುಂದುಗಡೆ ಪ್ರತಿಭಟನಾ ಪ್ರದರ್ಶನ ನಡೆಸಿದರು. ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಖಂಡಿಸಿದರು. ಸಿಐಟಿಯು ಐಕ್ಯ ಹೋರಾಟಕ್ಕೆ ಪ್ರಾಶಸ್ತ್ಯ ನೀಡುತ್ತದೆ. ಆದರೆ ಎಐಟಿಯುಸಿ ದ್ವೇಷವನ್ನು ಮೂಡಿಸಿ ಆಡಳಿತಗಾರರ ಪರವಾಗಿ ಕೆಲಸ ಮಾಡುತ್ತಿದೆ. ಈ ಸುಳ್ಳು ಕೇಸನ್ನು ವಾಪಾಸು ಪಡೆಯಬೇಕೆಂದು ವಸಂತ ಆಚಾರಿ ಆಗ್ರಹಿಸಿದರು.

ಪ್ರತಿಭಟನಾ ಪ್ರದರ್ಶನದಲ್ಲಿ ವಿವಿಧ ಸಿಐಟಿಯು ಮುಖಂಡರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.



ಸಮಾವೇಶಕ್ಕೆ ಮೊದಲು ಉತ್ಸಾಹಭರಿತ ಮೆರವಣಿಗೆ ತುಮಕೂರಿನ ಮುಖ್ಯ ಬೀದಿಗಳಲ್ಲಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕ್ಯಾಥೋಲಿಕ್ ಮೂಲಭೂತವಾದಕ್ಕೆ ಡಾ॥ಸವಿತಾ ಬಲಿ

ಕರ್ನಾಟಕದವರೇ ಆಗಿರುವ ಡಾ॥ಸವಿತಾ ಹಾಲಪ್ಪನವರ್ ಅವರ ಅಕಾಲಿಕ ಸಾವಿಗೆ ಕಾರಣವಾದ ಐರ್ಲೆಂಡ್‌ನ ಕ್ಯಾಥೋಲಿಕ್ ಮೂಲಭೂತವಾದಿ ಕಾನೂನು ವಿಶ್ವವ್ಯಾಪಿ ಖಂಡನೆಗೆ ಗುರಿಯಾಗಿದೆ. ಒಂದು ಜೀವವನ್ನು ಉಳಿಸುವ ಹೆಸರಿನಲ್ಲಿ ಇನ್ನೊಂದು ಜೀವವನ್ನೂ ಸಾವಿಗೆ ತಳ್ಳುವುದು ಅಮಾನುಷವೂ ಅನಾಗರಿಕವೂ ಆಗಿದೆ.

ಐರ್ಲೆಂಡ್‌ನಲ್ಲಿ ಕ್ಯಾಥೋಲಿಕ್ ಕ್ರೈಸ್ತರು ಬಹುಸಂಖ್ಯಾತರು. ಅಳಿದುಳಿದಿರುವ ಕ್ಯಾಥೋಲಿಕ್ ದೇಶಗಳಲ್ಲಿ ಐರ್ಲೆಂಡ್ ಒಂದು. ಇಲ್ಲಿ ಕ್ಯಾಥೋಲಿಕ್ ಚರ್ಚ್ ಪ್ರತಿಪಾದನೆಗಳನ್ನು ಪ್ರಭುತ್ವವೂ ಪರಿಪಾಲಿಸುತ್ತದೆ. ಕ್ಯಾಥೋಲಿಕ್ ಚರ್ಚ್ ಪ್ರತಿಪಾದನೆಗಳಿಗೆ ವಿರುದ್ಧವಾದ ಕಾನೂನುಗಳನ್ನು ಇಲ್ಲಿ ಜಾರಿಗೆತರುವಂತಿಲ್ಲ. ಕ್ಯಾಥೋಲಿಕ್ ಚರ್ಚ್ ಗರ್ಭಪಾತಕ್ಕೆ ವಿರೋಧವಾಗಿದೆ. ಆದ್ದರಿಂದ ಐರ್ಲೆಂಡ್‌ನಲ್ಲಿ ಗರ್ಭಪಾತ ನಿಷೇಧ ಕಾನೂನು ಜಾರಿಯಲ್ಲಿದೆ. ಕ್ಯಾಥೋಲಿಕ್ ಚರ್ಚ್ ಇಂತಹ ಅನೇಕ ಹಳೆಯದಾದ, ಅರ್ಥ ಕಳೆದುಕೊಂಡಿರುವ ಸಂಪ್ರದಾಯವಾದಿ ಪ್ರತಿಪಾದನೆಗಳನ್ನು ಉಳಿಸಿಕೊಂಡು ಬಂದಿದೆ. ಗರ್ಭಪಾತ ನಿಷೇಧ ಕಾನೂನು ಕುರಿತಂತೆ ಐರ್ಲೆಂಡ್‌ನಲ್ಲಿ ಹಲವು ಬಾರಿ ಜನಾಭಿಪ್ರಾಯ ಸಂಗ್ರಹ ನಡೆಸಲಾಗಿದೆ. ಜನರು ಬದಲಾವಣೆಗೆ ಒಲವು ತೋರಿಸಿದ್ದಾರೆ. 1992ರಲ್ಲಿ ಅಲ್ಲಿನ ಸುಪ್ರೀಂಕೋರ್ಟ್, ತಾಯಿಯ ಜೀವ ತುಂಬಾ ಅಪಾಯದಲ್ಲಿರುವ ಸಂದರ್ಭದಲ್ಲಿ ಗರ್ಭಪಾತ ಮಾಡಬಹುದು ಎಂದು ತೀರ್ಪು ನೀಡಿದೆ. ತೀರ್ಪು ಹೊರಬಿದ್ದು ಇಪ್ಪತ್ತು ವರ್ಷಗಳಾದರೂ ಸಂಪ್ರದಾಯವಾದಿಗಳ ಮತ್ತು ಮುಖ್ಯವಾಗಿ ಕ್ಯಾಥೋಲಿಕ್ ಪೋಪ್ ಅವರ ಒತ್ತಡದಿಂದಾಗಿ ಆ ದೇಶದ ಸಂವಿಧಾನಕ್ಕೆ ಅಗತ್ಯ ತಿದ್ದುಪಡಿ ತರಲು ಸಾಧ್ಯವಾಗಿಲ್ಲ.

ಡಾ॥ಸವಿತಾ ಅವರ ಸಾವು ಐರ್ಲೆಂಡಿನ ಕುರುಡು ಕಾನೂನಿನ ಅಮಾನವೀಯ ಮುಖವನ್ನು ವಿಶ್ವದ ಮುಂದೆ ತೆರೆದಿಟ್ಟಿದೆ. ಧರ್ಮ ಮತ್ತು ಕಾನೂನು ಪರಸ್ಪರ ತಳಕು ಹಾಕಿಕೊಳ್ಳಲು ಅವಕಾಶ ನೀಡುವುದರಿಂದ ಸಂಭವಿಸುವ ದುರಂತಗಳಿಗೆ ಇದೊಂದು ಮರೆಯಲಾಗದ ಉದಾಹರಣೆಯಾಗಿ ಇತಿಹಾಸದಲ್ಲಿ ಸ್ಥಿರಸ್ಥಾಯಿಯಾಗಿ ಉಳಿಯಲಿದೆ. ಎಲ್ಲಾ ಕರ್ಮಠವಾದಿಗಳ ಕಣ್ಣುಗಳನ್ನು ಇದು ತೆರೆಯಬೇಕಾಗಿದೆ. ಮಾನವೀಯತೆಯನ್ನು ಬಿಟ್ಟು ಧರ್ಮವಿಲ್ಲ ಎಂಬುದನ್ನು ವಿಶ್ವವೇ ಒಪ್ಪಿಕೊಂಡು ಸಾಗಬೇಕಾಗಿದೆ.

ಭ್ರೂಣ ಜೀವಂತವಾಗಿರುವಾಗ ಅದನ್ನು ತೆಗೆದು ಹಾಕುವಂತಿಲ್ಲ ಎಂದು ವಾದಿಸುವ ಆ ಐರ್ಲೆಂಡಿನ ವೈಧ್ಯರು ಸವಿತಾ ಅವರನ್ನು ಸಾಯಲು ಬಿಟ್ಟಿರುವುದನ್ನು ಹೇಗೆ ಸಮರ್ಥಿಸುತ್ತಾರೆ ? ಕೇವಲ 17 ವಾರಗಳ ಆ ಭ್ರೂಣವನ್ನು ಉಳಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದು ದೃಢಪಟ್ಟಿರುವಾಗ ಅದರ ತಾಯಿಯ ಜೀವವನ್ನು ಉಳಿಸಲು ಪ್ರಯತ್ನಿಸಬೇಕಾದದ್ದು ಆ ವೈದ್ಯರ ವೃತ್ತಿ ಧರ್ಮವಲ್ಲವೆ ? ಗರ್ಭಪಾತ ಮಾಡಿ ಆ ತಾಯಿಯ ಜೀವ ಉಳಿಸಬಹುದಾಗಿತ್ತಲ್ಲವೆ ? ಆ ತಾಯಿ ಪರಿಪರಿಯಾಗಿ ಬೇಡಿಕೊಂಡರೂ ಆ ವೈದ್ಯರಲ್ಲಿ ಮನುಷ್ಯತ್ವ ಮೂಡದಿದ್ದುದು ಅಕ್ಷಮ್ಯ. ದಯೆ ಇಲ್ಲದ ಧರ್ಮ ! ಕರುಣೆ ಇಲ್ಲದ ಕಾನೂನು!!

ಈ ಅಮಾನವೀಯ ಘಟನೆಗೆ ಐರ್ಲೆಂಡಿನಲ್ಲಿ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿರುವುದು ಒಳ್ಳೆಯ ಬೆಳವಣಿಗೆ. ಡಬ್ಲಿನ್ ನಗರದಲ್ಲಿರುವ ಆ ದೇಶದ ಸಂಸತ್ತಿನ ಎದುರು ಕಳೆದ ಎರಡು ಮೂರು ದಿನಗಳಿಂದ ಬೃಹತ್ ಪ್ರತಿಭಟನೆಗಳು ನಡೆಯುತ್ತಿದ್ದು ಕಾನೂನು ತಿದ್ದುಪಡಿಗಾಗಿ ಒತ್ತಾಯಿಸಲಾಗುತ್ತಿದೆ, ಪ್ರತಿ ವರ್ಷ ನಾಲ್ಕು ಸಾವಿರಕ್ಕೂ ಹೆಚ್ಚು ಐರಿಷ್ ಮಹಿಳೆಯರು ಬೇರೆ ದೇಶಗಳಿಗೆ ಹೋಗಿ ಗರ್ಭಪಾತ ಮಾಡಿಸಿಕೊಳ್ಳುವ ಪರಿಸ್ಥಿತಿ ಇರುವಾಗ ಈ ಕಾನೂನಿನಲ್ಲಿ ಸುಧಾರಣೆ ತರುವುದು ಅತ್ಯಗತ್ಯವಾಗಿದೆ.

ಭಾರತ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಸಮಗ್ರ ತನಿಖೆಯೊಂದಿಗೆ ವಸ್ತುನಿಷ್ಠ ವರದಿ ಹೊರಬರುವಂತೆ ಐರಿಷ್ ಸರ್ಕಾರದ ಮೇಲೆ ಅಗತ್ಯ ರಾಜತಾಂತ್ರಿಕ ಒತ್ತಡ ಹೇರಬೇಕು. ಈ ಅನಾಗರಿಕ ಕಾನೂನು ಬದಲಾಗುವಂತೆ ಸಾರ್ವತ್ರಿಕ ಅಭಿಪ್ರಾಯವನ್ನು ಬಲಪಡಿಸಬೇಕು. ಗರ್ಭಪಾತವನ್ನೂ ಕಾನೂನು ಬದ್ಧಗೊಳಿಸುವಾಗಲೂ, ಅಸುರಕ್ಷಿತ ಗರ್ಭಪಾತದಿಂದ ಮಹಿಳೆಯರು ಸಾವಿಗೀಡಾಗುತ್ತಿರುವುದನ್ನು ತಡೆಯಲು, ವೈದ್ಯರ ನಿರ್ಲಕ್ಷದಿಂದ ಗರ್ಭಿಣಿಯರ ಸಾವು ಸಂಭವಿಸುವುದನ್ನು ತಡೆಯಲು ಹಾಗೂ ಮುಖ್ಯವಾಗಿ ಹೆಣ್ಣು ಭ್ರೂಣ ಹತ್ಯೆಯನ್ನೂ ನಿರ್ಬಂಧಿಸಲು ಕಠಿಣವಾದ ಕಾನೂನು ಜಾರಿಗೆ ತರುವುದು ಅಗತ್ಯವಿದೆ. ●

ರಾಜ್ಯ ರಾಜಕಾರಣದಲ್ಲಿ ಕಾಣದ 'ಕೈ'

ನಿತ್ಯಾನಂದಸ್ವಾಮಿ

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಬಿಜೆಪಿ ತೊರೆದು ತಮ್ಮದೇ ಪ್ರಾದೇಶಿಕ ಪಕ್ಷ ಕಟ್ಟುವುದು ಖಚಿತವಾಗಿದೆ. ಕರ್ನಾಟಕ ಜನತಾ ಪಕ್ಷದ ನೇತೃತ್ವವಹಿಸಲು ಸಜ್ಜಾಗಿರುವ ಬಿಎಸ್‌ವೈ ಮನವೊಲಿಸಿ ಪಕ್ಷದಲ್ಲೇ ಉಳಿಸಿಕೊಳ್ಳಲು ಅರುಣ್‌ಜೇಟ್ಲಿ ನಡೆಸಿದ ಪ್ರಯತ್ನವೂ ವಿಫಲವಾಗಿದೆ! 'ನಾನು ಬಿಜೆಪಿಯಿಂದ ಬಹಳ ದೂರ ಹೋಗಿದ್ದೇನೆ' ಎಂಬ ಅವರ ಮಾತುಗಳಲ್ಲಿ ಬ್ಲಾಕ್ ಮೇಲ್ ಮಾಯವಾಗಿರುವುದು ಎದ್ದು ಕಾಣುತ್ತದೆ. ಒಂದು ಹಂತದಲ್ಲಿ ಹೈಕಮಾಂಡ್ ಅಧಿಕಾರ ಕೊಡದಿದ್ದರೂ ಬಿಜೆಪಿಯನ್ನು ಯಾವುದೇ ಕಾರಣಕ್ಕೂ ತೊರೆಯುವುದಿಲ್ಲ ಎನ್ನುತ್ತಲೇ ಬಂದಿದ್ದ ಯಡಿಯೂರಪ್ಪ ಈಗ ತಮ್ಮ ದಾಟಿಯನ್ನು ದೃಢವಾಗಿ ಬದಲಾಯಿಸಿದಂತೆ ಕಾಣುತ್ತದೆ.

ಈ ಹಂತದಲ್ಲಿ ಬಿಜೆಪಿ ಹೈಕಮಾಂಡ್ ಪಕ್ಷದಲ್ಲಿ ಅವರು ಬಯಸುವ ಸ್ಥಾನವನ್ನು ನೀಡುವ ಆಸಕ್ತಿ ತೋರಿಸಿದರೂ ಬಿಎಸ್‌ವೈ ಈಗ ಒಪ್ಪಲಾರರು. ಬಿಜೆಪಿಯ ಆಂತರಿಕ ಕಚ್ಚಾಟ ರಾಜ್ಯದ ಜನರಲ್ಲಿ ಭ್ರಮ ನಿರಸನ ಉಂಟುಮಾಡಿದೆ. ಬದಲಾವಣೆ ಬಯಸಿ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಜನರಿಗೆ ದೊಡ್ಡ ನಿರಾಸೆಯಾಗಿದೆ. ಶಿಸ್ತಿನ ಪಕ್ಷ ಎಂದು ಹೇಳಿಕೊಳ್ಳುತ್ತಿದ್ದ ಪಕ್ಷದಲ್ಲಿ ಅಶಿಸ್ತಿನ ಪರಮಾವಧಿಯ ಪ್ರದರ್ಶನವಾಗಿದೆ. ಆದುದರಿಂದ ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುವುದಿಲ್ಲ. ಅಧಿಕಾರಕ್ಕೆ ಬರಲು ಹಿಂದಿನಂತೆ ಲಿಂಗಾಯತರ ಬೆಂಬಲವನ್ನು ನೆಚ್ಚಿಕೊಂಡಿರಲು ಸಾಧ್ಯವಿಲ್ಲ. ಪಕ್ಷದ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡರೆ ಸೋಲಿನ ಹೊಣೆಯನ್ನೂ ಹೊರಬೇಕಾಗುತ್ತದೆ. ಅಧಿಕಾರ ಇಲ್ಲ ಎಂದಾದ ಮೇಲೆ ಬೆಂಬಲಿಗ ಶಾಸಕರೂ ದೂರವಾಗುತ್ತಾರೆ. ತಮ್ಮ ಬಲ ಕುಂದುತ್ತದೆ. ಮತ್ತೊಂದು ಚುನಾವಣೆ ಬರುವಷ್ಟರಲ್ಲಿ ಸಂಪೂರ್ಣವಾಗಿ ಕಡೆಗಣಿಸಲ್ಪಡುತ್ತೇನೆ. ತಮ್ಮ ಮಕ್ಕಳ ಭವಿಷ್ಯಕ್ಕೂ ಕುತ್ತಾಗುತ್ತ. ಒಟ್ಟಾರೆ ರಾಜ್ಯದಲ್ಲಿ ತಾನು ನಗಣ್ಯವಾಗಿ ಬಿಡುತ್ತೇನೆ ಎನ್ನುವುದು ಬಿಎಸ್‌ವೈ ಲೆಕ್ಕಾಚಾರ. ಇದಕ್ಕಿಂತ ಹೆಚ್ಚು ಸುರಕ್ಷಿತ ಹಾದಿಯನ್ನು ಅವರು ಕಂಡುಕೊಂಡಂತೆ ಕಾಣುತ್ತದೆ.

ಸಿಬಿಐ ಕುಣಿಕೆಯಿಂದ ಪಾರಾಗುವುದು ಹೇಗೆ ಎಂಬ ಲೆಕ್ಕಾಚಾರದಲ್ಲಿ ತಲೆಕೆಡಿಸಿಕೊಂಡಿದ್ದ ಬಿಎಸ್‌ವೈಗೆ ಮುಂದಿನ ದಾರಿ ಗೋಚರಿಸಿದೆ. ಹೇಗಿದ್ದರೂ ಪ್ರಮುಖ ಲಿಂಗಾಯತ ಮಠಾಧೀಶರ ಬೆಂಬಲ ತನಗಿದೆ. ಎಂತಹ ಪರಿಸ್ಥಿತಿ ಎದುರಾದರೂ ಲಿಂಗಾಯತರಲ್ಲಿ ಬಹುದೊಡ್ಡ ವಿಭಾಗ ತನ್ನನ್ನು ಕೈಬಿಡುವುದಿಲ್ಲ ಎಂಬ ದೃಢವಾದ ನಂಬಿಕೆ ಅವರಲ್ಲಿದೆ. ಅದನ್ನೇ ಬಂಡವಾಳ ಮಾಡಿಕೊಂಡು ಸಿಬಿಐ ಕುಣಿಕೆಯಿಂದ ಪಾರಾಗಲು ವಾಮಮಾರ್ಗ ಹಿಡಿದು ಹೋಗಬಹುದು. ರೆಡ್ಡಿಗಳು ನ್ಯಾಯಾಧೀಶರಿಗೆ ಲಂಚ ನೀಡಲು ಹೋಗಿ ಸಿಕ್ಕಿಬಿದ್ದಂತೆ ತನಗಾಗದಿರಲು ಎಚ್ಚರಿಕೆ ವಹಿಸುವುದೂ ಅಗತ್ಯವಿದೆ. ಆದ್ದರಿಂದಲೇ ಬಿಎಸ್‌ವೈ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿಯವರನ್ನು ಮುಕ್ತಕಂಠದಿಂದ ಹೊಗಳಲಾರಂಭಿಸಿದ್ದು ಮಾತ್ರವಲ್ಲ ತನಗೊಬ್ಬನಿಗೆ ಮಾತ್ರ ಆಶೀರ್ವಾದ ಮಾಡುವ ಸಿದ್ಧಗಂಗಾ ಮಠಾಧೀಶರ ಸನ್ನಿಧಿಗೆ ಸೋನಿಯಾಗಾಂಧಿ ಬಂದು ಹೋಗಲು ಅವಕಾಶ ಕಲ್ಪಿಸಿದ್ದು !

'ಅನ್ನ ಹಳಸಿತ್ತು, ನಾಯಿ ಹಸಿದಿತ್ತು' ಎಂಬಂತೆ ಇದೆ ಪರಿಸ್ಥಿತಿ. ಇತ್ತ ಬಿಎಸ್‌ವೈ ಪರಿಸ್ಥಿತಿ ಹಳಸಿದೆ. ಅತ್ತ ಕಾಂಗ್ರೆಸ್‌ಗೆ ಅಧಿಕಾರದ ಹಸಿವು ಜೋರಾಗಿದೆ. ರಾಜ್ಯದ ಕಾಂಗ್ರೆಸ್‌ಗೆ ಒಂದು ವಿರೋಧ ಪಕ್ಷವಾಗಿಯೂ ಜನರ ಹಿತ ಕಾಪಾಡಲು ಸಾಧ್ಯವಾಗಲಿಲ್ಲ. ಆ ಕೆಲಸವನ್ನು ಆಗಾಗ ತನ್ನ ಸ್ವಂತ ಪಕ್ಷದ ಸರ್ಕಾರದ ವಿರುದ್ಧ ಗುಡುಗುವ ಮೂಲಕ ಬಿಎಸ್‌ವೈ ಅವರೇ ಮಾಡುತ್ತಾ ಬಂದಿದ್ದಾರೆ ! ಬಿಜೆಪಿ ಸರ್ಕಾರದ ವೈಫಲ್ಯಗಳನ್ನೇ ನಂಬಿಕೊಂಡು ಕುಳಿತಿರುವ ಕಾಂಗ್ರೆಸ್‌ಗೆ ಭ್ರಷ್ಟಾಚಾರದಂತಹ ಪ್ರಶ್ನೆಯನ್ನು ಎತ್ತಿಕೊಳ್ಳುವ ನೈತಿಕ ಶಕ್ತಿಯೂ ಇಲ್ಲದಂತಾಗಿದೆ. (ಕೇಂದ್ರದ) ತನ್ನ ತಟ್ಟೆಯಲ್ಲಿ ಕತ್ತೆ ಸತ್ತು ಬಿದ್ದಿರುವಾಗ ಬಿಜೆಪಿ ತಟ್ಟೆಯಲ್ಲಿ ಕೊಳೆಯುತ್ತಿರುವ ಹೆಗ್ಗಣವನ್ನು ಕುರಿತು ಬಾಯಿ ಬಿಚ್ಚುವಂತಿಲ್ಲ !

ಅಷ್ಟು ಮಾತ್ರವಲ್ಲ, ಪಕ್ಷದ ಆಂತರಿಕ ಒಗ್ಗಟ್ಟಿನ ವಿಷಯದಲ್ಲೂ ಕಾಂಗ್ರೆಸ್ ಬಿಜೆಪಿಗಿಂತ ಭಿನ್ನವಲ್ಲ. ಕಾಂಗ್ರೆಸ್ ಒಳಗೂ ಹಲವು ಗುಂಪುಗಳು. ಹಲವು ಮುಖ್ಯಮಂತ್ರಿ ಅಭ್ಯರ್ಥಿಗಳು!. ಒಬ್ಬರ ಕಾಲನ್ನೂ ಇನ್ನೊಬ್ಬರು ಎಳೆಯುವುದರಲ್ಲಿ ನಿಸ್ಸೀಮರು.

ಬಿಜೆಪಿಯಿಂದ ಈಗಾಗಲೇ ಒಂದು ಕಾಲು ಹೊರಗಿಟ್ಟಿರುವ ಬಿಎಸ್‌ವೈ ಇತ್ತ ವಾಲುತ್ತಿರುವುದನ್ನು ಗಮನಿಸಿದ ಕಾಂಗ್ರೆಸಿಗರು ತಡವಾಗಿಯಾದರೂ ಚುರುಕಾದಂತೆ ಕಾಣುತ್ತಿದ್ದಾರೆ. "ಹೇಗಾದರೂ ಈಗ ಚುನಾವಣಾ ಪೂರ್ವ ಮೈತ್ರಿಗೆ ಯಾರು ಸಿದ್ಧರಾಗುವುದಿಲ್ಲ. ನೀವು ಬಿಜೆಪಿಯಿಂದ ಹೊರಬಂದು ನಿಮ್ಮ ಸ್ವಂತ ಪಕ್ಷ ಕಟ್ಟುವುದಾದರೆ ನಾವು ನಿಮ್ಮೊಂದಿಗೆ ಇರುತ್ತೇವೆ. ಮುಂದಿನ ಚುನಾವಣೆಯಲ್ಲಿ ನೀವು ಅಧಿಕ ಸಂಖ್ಯೆಯಲ್ಲಿ ಸ್ಥಾನಗಳನ್ನು ಗೆದ್ದು ಬಂದದ್ದೇ ಆದಲ್ಲಿ ನಿಮ್ಮನ್ನೇ ಮುಖ್ಯಮಂತ್ರಿ ಮಾಡುತ್ತೇವೆ" ಎಂದು ಕೈ ಪಕ್ಷದವರು ಆಶ್ವಾಸನೆ ನೀಡುವ ಮೂಲಕ ಒಂದೇ ಏಟಿಗೆ ಎರಡು ಹಕ್ಕಿ ಹೊಡೆಯಲು ಹೊರಟ್ಟಿದ್ದಾರೆ.

ಈ ಕಾರಣಕ್ಕಾಗಿಯೇ ಕಾಂಗ್ರೆಸ್ ಹೈಕಮಾಂಡ್ ತರಾತುರಿಯಲ್ಲಿ ಕೇಂದ್ರ ವಿದೇಶಾಂಗ ಸಚಿವರಾಗಿದ್ದ ಅನುಭವಿ ವಯಸ್ಸಾಗಿದ್ದರೂ ಯುವಮುಖ ತೋರಬಲ್ಲ ಎಸ್.ಎಂ.ಕೃಷ್ಣರನ್ನೂ ರಾಜ್ಯ ರಾಜಕಾರಣಕ್ಕೆ ರಫ್ತು ಮಾಡಿದೆ. ಯಾಕೆಂದರೆ ಹಾಲಿ ಮುಖಂಡರಾದ ಸಿದ್ಧರಾಮಯ್ಯ ಮತ್ತು ಪರಮೇಶ್ವರ್ ಬಿಎಸ್‌ವೈ ಜೊತೆ ಕೈಜೋಡಿಸಲು ಅಷ್ಟು ಬೇಗ ಮುಂದೆ ಬರಲಾರರು. ಸಿದ್ಧರಾಮಯ್ಯ ಅವರ ಬಗ್ಗೆ ಕಾಂಗ್ರೆಸ್ ಹೈಕಮಾಂಡ್‌ಗೆ ಪೂರ್ಣಪ್ರಮಾಣದ ವಿಶ್ವಾಸ ಇಲ್ಲವೇ ಇಲ್ಲ. ಪರಮೇಶ್ವರ್ ಅವರಿಗೂ ಪಕ್ಷದೊಳಗೆ ಸಾಕಷ್ಟು ವಿರೋಧವಿದೆ. ಇವರಿಬ್ಬರ ನಡುವೆಯೂ ಹೊಂದಾಣಿಕೆ ಇಲ್ಲ. ಹೀಗಾದರೆ ಕೆಜೆಪಿ ಜೊತೆ ಅಧಿಕಾರ ಹಂಚಿಕೊಳ್ಳುವುದು ಕಷ್ಟವಾದಿತು. ಹೇಳಿಕೇಳಿ ಕೃಷ್ಣ, ಬಹು ಚಾಣಾಕ್ಷ. ಎಲ್ಲಾ ಪಕ್ಷಗಳೊಂದಿಗೂ ಸಂಪರ್ಕ ಇರುವವನು. ಒಂದು ವೇಳೆ ಚುನಾವಣೆಯ ನಂತರ ಬಿಎಸ್‌ವೈ ಜೊತೆ ಒಪ್ಪಂದ ಮಾಡಿಕೊಳ್ಳುವ ಪರಿಸ್ಥಿತಿ ಎದುರಾದರೆ ಅದಕ್ಕೆ ಸೂಕ್ತ ವ್ಯಕ್ತಿ ಎಸ್.ಎಂ.ಕೃಷ್ಣ ಎಂಬ ದೂರಾಲೋಚನೆಯಿಂದ ರಾಜ್ಯ ರಾಜಕಾರಣದಲ್ಲಿ ಕಾಣದ 'ಕೈ' ಕೆಲಸ ಆರಂಭಿಸಿದೆ. ●

ವಾರಕ್ಕೆ ಆರು ದಿನ ಕೆಲಸ ನೀಡಲು ಆಗ್ರಹಿಸಿ ಬೀಡಿ ಕಾರ್ಮಿಕರ ಪ್ರತಿಭಟನೆ


ಬೀಡಿ ಕಾರ್ಮಿಕರ ಸಂಘಟನೆಗಳ ಹೋರಾಟದಿಂದಾಗಿ ಕಳೆದ ಎಪ್ರಿಲ್ 1 ರಿಂದ ಬೀಡಿ ಕಾರ್ಮಿಕರಿಗೆ ಒಂದು ಸಾವಿರ ಬೀಡಿಗಳಿಗೆ ರೂ.116.20 ಕೂಲಿ ಸಿಗುವುದು ಸಾಧ್ಯವಾಗಿದೆ. ಆದರೆ ಬೀಡಿ ತಯಾರಿ ಕಂಪೆನಿಗಳ ಮಾಲಿಕರು ಕಳೆದ ಜೂನ್ ತಿಂಗಳಿಂದ ಕಾರ್ಮಿಕರಿಗೆ ವಾರದಲ್ಲಿ ಕೇವಲ ಮೂರು ದಿನ ಮಾತ್ರ ಕೆಲಸ ನೀಡುತ್ತಿದ್ದಾರೆ. ಇದರಿಂದ ಎಪ್ರಿಲ್ 1 ರಿಂದ ಜಾರಿಯಾದ ಕನಿಷ್ಠ ಕೂಲಿಯ ಮೂಲ ಉದ್ದೇಶಕ್ಕೆ ಕೊಡಲಿ ಏಟು ಬಿದ್ದಿದೆ - ಎಂಬುದಾಗಿ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ (ಸಿಐಟಿಯು) ಅಧ್ಯಕ್ಷ ಬಿ.ಮಾಧವ ಹೇಳಿದರು.

ವಾರದ ಆರು ದಿನವೂ ಕೆಲಸ ನೀಡಬೇಕು, ಕೆಲಸ ನೀಡದ ದಿನಗಳಿಗೆ ಕಾನೂನು ಪ್ರಕಾರ ಗ್ಯಾರಂಟೀಡ್ ವೇತನ ನೀಡಬೇಕು ಎಂದು ಆಗ್ರಹಿಸಿ ನವಂಬರ್ 8 ರಂದು ಮಂಗಳೂರಿನ ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ ಎದುರು ನಡೆದ ಬೀಡಿ ಕಾರ್ಮಿಕರ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಜೂನ್‌ವರೆಗೂ ವಾರದಲ್ಲಿ ಆರು ದಿನಗಳ ಕೆಲಸ ನೀಡುತ್ತಿದ್ದ ಬೀಡಿ ಮಾಲಕರು ಹಠಾತ್ತಾಗಿ ವಾರದಲ್ಲಿ ಮೂರು ದಿನಗಳಿಗಾಗುವಷ್ಟು ಮಾತ್ರ ಕಚ್ಚಾ ಸಾಮಾಗ್ರಿಯನ್ನು ನೀಡುತ್ತಿದ್ದಾರೆ. ಕನಿಷ್ಟ ಕೂಲಿ ಕುರಿತು ಅಧಿಸೂಚನೆ ಹೊರಡಿಸಿದ ಬಳಿಕ ಬೀಡಿ ಕಾರ್ಮಿಕರ ಸಂಬಳ ಶೇ.25 ರಷ್ಟು ಹೆಚ್ಚಳವಾಗಿದೆ. ಕೆಲಸ ಕಡಿತದ ಮೂಲಕ ಅದನ್ನು ಶೇ.50 ರಷ್ಟು ಕಡಿತಗೊಳಿಸುವ ಹುನ್ನಾರ ಬೀಡಿ ಕಂಪೆನಿ ಮಾಲಿಕರದ್ದು- ಎಂದು ಅವರು ಟೀಕಿಸಿದರು. ಬೀಡಿ ಕಾರ್ಮಿಕರು ಕನಿಷ್ಟ ಕೂಲಿ ಮತ್ತು ತುಟ್ಟಿಭತ್ತೆ ಕೇಳುವುದನ್ನು ತಡೆಯಲು ಹಿಂದೆ ಕೂಡಾ ಕೆಲಸ ಕಡಿತ ಮಾಡಿದ ಉದಾಹರಣೆಯನ್ನು ಎತ್ತಿ ತೋರಿಸುತ್ತಾ, 2003 ರಿಂದ 2006ರ ತನಕ ಏರಿಕೆಯಾದ ತುಟ್ಟಿಭತ್ತೆಯ ಕಂತುಗಳನ್ನು ನೀಡದೆ, ವಾರಕ್ಕೆ ಎರಡು ದಿನಗಳ ಕೆಲಸ ಮಾತ್ರ ನೀಡುತ್ತಿದ್ದರು ಎಂದು ಅವರು ನೆನಪಿಸಿದರು. 2006 ರಲ್ಲಿ ಕನಿಷ್ಟ ಕೂಲಿ ಪ್ರಕಟಣೆ ಬಂದ ನಂತರ ಇತ್ತೀಚಿನ ವರೆಗೆ ವಾರದ ಆರು ದಿನಗಳಿಗೆ ಬೇಕಾಗುವಷ್ಟು ಕೆಲಸ ಕೊಟ್ಟು ಈಗ ಹೊಸ ಕನಿಷ್ಟ ಕೂಲಿ ಬಂದ ಬಳಿಕ ಹಿಂದಿನ ಚಾಳಿಯನ್ನೇ ಮುಂದುವರೆಸಿದ್ದಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ದ.ಕ.ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ನಿನ ಅಧ್ಯಕ್ಷ ಬಿ.ಎಂ.ಭಟ್, ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ಉಪಾಧ್ಯಕ್ಷೆ ರಮಣಿ ಸಹ ಮಾತನಾಡಿದರು.



ಫೆಡರೇಶನ್ನಿನ ಜತೆ ಕಾರ್ಯದರ್ಶಿ ಸದಾಶಿವ ದಾಸ್, ಮುಖಂಡರಾದ ಯು.ಬಿ.ಲೋಕಯ್ಯ, ಪದ್ಮಾವತಿ ಶೆಟ್ಟಿ, ಬಾಬು ದೇವಾಡಿಗ, ಸಂಜೀವ ಬಂಗೇರ, ಜಯಂತ ನಾಯಕ್, ಗಂಗಯ್ಯ ಅಮೀನ್, ಜಯಂತಿ ಬಿ.ಶೆಟ್ಟಿ, ರಾಮಣ್ಣ ವಿಟ್ಲ, ಭಾರತಿ ಬೋಳಾರ, ಗಿರಿಜ ಮೂಡಬಿದ್ರೆ, ರಾಧ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಪ್ರತಿಭಟನಾಕಾರರು ಕಂಕನಾಡಿ ಮೈದಾನದಿಂದ ಮೆರವಣಿಗೆಯಲ್ಲಿ ಬಂದು ಬಳಿಕ ಸಹಾಯಕ ಕಾರ್ಮಿಕ ಆಯುಕ್ತರಿಗೆ ಮನವಿ ಸಲ್ಲಿಸಿದರು.



ವರದಿ : ವಾ.ಉ.

ಹೋಮ್ ಸ್ಟೇ ಪ್ರಕರಣ; ಪತ್ರಕರ್ತ ನವೀನ್ ಸೂರಿಂಜೆ ಬಂಧನ ವಿರೋಧಿಸಿ ಪ್ರತಿಭಟನೆಗಳು:

ಕಳೆದ ಜುಲಾಯಿ ತಿಂಗಳಲ್ಲಿ ನಡೆದ ಮಂಗಳೂರಿನ ಹೋಂ ಸ್ಟೇ ಮೇಲಿನ ದಾಳಿಯಲ್ಲಿ ಸಂಘ ಪರಿವಾರದ ಗೂಂಡಾಗಳ ಹೇಯ ಕೃತ್ಯಗಳು ಬಯಲಾಗಲು ಕಸ್ತೂರಿ ಟಿವಿ ವರದಿಗಾರ ನವೀನ್ ಸೂರಿಂಜೆ ದಾಳಿಯನ್ನು ಚಿತ್ರೀಕರಿಸಿ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರಗೊಳಿಸಿದ್ದೇ ಕಾರಣವಾಗಿತ್ತು. ರಾಷ್ಟ್ರಾದ್ಯಂತ ಸುದ್ದಿಯಾದ ಈ ಪ್ರಕರಣದಲ್ಲಿ ಸದ್ರಿ ಪತ್ರಕರ್ತರನ್ನು ಸಾಕ್ಷ್ಯವಾಗಿ ಬಳಸುವ ಬದಲು ಈಗಾಗಲೇ ಬಂಧಿಸಿದ ದಾಳಿಕೋರ 28 ಮಂದಿಯೊಂದಿಗೆ ಮತ್ತೊಬ್ಬ ಆರೋಪಿಯಾಗಿ ಮಂಗಳೂರು ಪೋಲೀಸರು ಪ್ರಕರಣ ದಾಖಲಿಸಿದ್ದು, ಆತನನ್ನು ಪೋಲೀಸರು ನವಂಬರ್ 7 ರಂದು ರಾತ್ರಿ ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು ನ್ಯಾಯಾಧೀಶರು ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರೆ. ಸಂಘಪರಿವಾರ ನಿರ್ದೇಶಿತ ರಾಜ್ಯ ಸರ್ಕಾರದ ಕುಮ್ಮಕ್ಕೇ ಇದಕ್ಕೆ ಕಾರಣವಲ್ಲದೆ ಬೇರೇನೂ ಅಲ್ಲ. ನವೀನ ಸೂರಿಂಜೆ ಮೇಲಿನ ಪ್ರಕರಣವನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ ನವಂಬರ್ 8 ರಂದು ಕರಾವಳಿ ಜಿಲ್ಲೆಗಳಲ್ಲಿ ಜನಪರ ಸಂಘಟನೆಗಳು ಹಾಗೂ ಪತ್ರಕರ್ತರ ಸಂಘಟನೆಗಳು ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದವು. ದ.ಕ.ಜಿಲ್ಲಾ ಸೆಕ್ಯುಲರ್ ನಾಗರಿಕರ ಸಂಘಟನೆಯಾದ ಕರಾವಳಿ ಸೌಹಾರ್ದ ಸಂಘರ್ಷ ಸಮಿತಿಯೂ ನವಂಬರ್ 13 ರಂದು ಪ್ರತಿಭಟನೆ ನಡೆಸಿದೆ.

ಸಮಾನ ಮನಸ್ಕ ಸಂಘಟನೆಗಳ ಪ್ರತಿಭಟನೆಯಲ್ಲಿ ವಿಚಾರವಾದಿ ನರೇಂದ್ರ ನಾಯಕ್:

ದ.ಕ.ಜಿಲ್ಲಾಧಿಕಾರಿ ಕಚೇರಿ ನವಂಬರ್ 8 ರಂದು ಸಮಾನ ಮನಸ್ಕ ಸಂಘಟನೆಗಳು ಪ್ರತಿಭಟನಾ ಪ್ರದರ್ಶನ ನಡೆಸಿದವು. ಡಿವೈಎಫ್ಐ, ಎಸ್ಎಫ್ಐ, ವಿಚಾರವಾದಿ ಸಂಘ, ಎಐವೈಎಫ್, ಯುವ ಜನತಾದಳ, ಮಂಗಳೂರು ಸಿಟಿಜನ್ಸ್ ಪೋರಮ್ ಜಂಟಿಯಾಗಿ ಏರ್ಪಡಿಸಿದ್ದ ದಿಢೀರ್ ಪ್ರತಿಭಟನೆಯಲ್ಲಿ ಇನ್ನೂರೈವತ್ತರಷ್ಟು ಮಂದಿ ಭಾಗವಹಿಸಿದ್ದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಖ್ಯಾತ ವಿಚಾರವಾದಿ ನರೇಂದ್ರ ನಾಯಕ್, ಅಧಿಕಾರ ಶಾಶ್ವತ ಎಂಬ ಭ್ರಮೆಯಲ್ಲಿರುವ ಬಿಜೆಪಿಯವರು ತಮಗೆ ಪೂರಕವಲ್ಲದ ವರದಿ ಮಾಡುವವರನ್ನು ಮುಗಿಸುವ ಕೆಲಸ ಮಾಡುತ್ತಿದ್ದಾರೆ. ಬಿಜೆಪಿಯವರು ಒಂದು ಧ್ವನಿಯನ್ನು ಅಡಗಿಸಲು ಪ್ರಯತ್ನಿಸಿದರೆ ಕೋಟ್ಯಾಂತರ ಧ್ವನಿಗಳು ಬೀದಿ ಬೀದಿಯಲ್ಲಿ ಏಳುತ್ತವೆ. ಆಗ ಇವರೇನು ಮಾಡುತ್ತಾರೆ ಎಂದು ಪ್ರಶ್ನಿಸಿದರು.

ಪ್ರತಿಭಟನೆಯನ್ನು ಸಂಯೋಜಿಸಿದ ಡಿವೈಎಫ್ಐ ದ.ಕ.ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಎಐವೈಎಫ್‌ನ ಸೀತರಾಮ್ ಬೇರಿಂಜೆ. ಜನತಾದಳದ ಎಂ.ಜಿ.ಹೆಗಡೆ, ಸಾಮಾಜಿಕ ಕಾರ್ಯಕರ್ತ ನಟೇಶ್ ಉಳ್ಳಾಲ್, ದಲಿತ ಸಂಘರ್ಷ ಸಮಿತಿಯ ಎಸ್‌ಪಿ ಆನಂದ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು.

ಕರಾವಳಿ ಸೌಹಾರ್ದ ಸಂಘರ್ಷ ಸಮಿತಿಯಿಂದ ಮಂಗಳೂರಿನಲ್ಲಿ ಪ್ರತಿಭಟನೆ:

"ಸೌಹಾರ್ದಕ್ಕಾಗಿ ಸಂಘರ್ಷ" ಎಂಬ ಘೋಷಣೆಯಡಿ ಸಮಾನ ಮನಸ್ಕ ನಾಗರಿಕರೂ, ಸಾಹಿತಿ ಬುದ್ಧಿಜೀವಿಗಳೂ ನೇತೃತ್ವ ವಹಿಸಿರುವ 'ಕರಾವಳಿ ಸೌಹಾರ್ದ ಸಂಘರ್ಷ ಸಮಿತಿ' ಕಳೆದ ಆಗಸ್ಟ್ ತಿಂಗಳ ಕೊನೆಯಲ್ಲಿ ಹೋಂ ಸ್ಟೇ ಪ್ರಕರಣದ ಹಿನ್ನೆಲೆಯಲ್ಲಿ ರೂಪುಗೊಂಡಿದ್ದು, ಈಗಾಗಲೇ ಸೆಪ್ಟೆಂಬರ್ 4 ರಂದು ಹೋಂ ಸ್ಟೇ ದಾಳಿಯನ್ನು ಖಂಡಿಸಿ ಒಂದು ಬೃಹತ್ ಪ್ರತಿಭಟನಾ ಪ್ರದರ್ಶನವನ್ನು ನಡೆಸಿತ್ತು.

ನವಂಬರ್ 13 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು, ನವೀನ್ ಸೂರಿಂಜೆ ಬಂಧನವನ್ನು ಖಂಡಿಸಿ ಸಮಿತಿಯು ಪ್ರತಿಭಟನಾ



ಪ್ರದರ್ಶನವನ್ನು ಏರ್ಪಡಿಸಿತ್ತು. ದೀಪಾವಳಿ ಹಬ್ಬದ ವಾತಾವರಣದ ಮಧ್ಯೆಯೂ ಮುನ್ನೂರರಷ್ಟು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಸಭೆಯನ್ನುದ್ದೇಶಿಸಿ ಸಮಿತಿಯ ಪ್ರಧಾನ ಕಾರ್ಯದರ್ಶಿ ಬಿ.ಮಾಧವ, ಉಳ್ಳಾಲ ಕ್ಷೇತ್ರದ ಶಾಸಕ ಯು.ಟಿ.ಖಾದರ್, ಎಂ.ಜಿ.ಹೆಗ್ಡೆ, ಪಿ.ಸಂಜೀವ, ಸಮಿತಿ ಅಧ್ಯಕ್ಷ ಹಾಗೂ ಬಂಟ್ವಾಳದ ಶಾಸಕ ಬಿ.ರಮಾನಾಥ ರೈ, ಸಮಿತಿಯ ಖಜಾಂಚಿ ಯಾದವ ಶೆಟ್ಟಿ ಮಾತನಾಡಿದರು. ಖ್ಯಾತ ಸಾಹಿತಿ ಸಾರಾ ಅಬೂಬಾಕರ್, ಸಾಮಾಜಿಕ ಚಿಂತಕರಾದ ಪ್ರೊ.ರೀಟಾ ನೊರೊನ್ಹಾ, ಪ್ರಗತಿಪರ ಚಿಂತಕರ ವೇದಿಕೆ ಅಧ್ಯಕ್ಷ ಐ.ವಿ.ಪ್ರಸನ್ನ ಕೂಡಾ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಿ.ಮಾಧವ ಅವರು ಮಾತನಾಡುತ್ತಾ, ಪೋಲೀಸರು ಪತ್ರಕರ್ತ ನವೀನ್ ಸೂರಿಂಜೆ ಅವರ ಮೇಲೆ ದರೋಡೆ, ದಂಗೆಗೆ ಪ್ರಚೋದನೆ, ಕಾನೂನು ಬಾಹಿರ ಗುಂಪುಗೂಡುವಿಕೆ ಇತ್ಯಾದಿ ಆರೋಪ ದಾಖಲಿಸಿದ್ದಾರೆ. ಪತ್ರಕರ್ತನ ಧರ್ಮಕ್ಕೆ ತಕ್ಕಂತೆ ದಾಳಿಯನ್ನು ಚಿತ್ರೀಕರಿಸಿದ ನವೀನ್ ಮೇಲೆ ದಾಳಿಕೋರರ ಮೇಲೆ ದಾಖಲಿಸಿದ ಪ್ರಕರಣಗಳನ್ನೇ ಆರೋಪಿಸಿ ದಾಖಲಿಸಿ ಪೋಲೀಸರು ಪತ್ರಕರ್ತನನ್ನು ದರೋಡೆಕೋರ, ದಂಗೆಕೋರನೆಂಬಂತೆ ಸುಳ್ಳಾಗಿ ನಿರೂಪಿಸಿದ್ದಾರೆ ಎಂದು ತೀವ್ರವಾಗಿ ಖಂಡಿಸಿದರು. ಇಂಥ ಫ್ಯಾಸಿಸ್ಟ್ ಆಡಳಿತ ಇನ್ನೂ ಮುಂದುವರಿದರೆ ನಾವು ನಮ್ಮ ಪ್ರಜಾಪ್ರಭುತ್ವದ ಹಕ್ಕುಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು. ನವೀನ್ ಸೂರಿಂಜೆ ಮೇಲಿನ ಪ್ರಕರಣವನ್ನು ಕೈಬಿಡಬೇಕು; ಅವರನ್ನು ಸದ್ರಿ ಪ್ರಕರಣದಲ್ಲಿ ಸಾಕ್ಷಿಯಾಗಿ ಬಳಸಿಕೊಳ್ಳಬೇಕು, ನವೀನ್‌ರ ಮೇಲೆ ಅಸಂಬದ್ಧ ಆರೋಪಗಳನ್ನು ಹೊರಿಸಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂಬುದಾಗಿ ಅವರು ಆಗ್ರಹಿಸಿದರು. ನವೀನ್‌ರನ್ನು ಬಂಧಿಸಿದ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರದ ಘೋಷಣೆಗಳು ತೀವ್ರವಾಗಿ ಮೊಳಗಿದವು.

ಕನ್ನಡ ವಾರಪತ್ರಿಕೆ

ರಾಜ್ಯ ಬಿಜೆಪಿ ಸರಕಾರ ಹಾಗೂ ಕೇಂದ್ರ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರದ

ಭ್ರಷ್ಟ ಹಾಗೂ ಬಹುರಾಷ್ಟ್ರೀಯ ಕಂಪೆನಿಗಳ ಪರವಾದ ದುರಾಡಳಿತ ವಿರೋಧಿಸಿ ಕೃಷಿ - ಚಿಲ್ಲರೆ ವ್ಯಾಪಾರ ಸಂರಕ್ಷಿಸಲು, ಕಾರ್ಮಿಕರ ಹಕ್ಕು - ಶಾಶ್ವತ ನೀರಾವರಿಗಾಗಿ ಒತ್ತಾಯಿಸಿ

ಡಿಸೆಂಬರ್ 11, 2012ರಂದು ಬೆಂಗಳೂರಿನಲ್ಲಿ

ರಾಜ್ಯ ಮಟ್ಟದ ಬೃಹತ್ ರಾಜಕೀಯ ಸಮಾವೇಶ

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಕರ್ನಾಟಕ ರಾಜ್ಯ ಸಮಿತಿಯು ರಾಜ್ಯ ಹಾಗೂ ಕೇಂದ್ರ ಸರಕಾರಗಳ ಅತ್ಯಂತ ಭ್ರಷ್ಟ ಹಾಗೂ ಜನ ವಿರೋಧಿ ದುರಾಡಳಿತದ ವಿರುದ್ದ ಜನಾಂದೋಲನ ನಡೆಸಲು ನಿರ್ಧರಿಸಿದೆ. ಇದರ ಭಾಗವಾಗಿ ರಾಜ್ಯದಾದ್ಯಂತ ಎಲ್ಲಾ ತಾಲ್ಲೂಕುಗಳಲ್ಲಿ ಜನ ಜಾಗೃತಿ ಪ್ರಚಾರ ಜಾಥಾಗಳನ್ನು ಹಾಗೂ ಅದೇ ರೀತಿ ರಾಜ್ಯದ ಎರಡು ಐತಿಹಾಸಿಕ ಕೇಂದ್ರಗಳಾದ ಬಸವಕಲ್ಯಾಣ ಹಾಗೂ ರಾಮದುರ್ಗದಿಂದ ಬೆಂಗಳೂರಿಗೆ ನವೆಂಬರ್ 18ರಿಂದ ಡಿಸೆಂಬರ್ 04ರವರೆಗೆ ರಾಜ್ಯ ಮಟ್ಟದ ಜಾಥಾಗಳನ್ನು ಸಂಘಟಿಸಲಾಗಿದೆ. ಡಿಸೆಂಬರ್ 11ರಂದು ಬೆಂಗಳೂರಿನಲ್ಲಿ ಬೃಹತ್ ರಾಜಕೀಯ ಸಮಾವೇಶ ನಡೆಯಲಿದ್ದು ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕರಾಟ್ ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಒಂದು ಲೇಖನ.

ಬ್ರಹ್ಮಾಂಡ ಭ್ರಷ್ಟತೆಯ ಬಿಜೆಪಿ ಸರ್ಕಾರ

ಕರ್ನಾಟಕ ರಾಜ್ಯವನ್ನು ರಾಜ್ಯದ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಭ್ರಷ್ಟಾಚಾರದಲ್ಲಿ ಭಾರತದ ನಂ. 1 ಸ್ಥಾನಕ್ಕೇರಿಸಿದ ಕೀರ್ತಿ ಬಿಜೆಪಿ ಸರ್ಕಾರಕ್ಕೆ ಸಲ್ಲುತ್ತದೆ. ಮಾತ್ರವಲ್ಲ ಮುಖ್ಯಮಂತ್ರಿಯೂ ಸೇರಿದಂತೆ ಹಲವಾರು ಮಂತ್ರಿಗಳು, ಶಾಸಕರು, ನೂರಾರು ರಾಜಕಾರಣಿಗಳು, 700ಕ್ಕೂ ಹೆಚ್ಚು ಅಧಿಕಾರಿಗಳು ಶಾಮಿಲಾಗಿ ರಾಜ್ಯದಾದ್ಯಂತ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿ ರಾಜ್ಯದ ಬೊಕ್ಕಸಕ್ಕೆ 16 ಸಾವಿರ ಕೋಟಿ ರೂ. ನಷ್ಟವುಂಟು ಮಾಡಿದ್ದಾರೆಂದು ಲೋಕಾಯುಕ್ತ ತನಿಖಾ ವರದಿ ಬಯಲುಗೊಳಿಸಿದೆ. ಲಕ್ಷಾಂತರ ಕೋಟಿ ರೂ. ಮೌಲ್ಯದ ಗಣಿ ಲೂಟಿಯ ಹಗರಣವು ಇತಿಹಾಸದಲ್ಲಿಯೇ ಅತಿದೊಡ್ಡ ಭ್ರಷ್ಟಾಚಾರವಾಗಿದೆ. ಈ ಕಾರಣದಿಂದಲೇ ಮಾಜಿ ಮಂತ್ರಿ ಜನಾರ್ಧನರೆಡ್ಡಿ ಕಳೆದ ಒಂದು ವರ್ಷದಿಂದ ಜೈಲಿನಲ್ಲಿದ್ದಾರೆ. ಅಷ್ಟು ಮಾತ್ರವೇ ಅಲ್ಲ, ಭೂಹಗರಣದಲ್ಲಿ ಸ್ವತಃ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಜೈಲುವಾಸ ಅನುಭವಿಸಬೇಕಾಯಿತು. ಇಂತಹದೇ ಪ್ರಶ್ನೆಯ ಮೇಲೆ ಮಂತ್ರಿಗಳಾಗಿದ್ದ ಕಟ್ಟಾ ಸುಬ್ರಮಣ್ಯನಾಯ್ಡು, ಕೃಷ್ಣಯ್ಯ ಶೆಟ್ಟಿ, ಮುಂತಾದವರು ಜೈಲು ಸೇರಬೇಕಾಯಿತು. ಮಾತ್ರವಲ್ಲ, ವಿಶ್ವ ಬಂಡವಾಳ ಹೂಡಿಕೆಯ ಹೆಸರಿನಲ್ಲಿ ಹಲವು ಭೂ ಹಗರಣಗಳು ಬೆಳಕಿಗೆ ಬಂದಿದ್ದು ಇನ್ನೂ ಹಲವು ಮಂತ್ರಿ ಮಹೋದಯರುಗಳು ಜೈಲಿಗೆ ತೆರಳುವ ಹಂತದಲ್ಲಿದ್ದಾರೆ.

ಭ್ರಷ್ಟತೆಯ ವಿರಾಟ ರೂಪ ಕಾಂಗ್ರೇಸ್ ನೇತೃತ್ವದ ಯುಪಿಎ ಕೇಂದ್ರ ಸರ್ಕಾರ :



ಭ್ರಷ್ಟಾಚಾರ ಬ್ರಹ್ಮಾಂಡವೇ ಬಿಜೆಪಿ ರಾಜ್ಯ ಸರ್ಕಾರದ್ದಾಗಿದ್ದರೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಭ್ರಷ್ಟತೆಯ ವಿರಾಟ ರೂಪಿಯಾಗಿದ್ದು ಒಂದನ್ನೊಂದು ಮೀರಿಸುವ ಪೈಪೋಟಿಯಲ್ಲಿವೆ.

2ಜಿ ಸ್ಪೆಕ್ಟ್ರಂ ಹಗರಣದಲ್ಲಿ ಭಾರತ ಸರ್ಕಾರದ ಬೊಕ್ಕಸಕ್ಕೆ ಸುಮಾರು 1 ಲಕ್ಷ 75 ಸಾವಿರ ಕೋಟಿಯಷ್ಟು ನಷ್ಟ ಉಂಟು ಮಾಡಿ ಖಾಸಗಿ ಕಂಪನಿಗಳಿಗೆ ಲಾಭ ಮಾಡಿಕೊಡಲಾದ ಅಪರಾಧಕ್ಕಾಗಿ ಕೇಂದ್ರದ ಮಾಜಿ ಮಂತ್ರಿ ಎ. ರಾಜಾ 2 ವರ್ಷಗಳಷ್ಟು ಸುದೀರ್ಘ ಕಾಲ ಜೈಲುವಾಸ ಅನುಭವಿಸಬೇಕಾಯ್ತು. ಅದೇ ರೀತಿ ಇತ್ತೀಚಿಗೆ ಪ್ರಧಾನ ಮಂತ್ರಿಯೂ ಸೇರಿದಂತೆ ಕಲ್ಲಿದ್ದಲು ಗಣಿ ಹಗರಣದಲ್ಲಿ ಕೇಂದ್ರ ಸರ್ಕಾರದ ಬೊಕ್ಕಸಕ್ಕೆ 1 ಲಕ್ಷ 80 ಸಾವಿರ ಕೋಟಿ ನಷ್ಟವುಂಟು ಮಾಡಿ ಖಾಸಗಿ ಕಂಪನಿಗಳಿಗೆ ಲಾಭ ಮಾಡಿಕೊಡಲಾಗಿದೆ ಎಂದು ಸಿಎಜಿ ಹೇಳಿದೆ. ಇಷ್ಟು ಮಾತ್ರವೇ ಅಲ್ಲಾ ಕಾಮನ್‌ವೆಲ್ತ್ ಗೇಮ್ಸ್ ಹಗರಣದಲ್ಲಿ 75 ಸಾವಿರ ಕೋಟಿ ನಷ್ಟವಾಗಿದ್ದು ಒಬ್ಬ ಕಾಂಗ್ರೆಸ್ ಸಂಸತ್ ಸದಸ್ಯ ಜೈಲು ಕಂಡು ಬಂದಿದ್ದಾರೆ. ಇದಲ್ಲದೇ, ಆದರ್ಶ ಹೌಸಿಂಗ್ ಸೊಸೈಟಿ, ಐಪಿಎಲ್ ಕ್ರಿಕೆಟ್ ಹಗರಣ, ಇನ್ನೂ ಹಲವು ಸಾವಿರ ಕೋಟಿ ರೂ. ಹಗರಣಗಳು ಸೇರಿದ್ದು, ಕಾಂಗ್ರೆಸ್ ಮುಖಂಡರಾದ ಸ್ವತಃ ಸೋನಿಯಾಗಾಂಧಿರವರ ಅಳಿಯ ರಾಬರ್ಟ್ ವಾದ್ರಾನ ಹಗರಣಗಳೂ ಬಯಲಿಗೆ ಬಂದಿವೆ.

ಸಿಪಿಐ(ಎಂ) ನಿರಂತರ 32 ವರ್ಷಗಳ ಕಾಲ ಪಶ್ಚಿಮ ಬಂಗಾಳದಲ್ಲಿ ಎಡರಂಗದ ಸರ್ಕಾರ ಮಾಡಿದ್ದರೂ 20 ವರ್ಷಗಳ ಕಾಲ ನಿರಂತರವಾಗಿ ತ್ರಿಪುರ ರಾಜ್ಯದಲ್ಲಿ ಸರ್ಕಾರ ನಡೆಸುತ್ತಿದ್ದರೂ, ಹಲವು ಬಾರಿ ಕೇರಳದಲ್ಲಿ ರಾಜ್ಯ ಸರ್ಕಾರ ನಡೆಸಿದ್ದರೂ ಒಂದೇ ಒಂದು ಭ್ರಷ್ಟಾಚಾರದ ಆರೋಪಕ್ಕೆ ಒಳಗಾಗಲಿಲ್ಲ. ಒಬ್ಬನೇ ಒಬ್ಬ ಮುಖ್ಯಮಂತ್ರಿಯಾಗಲಿ ಸಿಪಿಐ(ಎಂ) ಮುಖಂಡನಾಗಲೀ, ಭ್ರಷ್ಟಾಚಾರದಲ್ಲಿ ಪಾಲ್ಗೊಳ್ಳಲಿಲ್ಲವೆಂಬುದು ಸಿಪಿಐ(ಎಂ) ಹೆಗ್ಗಳಿಕೆ ಮಾತ್ರವಲ್ಲ ಅದು ಜನಪರ ಆಡಳಿತದ ಪ್ರತೀಕವಾಗಿದೆ. ಮಾತ್ರವಲ್ಲ ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಸಿಪಿಐ(ಎಂ) ಪಾರ್ಲಿಮೆಂಟ್-ವಿಧಾನಸಭೆ ಒಳಗಡೆ ಮತ್ತು ಹೊರಗಡೆ ಕೂಡಾ ಮಂಚೂಣಿಯಲ್ಲಿದೆ.

ಜನವಿರೋಧಿ ಹಾಗೂ ಬಹುರಾಷ್ಟ್ರೀಯ ಕಂಪೆನಿಗಳ ಲೂಟಿಯ ಪರವಾದ ಆಡಳಿತಗಳು :

ಕರ್ನಾಟಕ ರಾಜ್ಯದಲ್ಲಿ ಹಾಗೂ ಇಡೀ ದೇಶದಲ್ಲಿ ಕೃಷಿರಂಗ ಆಳವಾದ ಬಿಕ್ಕಟ್ಟಿನಲ್ಲಿದೆ. ರೈತರು ದೊಡ್ಡ ರೀತಿಯ ಸಾಲದ ಬಲೆಯಲ್ಲಿ ಸಿಲುಕಿಕೊಂಡು ಅದರಿಂದ ಹೊರಬರಲಾಗದೇ ಕಳೆದ 15 ವರ್ಷಗಳಲ್ಲಿ 03 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲಿಯೂ ಬಿಜೆಪಿ ಸರ್ಕಾರದ ಈ ಅವಧಿಯಲ್ಲಿ ಸಾವಿರ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೇಂದ್ರ-ರಾಜ್ಯ ಸರ್ಕಾರಗಳ, ಬೀಜ-ಗೊಬ್ಬರ-ಕ್ರಿಮಿನಾಶಕಗಳ ಮೇಲಿನ ಸಬ್ಸಿಡಿಗಳನ್ನು ಸಿಪಿಐ(ಎಂ) ಹೆಚ್ಚಿಸಬೇಕೆಂದರೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅವುಗಳನ್ನು ವಾಪಾಸು ಪಡೆದಿವೆ. ಕಾಳಸಂತೆಕೋರರು ಕೃತಕವಾಗಿ ಅಭಾವ ಸೃಷ್ಟಿಸಿ ವಿಪರೀತ ಬೆಲೆ ಏರಿಸಿ ಮಾರಾಟ ಮಾಡುವುದನ್ನು ತಡೆಯಬೇಕೆಂದು ಸಿಪಿಐ(ಎಂ) ಕೇಳಿದರೆ ಅದನ್ನು ತಡೆಯುವ ಬದಲು ಲೂಟಿಕೋರರ ಪರವಾಗಿ ಸರ್ಕಾರಗಳು ನಿಲ್ಲುತ್ತಿವೆ. ಹಸಿರು ಶಾಲು ಹೊದ್ದುಕೊಂಡು ರೈತರ ಹೆಸರ್ಲೇಳಿ ಪ್ರಮಾಣ ವಚನ ಸ್ವೀಕರಿಸಿದ ಯಡಿಯೂರಪ್ಪನವರು 20 ದಿನ ಕಳೆಯುವುದರೊಳಗೆ ಗೊಬ್ಬರ ಕೇಳಿದ ಹಾವೇರಿ ರೈತರ ಮೇಲೆ ಲಾಠಿ ಪ್ರಹಾರ ಗೋಲಿಬಾರ್ ಮಾಡಿಸುತ್ತಾರೆ/ ತನ್ನ ಪಕ್ಷದ ಕಾರ್ಯಕರ್ತನಾದ, ಲಿಂಗಾಯತ ಜನಸಮುದಾಯಕ್ಕೆ ಸೇರಿದ ಸಿದ್ಧಲಿಂಗಪ್ಪ ಚೂರಿ ಎಂಬ ರೈತನನ್ನು ಗೋಲಿಬಾರ್‌ನಲ್ಲಿ ಕೊಂದು ಹಾಕುತ್ತಾರೆ.

ಬ್ಯಾಂಕುಗಳು ಸಾಲ ನೀಡುತ್ತಿಲ್ಲ. ಸಾಲಗಾರ ರೈತನಿಗೆ ಖಾಸಗಿ ಲೇವಾದೇವಿಗಾರರು ಹೊಸ ಸಾಲ ನೀಡುತ್ತಿಲ್ಲ. ಅದೇ ಸಂದರ್ಭದಲ್ಲಿ ಬೆಳೆದ ಬೆಳೆಗೆ ಬೆಲೆ ಸಿಗುತ್ತಿಲ್ಲ. ಈಗ ರಾಜ್ಯದ ಹೈದ್ರಾಬಾದ್-ಕರ್ನಾಟಕ ಪ್ರದೇಶದ ತೊಗರಿ ಬೆಳೆಗಾರರು 3,000 ರೂ.ಗಳಿಗೆ ಕ್ವಿಂಟಲ್‌ನಂತೆ ಆಮದಾದ 7 ಲಕ್ಷದಷ್ಟು ತೊಗರಿ ಬೆಳೆಯಿಂದ ಭಾರಿ ಆತಂಕಕ್ಕೀಡಾಗಿದ್ದಾರೆ. ಅವರು ಮಾತ್ರವೇ ಅಲ್ಲ, ಕರ್ನಾಟಕದ ಭಾರೀ ರೇಷ್ಮೆ ಬೆಳೆಗಾರರು, ಆಮದು ರೇಷ್ಮೆಯಿಂದ ನಾಶದ ಭೀತಿಯಲ್ಲಿದ್ದಾರೆ. ಅನಿಯಂತ್ರಿತ ಸಕ್ಕರೆಯಿಂದ ಕಬ್ಬು ಬೆಳೆಗಾರರು ಅಲ್ಲದೇ ತೊಗರಿಬೆಳೆ, ರೇಷ್ಮೆ, ಸಕ್ಕರೆ ಉದ್ದಿಮೆದಾರರು-ವ್ಯಾಪಾರಿಗಳು-ಕಾರ್ಮಿಕರು ಭಾರೀ ಭೀತಿಯಲ್ಲಿದ್ದಾರೆ. ಆಮದಾಗುವ ವಸ್ತುಗಳ ಮೇಲೆ ಸಾಕಷ್ಟು ಸುಂಕ ಹಾಕಲು ಅವಕಾಶವಿದ್ದು ಅದನ್ನು ಹಾಕಿ-ರೈತರನ್ನೂ, ಉದ್ದಿಮೆಗಳನ್ನು ಸಂರಕ್ಷಿಸಬೇಕೆಂದು ಸಿಪಿಐ(ಎಂ) ಹೋರಾಟ ನಡೆಸುತ್ತಿದ್ದರೂ ಆ ಬಗ್ಗೆ ಬಿಜೆಪಿ-ಕಾಂಗ್ರೆಸ್ ಕ್ರಮವಹಿಸುತ್ತಿಲ್ಲ. ವ್ಯವಸಾಯವನ್ನೂ ಉದ್ದಿಮೆಗಳನ್ನು ನಾಶ ಮಾಡಲು ಕೇಂದ್ರ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ವಿದೇಶಿ ಬಂಡವಾಳಗಾರರಿಗೆ ಮಾರುಕಟ್ಟೆ ಹಿಡಿಯಲು ಅವಕಾಶ ನೀಡುತ್ತಿದ್ದರೇ, ರಾಜ್ಯ ಬಿಜೆಪಿ ಸರ್ಕಾರ ಜಾಣ ಕುರುಡುತನ ಪ್ರದರ್ಶಿಸುತ್ತಿದೆ. ಬೆಂಬಲಿಸುತ್ತಿದೆ. ರೈತರ ನೆರವಿಗೆ ಬರುತ್ತಿಲ್ಲ.

ಇದೀಗ ಕಾಂಗ್ರೆಸ್ - ಬಿಜೆಪಿಯ ಎರಡು ಸರ್ಕಾರಗಳು ಸಂಕಷ್ಟದಲ್ಲಿರುವ ರೈತರನ್ನೂ ಕೂಲಿಕಾರರನ್ನೂ ವ್ಯವಸಾಯದಿಂದಲೇ ಹೊರಗೆ ದೂಡುವ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಮೂಲಕ ವ್ಯವಸಾಯ ಮಾಡಿಸುವ ಕೆಲಸಕ್ಕೆ ಮುಂದಾಗಿವೆ. ಕೇಂದ್ರ ಸರ್ಕಾರ ಕಂಪನಿ ಕೃಷಿ-ಗುತ್ತಿಗೆ ಕೃಷಿ-ಕೃಷಿ ಉತ್ಪನ್ನಗಳ ಮುಂಗಡ ವ್ಯಾಪಾರಕ್ಕೆ ಬಹುರಾಷ್ಟ್ರೀಯ ಕಂಪನಿಗಳಿಗೆ ಅವಕಾಶ ಮಾಡಿದೆ. ಮಾರುಕಟ್ಟೆಗಳ ನಾಶಕ್ಕೆ ಮುಂದಾಗುತ್ತಿದೆ. ಬೆಂಬಲ ಬೆಲೆಗೆ ಖರೀದಿಸುವ ನೀತಿಯನ್ನು ಕೈಬಿಟ್ಟಿದೆ. ಮಾತ್ರವಲ್ಲ, ಚಿಲ್ಲರೆ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ಸಾವಿರಾರು ಕೋಟಿ ಬಂಡವಾಳ ಹೂಡಲು ಅವಕಾಶ ನೀಡಿ ಅವರ ಲೂಟಿಗೆ ಮಾರುಕಟ್ಟೆ

ಪುಟ 6 ಕ್ಕೆ

ರಾಜಕೀಯ ಸಮಾವೇಶ....

ಪುಟ 5 ರಿಂದ.

ಒದಗಿಸಲು ನ್ಯಾಯಬೆಲೆ ಅಂಗಡಿಗಳನ್ನು ತೆಗೆದು ಹಾಕಲು ಮುಂದಾಗುತ್ತಿದೆ. ಬಡವರಿಗೆ ಸಬ್ಸಿಡಿಹಣ ನೀಡಿ ಕೈತೊಳೆದುಕೊಳ್ಳಲು ಮುಂದಾಗುತ್ತಿದೆ. ಬಿಜೆಪಿಯ ರಾಜ್ಯ ಸರ್ಕಾರ ಜೊತೆಯಲ್ಲಿ ನಿಂತಿದೆ. ಇದೆಲ್ಲವನ್ನೂ ರಾಜ್ಯದಲ್ಲಿ ಜಾರಿಗೆ ತರಲು ತುದಿಗಾಲ ಮೇಲೆ ನಿಂತಿದೆ.

ಒಂದೆಡೆ ವ್ಯವಸಾಯವನ್ನೇ ರೈತ-ಕೂಲಿಕಾರರಿಂದ ಕ[illegible] ಕುಟುಂಬಗಳನ್ನು ಬೀದಿಗೆ ತಳ್ಳಿದರೇ, ಮತ್ತೊಂದೆಡೆ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿದ 05 ಕೋಟಿಗೂ ಅಧಿಕ ಕುಟುಂಬಗಳನ್ನು (ಕರ್ನಾಟಕ ರಾಜ್ಯದಲ್ಲಿ 1 ಕೋಟಿಯಷ್ಟು ಜನರನ್ನು) ಬೀದಿಗೆ ತಳ್ಳಲಿ[illegible]

ರಾಜ್ಯ ಸರ್ಕಾರ ಒಂದು ಹ[illegible] ಹೋಗಿ ಕೃಷಿಯಲ್ಲಿ ವಿಶ್ವ [illegible] ಹೂಡಿಕೆದಾರರ ಸಮಾವೇಶವನ್ನು ಸಂಘಟಿಸಿದೆ. ಕಂಪನಿ-ಗುತ್ತಿಗೆ ಹಾಗೂ ಕೃಷಿಯ ಕಂಪನೀಕರಣಕ್ಕೆ ಜಮೀನನ್ನು ಒದಗಿಸುವುದಾಗಿ ಮತ್ತು ರೈತರಿಗೆ ಸಾಲ ನೀಡಲಾಗದಿದ್ದರೂ ಸಾರ್ವಜನಿಕ ಬ್ಯಾಂಕುಗಳ ಮೂಲಕ 3 ಲಕ್ಷ ಕೋಟಿ ರೂ. ಹಣವನ್ನು 5 ವರ್ಷಗಳ ಕಾಲ ಬಡ್ಡಿ ಇಲ್ಲದೇ ಕಾರ್ಪೊರೇಟ್ ಕಂಪೆನಿಗಳಿಗೆ ಕೊಡಿಸಲು ಮುಂದಾಗಿದೆ. 15 ಸಾವಿರ ಕೋಟಿಯಷ್ಟಾಗುವ ಬಡ್ಡಿಯನ್ನೂ ಕಂಪನಿಗಳ ಪರವಾಗಿ ಬ್ಯಾಂಕುಗಳಿಗೆ ಸರ್ಕಾರ ಸಂದಾಯ ಮಾಡಲಿದೆ. ರಾಜ್ಯದಾದ್ಯಂತ ಸರ್ಕಾರಿ ಜಮೀನು ಸಾಗು ಮಾಡಿದ 25 ಲಕ್ಷಕ್ಕೂ ಅಧಿಕ ಬಡ-ದಲಿತ ಕುಟುಂಬಗಳು, ಅಭಿವೃದ್ಧಿ ಪಡಿಸಿದ ಕೋಟ್ಯಾಂ[illegible]ರ ಎಕರೆ ಜಮೀನನ್ನೂ ಭೂಬ್ಯಾಂ[illegible]ದು ಕಂಪೆನಿಗಳಿಗೆ ನೀಡುವ ಕೆಲಸಕ್ಕೆ ಮುಂದಾಗಿದೆ. ಬಡವರಿಗೆ ಹಕ್ಕುಪತ್ರ[illegible]ನಿರಾಕರಿಸುತ್ತಿದೆ. ಉಳುವವರಿಗೆ ಬಡವರಿಗೆ[illegible]ತರಿಗೆ ಭೂಮಿ ದೊರೆಯುವ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತರಬೇಕೆಂದು ಸಿಪಿಐ(ಎಂ) ಕೇಳುತ್ತಿದ್ದರೆ ಬಿಜೆಪಿ ಸರ್ಕಾರ ಕಂಪನಿಗಳ ಪರವಾಗಿ ಕಾಯ್ದೆಗೆ ತಿದ್ದುಪಡಿ ಮಾಡುತ್ತಿದೆ.

ಪ್ರತಿ ವರ್ಷ ಸಾವಿರಾರು ಕೋಟಿ ಆದಾಯ ನೀಡುವ ಕಬ್ಬಿಣದ ಅದಿರಿನ ನೂರಾರು[illegible] ಗಣಿ ಭೂಮಿಯನ್ನೂ ಕಂಪನಿಗಳಿಗೆ ಉಚಿತವಾಗಿ ನೀಡುತ್ತಿದೆ. ತಲಾ ಕಂಪ[illegible]ಡಲೇಬೇಕಾದ ಸಾವಿರಾರು ಕೋಟಿಯ ತೆರಿಗೆಯನ್ನೂ 10ವರ್ಷ[illegible]ಳವರೆಗೆ ವಿನಾಯತಿ ನೀಡುತ್ತಿದೆ. ರೈತರಿಗೆ ಉತ್ತಮ ಮಾರುಕಟ್ಟೆ ಬೆಲೆ ನೀಡಿ ನೀರಾವರಿಯೇತರ ಜಮೀನನ್ನು ರೈತರ ಒಪ್ಪಿಗೆ ಮೇರೆಗೆ ಸ್ವಾಧೀನ ಪಡಿಸಿಕೊಳ್ಳಲು ಮತ್ತು ಬಲವಂತದ ಸ್ವಾಧೀನ ಕೈಬಿಡಲು ಸಿಪಿಐ(ಎಂ) ಕೇಳುತ್ತಿದ್ದರೇ ರೈತರನ್ನೂ ವಂಚಿಸಿ ಕೈಗಾರಿಕೆಗಳಿಗಾಗಿ ಬಲವಂತವಾಗಿ ಭೂಸ್ವಾಧೀನ ಮಾಡುತ್ತಿವೆ. ಅತ್ಯಂತ ಕಡಿಮೆ ಬೆಲೆಗೆ ಭೂಮಿಯನ್ನೂ ಸ್ವಾಧೀನ ಪಡಿಸಿಕೊಳ್ಳುತ್ತಿವೆ. ಉದಾಹರಣೆಗೆ ಬಳ್ಳಾರಿ ಜಿಲ್ಲೆಯ ಕುಡುತಿನಿ ಪ್ರದೇಶದಲ್ಲಿ ಕೇವಲ 5–6 ಲಕ್ಷ ರೂ. ನಿಗದಿಸಿ ಹತ್ತಾರು ಸಾವಿರ ಕುಟುಂಬಗಳಿಗೆ ಸಾವಿರಾರು ಕೋಟಿ ರೂ. ಮೋಸ ಮಾಡಲಾಗಿದೆ.

ಅಸಂಘಟಿತ ಕಾರ್ಮಿಕರಿಗೆ ಬೀಡಿ, ಅಂಗನವಾಡಿ, ಪಂಚಾಯ್ತಿ, ಬಿಸಿಯೂಟ, ಆಶಾ, ಕೆಲಸಗಾರರಿಗೆ ಕನಿಷ್ಠ ವೇತನ ನೀಡಲು, ಬಡವರಿಗೆ ಮನೆ ನಿವೇಶನ ಹಾಗೂ 2 ರೂ. ನಂತೆ ಕೆ.ಜಿ. ರೇಷನ್ ಒದಗಿಸಲು, ಹಮಾಲರಿಗೆ ಕಲ್ಯಾಣ ಕಾಯ್ದೆ ಒದಗಿಸಲು ಮೀನುಗಾರರಿಗೆ ನೆರವಾಗಲು ಎಲ್ಲರಿಗೂ ರೇಷನ್ ಕಾರ್ಡ್ ನೀಡಲೂ ಹಣವಿಲ್ಲವೆನ್ನುವ ಈ ಸರ್ಕಾರಗಳೂ, [illegible]ದಾರರಿಗೆ ಸಾರ್ವಜನಿಕ ಹಣ, [illegible]ಸಂಪನ್ಮೂಲಗಳನ್ನು ಧಾರೆ ಎರೆದು ಕೊಡುತ್ತಿವೆ. ವೃದ್ಧರ – ಅಂಗಲಕರ – ವಿಧವೆಯರ – ದೇವದಾಸಿ ಮಹಿಳೆಯರ ಪಿಂಚಣಿಗಳನ್ನು ಸ್ಥಗಿತಗೊಳಿವೆ ಮತ್ತು ಕಡಿತಗೊಳಿಸಿವೆ. ಈ ಬೆಲೆ ಏರಿಕೆಯಲ್ಲೂ ಪಿಂಚಣಿ ಹೆಚ್ಚಿಸಲು ಮುಂದಾಗುತ್ತಿಲ್ಲ. ಪ್ರವಾಹ ಅತೀವೃಷ್ಠಿಯಿಂದಾಗಿ ಲಕ್ಷ–ಲಕ್ಷ ಕುಟುಂಬಗಳು ಎಲ್ಲವನ್ನೂ ಕಳೆದುಕೊಂಡು ನಿರಾಶ್ರಿತರಾಗಿ ಅತ್ಯಂತ ಸಂಕಷ್ಟದಲ್ಲಿರುವಾಗ ಅಧಿಕಾರಕ್ಕಾಗಿ ಗಣಿ ಲೂಟಿಗಾಗಿ ರೆಸಾರ್ಟ್ಸ್ ರಾಜಕಾರಣದಲ್ಲಿ ಬಿಜೆಪಿ ತೊಡಗಿತ್ತು. ಸಹಾಯ ನೀಡದೇ ಕಣ್ಣೊರೆಸುವ ನಾಟಕದಲ್ಲಿ ನಿರತವಾಗಿರುವ ಕೇಂದ್ರದ ಕಾಂಗ್ರೆಸ್, ರಾಜ್ಯ ಸರ್ಕಾರ ಗುಂಪುಗಾರಿಕೆಯಿಂದ ಉರುಳಿ ಹೋಗುವುದನ್ನೇ ಎದುರು ನೋಡುತ್ತಿತ್ತು.

ಕರ್ನಾಟಕದಲ್ಲಿ ಹತ್ತು ವರ್ಷಗಳಿಗೆರೆಡು ವರ್ಷ ಮಾತ್ರವೇ ಮಳೆ [illegible] ಪರಿಸ್ಥಿತಿ ಇದ್ದು [illegible]ಗ ಕೇಂದ್ರ–ರಾಜ್ಯ ಸರ್ಕಾ[illegible]ಳಿಗೆ ಇದರ [illegible]ಶ್ವತ ಪರಿಹಾರ ಬೇಕಿಲ್ಲವಾಗಿದೆ. ಬರಗಾ[illegible]ಇದ್ದರೆ ತಮಗೂ ತಮ್ಮ ಹಿಂಬಾಲಕರಿಗೂ ಲಾಭವೆಂಬಂತೆ ವರ್ತಿಸುತ್ತಿವೆ. ಪಶ್ಚಿಮ ಘಟ್ಟಗಳಲ್ಲಿ ಸುರಿದು ಅರಬ್ಬೀ ಸಮುದ್ರದ ಪಾಲಾಗುವ ಸಾವಿರಾರು ಟಿಎಂಸಿ ನೀರನ್ನು ಬರಪೀಡಿತ ಪ್ರದೇಶಕ್ಕೆ ಹರಿಸಿ ಶಾಶ್ವತವಾಗಿ [illegible]ಂದ ಮುಕ್ತಿಗೆ [illegible] ಕರ್ನಾಟಕದ 7–8 [illegible]ಲ್ಲೆಗಳಾದ [illegible], ಚಿಕ್ಕಬಳ್ಳಾಪುರ, ಬೆಂಗಳೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಮುಂತಾದ ಜಿಲ್ಲೆಗಳಿಗೆ ಶಾಶ್ವತ ಕುಡಿಯುವ ನೀರು–ನೀರಾವರಿ ಒದಗಿಸಲು ಅವಕಾಶವಿದ್ದರೂ ಎರಡೂ ಸರ್ಕಾರಗಳು ಇದನ್ನೂ ಗಂಭೀರವಾಗಿ ಪರಿಗಣಿಸದೇ ಅದಕ್ಕೆ ಬೇಕಾದ ಪರಮಶಿವಯ್ಯನವರ ವರದಿಯಂತೆ ಕರಾವಳಿ ಜಿಲ್ಲೆಗಳಿಗೆ ನೀರಿನ ತೊಂದರೆಯಾಗದಂತೆ ಅಲ್ಲಿಯೂ ಮತ್ತಷ್ಟು ನೀರು ಒದಗಿಸಲು ಸಾಧ್ಯವಾಗುವಂತೆ ಅರಬ್ಬಿ ಸಮುದ್ರ ಸೇರುವ ನೀರನ್ನೂ ಬಳಸಿಕೊಳ್ಳಲು ಮುಂದಾಗುತ್ತಿಲ್ಲ. ಬದಲಿಗೆ, ಕೇವಲ ಬಾಯ್ಮಾತಿನ ಅನುಕಂಪ ತೋರಿಸುತ್ತಿವೆ. ಬೇಕಾದ ಹಣವನ್ನೂ ಬಜೆಟ್‌ನಲ್ಲಿ ಒದಗಿಸುತ್ತಿಲ್ಲ.

ಅಗತ್ಯ ವಸ್ತುಗಳ ಹಾಗೂ ಪೆಟ್ರೋಲ್-ಡೀಸೆಲ್ ಬೆಲೆಗಳನ್ನು ನಿರಂತರವಾಗಿ ಏರಿಸಿ ಜನಗಳ ಆದಾಯಕ್ಕೆ ಕನ್ನ ಹಾಕುವ ಕೆಲಸವನ್ನು ಕಾಂಗ್ರೆಸ್ ಮುಂದುವರೆಸಿದೆ. ರಾಜ್ಯ ಸರ್ಕಾರ ಮೌನ ಸಮ್ಮತಿ ಸೂಚಿಸುತ್ತಿದೆ. ತನ್ನ ತೆರಿಗೆ ಕಡಿತ ಮಾಡುತ್ತಿಲ್ಲ. ಬದಲಿಗೆ ಬಸ್‌ದರ ಏರಿಸಿ ಖಾಸಗೀ ಬಸ್‌ಗಳಿಗೆ ಮಾರುಕಟ್ಟೆ ಒದಗಿಸುತ್ತಿದೆ. ಬೆಲೆ ಏರಿಕೆಯಿಂದ ಆದಾಯವನ್ನು ನಿರಂತರವಾಗಿ ಕರಗಿಸಿಕೊಳ್ಳುವ ಕಾರ್ಮಿಕರು ಹೋರಾಟದಲ್ಲಿ ತೊಡಗಿದರೆ, ಎರಡೂ ಸರ್ಕಾರಗಳು ಕುರುಡುತನ ಪ್ರದರ್ಶಿಸುತ್ತಿವೆ. ಖಾಲಿ ಇರುವ ಬ್ಯಾಕ್‌ಲಾಗ್ ಮತ್ತಿತರೇ ಹುದ್ದೆಗಳನ್ನು ತುಂಬುತ್ತಿಲ್ಲ. ಲಕ್ಷಾಂತರ ಯುವಜನರನ್ನೂ ಹೊರಗುತ್ತಿಗೆ ಆಧಾರದಲ್ಲಿ ಕಡಿಮೆ ಕೂಲಿಗೆ ದುಡಿಸಿಕೊಳ್ಳುತ್ತಿದೆ. ದಲಿತರು, ಮಹಿಳೆಯರ ಮೇಲಿನ ವ್ಯಾಪಕ ದೌರ್ಜನ್ಯಗಳು ಈ ಸರ್ಕಾರಗಳಿಗೆ ಕಾಣುತ್ತಲೇ ಇಲ್ಲ. ಸರ್ಕಾರಿ ಶಾಲೆಗಳನ್ನು ಮುಚ್ಚಲು ಖಾಸಗೀ ಶಿಕ್ಷಣವನ್ನು ಪ್ರೋತ್ಸಾಹಿಸಲು ಕೆಲಸ ಮುಂದುವರೆಸಿವೆ.

ಮತಾಂಧ ಶಕ್ತಿಗಳಿಗೆ ಕುಮ್ಮಕ್ಕು :

ಈ ಎಲ್ಲಾ ಜನ ವಿರೋಧಿ ನೀತಿಗಳ ವಿರುದ್ಧ ಜನತೆ ಜಾತಿ/ಧರ್ಮ ಭಾಷೆ ಮರೆತು ಒಗ್ಗೂಡುವುದನ್ನೂ ತಡೆಯುವ ಈ ಎರಡು ಸರ್ಕಾರಗಳು ಒಡೆದಾಳಲು ಮುಂದಾಗುತ್ತಿವೆ. ಬಿಜೆಪಿಯಂತೂ ಬಹುಸಂಖ್ಯಾತರ ಮತಗಳ ಮೇಲೆ ಕಣ್ಣಿಟ್ಟು ಅಲ್ಪಸಂಖ್ಯಾತರ ವಿರುದ್ಧವಾಗಿ ಸಂಘ ಪರಿವಾರದ ಬೆಳವಣಿಗೆಗೆ ಕುಮ್ಮಕ್ಕು ನೀಡುತ್ತಿದೆ. ಮತಾಂಧ ಸಂಘ ಪರಿವಾರದವರ ಮೇಲೆ ಹಾಕಲಾದ ಕ್ರಿಮಿನಲ್ ಕೇಸುಗಳನ್ನು ವಾಪಸ್ಸು ಪಡೆದು ಪ್ರೋತ್ಸಾಹ ನೀಡುತ್ತಿದೆಯಲ್ಲದೇ ಸಂಘ ಪರಿವಾರದ ಶಕ್ತಿಗಳಿಗೆ ಭೂಮಿ ಹಣವನ್ನು ಗೋ ಸಂರಕ್ಷಣೆ ಮತ್ತು ಸಾವಯವ ಕೃಷಿ ಹೆಸರಿನಲ್ಲಿ ಒದಗಿಸುತ್ತಿದೆ. ಕರಾವಳಿಯನ್ನಂತೂ ಸಂಘ ಪರಿವಾರದ ಕೋಮುವಾದಿ ಪ್ರಯೋಗಾಲಯವನ್ನಾಗಿ ಮಾಡಲಾಗಿದೆ.

ಕಾಂಗ್ರೆಸ್ ಕೇಂದ್ರ ಸರ್ಕಾರ ಅಲ್ಪಸಂಖ್ಯಾತರ ಮತ್ತು ಬಹುಸಂಖ್ಯಾತ – ಮತಾಂಧತೆಯನ್ನು ದೃಢವಾಗಿ ಎದುರಿಸಲು ಅವುಗಳ ಮೇಲೆ ಕಠಿಣ ಕ್ರಮಕೈಗೊಳ್ಳುವುದಾಗಲೀ ಮಾಡದೇ ಮೆದು ಧೋರಣೆ ಅನುಸ[illegible] ಒಡೆದಾಳಲು ಮುಂದಾಗುತ್ತಿದೆ.

ಪ್ರಜಾಪ್ರಭುತ್ವ ವಿರೋಧಿ :

ಬಿ.ಜೆ.ಪಿ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ದೊಡ್ಡ ಪಕ್ಷವಾಗಿ ಹೊರಹೊಮ್ಮುವಂತಾಗಿದ್ದರೂ ಅದಕ್ಕೆ ಬಹುಮತವಿರಲಿಲ್ಲ. ಗಣಿ/ಭೂ ಮಾಫಿಯಾಗಳ ಹಣವನ್ನು ಬಳಸಿ ಮತ್ತು ಅಧಿಕಾರದ ಆಮಿಷ ನೀಡಿ ಪಕ್ಷೇತರರ ಬೆಂಬಲ ಪಡೆದು ಅನೈತಿಕ ರೀತಿಯಲ್ಲಿ ಸರ್ಕಾರ ರಚನೆಗೆ ಮುಂದಾಯಿತಲ್ಲದೇ ಸ್ವಂತ ಬಲದ ಮೇಲೆ ಅಧಿಕಾರ ಮಾಡಲು ಮುಂದೆ ಆಪರೇಷನ್ ಕಮಲದ ಹೆಸರಿನಲ್ಲಿ ವಿರೋಧ ಪಕ್ಷದ ಶಾಸಕರನ್ನು ಆಮಿಶವೊಡ್ಡಿ ಸೆಳೆಯಲಾಯಿತು. ಮುಂದೆ ಸರ್ಕಾರದ ವಿರುದ್ಧ 19 ಜನ ಶಾಸಕರು ವಿರೋಧ ವ್ಯಕ್ತಪಡಿಸಿದಾಗ ಅವರನ್ನು ಸ್ಪೀಕರ್ ಸ್ಥಾನದ ದುರುಪಯೋಗ ಮಾಡಿಕೊಂಡು ಅಮಾನತುಗೊಳಿಸಲಾಯಿತು ಮತ್ತು ವಿರೋಧ ಪಕ್ಷದ ಸದಸ್ಯರನ್ನು ಸದನದಲ್ಲಿ ಭಾಗಿಯಾಗದಂತೆ ಪೊಲೀಸ್ ಬಲ ಉಪಯೋಗಿಸಿ ತಡೆಯೊಡ್ಡಲಾಯಿತು.

ಇದಕ್ಕಿಂತ ಮುಖ್ಯವಾಗಿ ಆಯ-ವ್ಯಯಗಳನ್ನು ಯಾವುದೇ ಚರ್ಚೆ ಇಲ್ಲದೆ ಕೇವಲ ಧ್ವನಿಮತದ ಮೂಲಕ ಅಂಗೀಕರಿಸುವ ಪ್ರಜಾಪ್ರಭುತ್ವ ವಿರೋಧಿಯಾದ ಕೆಟ್ಟ ಸಂಪ್ರದಾಯವನ್ನು ಜಾರಿಗೆ ತಂದಿದೆ.

ಅದೇ ರೀತಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಸಂದರ್ಭದಲ್ಲಿ ತನಗೆ ಬೆಂಬಲ ನೀಡುವ ಪಕ್ಷಗಳು ಸೇರಿ ವಿರೋಧಿಸಿದ್ದರೂ, ಕೆಲವರು ಬೆಂಬಲ ವಾಪಸ್ಸು ಪಡೆದರೂ ಅಲ್ಪಸಂಖ್ಯಾತ ಸರ್ಕಾರ ಅದನ್ನು ಜಾರಿಗೆ ತರುತ್ತಿರುವುದು ಅದರ ಪ್ರಜಾಪ್ರಭುತ್ವ ವಿರೋಧಿ ಸ್ವರೂಪಕ್ಕೆ ಹಿಡಿದ ಕನ್ನಡಿಯಾಗಿದೆ.

ಒಟ್ಟಾರೇ ರಾಜ್ಯವನ್ನೂ ಜನತೆಯನ್ನೂ ಸಂಕಷ್ಟದಲ್ಲಿ ಬೇಯಲು ಬಿಟ್ಟು ಬಹುರಾಷ್ಟ್ರೀಯ ಕಂಪೆನಿಗಳಿಗೆ ಮಣೆ ಹಾಕುತ್ತಾ – ಪ್ರಜಾಪ್ರಭುತ್ವವನ್ನೂ ಗಾಳಿಗೆ ತೂರುತ್ತಾ, ಜನಗಳ ನಡುವೆ ಮತಾಂಧತೆ, ಜಾತಿವಾದ ಹರಡುತ್ತಾ ಅಧಿಕಾರವನ್ನೂ ಮುನ್ನಡೆಸಲು ಮುಂದಾಗುವ ಬಿಜೆಪಿ-ಕಾಂಗ್ರೆಸ್‌ಗಳು ಮತ್ತೊಮ್ಮೆ ಚುನಾವಣೆಯಲ್ಲಿ ಜಾತಿ–ಹಣ–ಹೆಂಡದ ರಾಜಕಾರಣ ನಡೆಸಲು ಮರಳಿ ಬರುತ್ತಿವೆ.

ಭಾರೀ ಶಿಸ್ತಿನ ಬಿಜೆಪಿ ಗುಂಪುಗಾರಿಕೆಯಲ್ಲಿ ಜರ್ಜರಿತಗೊಂಡು ಬಿಜೆಪಿ – ಕೆಜೆಪಿ – ಬಿಎಸ್‌ಆರ್ ಎಂದು ಮೂರು ಹೋಳಾಗಿದೆ. ಕೇಂದ್ರದಲ್ಲಿ ಜನ ವಿರೋಧಿ ರಾಜ್ಯಭಾರ ಮಾಡುತ್ತಿರುವ ಮತ್ತು ರಾಜ್ಯದಲ್ಲಿ ವಿರೋಧ ಪಕ್ಷವಾಗಿ ಘೋರವಾಗಿ ವಿಫಲವಾಗಿರುವ [illegible]ಂಗ್ರೆಸ್ ಮತ್ತು ಭ್ರಷ್ಟಾಚಾರಕ್ಕಾಗಿ ಜೈಲು ಕಂಡು [illegible]ರುವ ಬಿಜೆಪಿಯನ್ನು ಜನತೆ [illegible]ಕೆಯಿ[illegible] ಎದುರಿಸಬೇಕಾಗಿದೆ. ತನ್ನ [illegible]ಕ್ಕಗಳ[illegible]ಣೆಗಾಗಿ ಒಗ್ಗೂಡಿ [illegible]ರಾ[illegible] ಈ ನೆಲೆಯಲ್ಲಿ ಪ್ರಜಾಸತ್ತೆ [illegible] ಜನರ ಐಕ್ಯತೆ ಉಳಿಸಲು, ವ್ಯವಸಾಯ, [illegible]ವ್ಯಾಪಾರ ರಕ್ಷಿಸಲು, ಶಾಶ್ವತ ನೀರಾವರಿ [illegible] ಜಾರಿಗೆ ತರಲು ದಲಿತರು, [illegible]ರ ಮೇಲಿನ ದೌರ್ಜನ್ಯ ತಡೆಯಲು ಬೆಲೆ ಏರಿಕೆ ಹಿಮ್ಮೆಟ್ಟಿಸಲು ಕಾರ್ಮಿಕ ಹಕ್ಕುಗಳ ರಕ್ಷಣೆ ಮುಂತಾದ ವುಗಳಿಗಾಗಿ ಈ ಸಮಾವೇಶ ಯಶಸ್ವಿಯಾಗುವುದು ಅಗತ್ಯವಾಗಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಮತ್ತೆ ಈ ಬಾರಿಯೂ ಸಂಸತ್ತಿನಲ್ಲಿ ಕಾಂಗ್ರೆಸ್–ಬಿಜೆಪಿ 'ಮ್ಯಾಚ್‌ಫಿಕ್ಸಿಂಗ್'?


ಕಳೆದ ಅಧಿವೇಶನ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ 'ಮ್ಯಾಚ್‌ಫಿಕ್ಸಿಂಗ್'ನಿಂದಾಗಿ ಇಡಿಯಾಗಿ ತೊಳೆದು ಹೋಯಿತು. ಇವರಿಬ್ಬರಿಗೂ ಕಲ್ಲಿದ್ದಲು ಹಗರಣದ ಮೇಲೆ ಒಂದು ನಿರ್ದಿಷ್ಟ ಚರ್ಚೆ ಬೇಕಾಗಿರಲಿಲ್ಲ. ಈ ಬಾರಿ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶ ನೀಡುವುದಕ್ಕೆ ಭಾರತೀಯ ಸಂಸತ್ತಿನ ಅಸಮ್ಮತಿಯನ್ನು ವ್ಯಕ್ತಪಡಿಸುವ ನಿರ್ಣಯದ ನೋಟೀಸನ್ನು ಎರಡೂ ಸದನಗಳಲ್ಲಿನ ಸಿಪಿಐ(ಎಂ) ಮುಖಂಡರು ನೀಡಿದ್ದಾರೆ. ಆದರೆ ಬಿಜೆಪಿ ಮತ್ತು ಕಾಂಗ್ರೆಸ್‌ಗಳೆರಡೂ ಈ ಠರಾವು ಮತ್ತು ಸಾರ್ವಜನಿಕ ಮಹತ್ವದ ಇತರ ಪ್ರಶ್ನೆಗಳ ಮೇಲೆ ನಿರ್ದಿಷ್ಟ ಚರ್ಚೆಗಳು ನಡೆಯಲು, ಅವಕಾಶ ನೀಡುತ್ತವೆಯೇ, ಯುಪಿಎ–2 ಸರಕಾರ ಹಿಡಿದಿರುವ ಅಪಾಯಕಾರಿ ದಾರಿಯಿಂದ ಹಿಂದೆ ಸರಿಯುವಂತೆ ಮಾಡಲು ಆಗುತ್ತದೆಯೇ ಎಂಬುದೊಂದು ದೊಡ್ಡಪ್ರಶ್ನೆ.

ಮುಂದಿನ ವಾರ ಸಂಸತ್ತಿನ ಚಳಗಾಲದ ಅಧಿವೇಶನ ಅರಂಭವಾಗಲಿದೆ. ಬಹುಪಾಲು ಭಾರತೀಯರು ಒಂದು ಸಪ್ಪೆ ದೀಪಾವಳಿಯನ್ನು ಈಗಷ್ಟೇ ಆಚರಿಸಿದ್ದಾರೆ. ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಸರ್ವೆಗಳ ಪ್ರಕಾರ ಭಾರತದ ಅರ್ಧದಷ್ಟು ಕಾರ್ಮಿಕ ವರ್ಗ ಸಾಮಾನ್ಯವಾಗಿ ಹಬ್ಬದ ವೇಳೆಗೆ ಪಡೆವ ಬೋನಸುಗಳನ್ನು ಪಡೆದಿಲ್ಲ. ನಮ್ಮ ಜನತೆಯ 60ಶೇ. ಕಳೆದ ವರ್ಷಗಳಿಗಿಂತ ಕಡಿಮೆ ಖರ್ಚು ಮಾಡಬೇಕಾಗಿ ಬಂದಿದೆಯಂತೆ. ಇನ್ನೊಂದೆಡೆ 20ಶೇ.ಮಂದಿ ತಾವು ಹಿಂದೆಂದಿಗಿಂತಲೂ ಹೆಚ್ಚು ಖರ್ಚು ಮಾಡಿರುವುದಾಗಿ ಜಂಭ ಕೊಚ್ಚಿಕೊಳ್ಳುತ್ತಿದ್ದಾರಮತೆ. ಈ ಮೂಲಕ ಎರಡು ಭಾರತಗಳ ನಡುವಿನ ಕಂದರ ಮತ್ತೊಮ್ಮೆ ದೃಢಪಟ್ಟಿದೆ.

ನಮ್ಮ ಸಂಸತ್ತು ಇಂತಹ ಸಾರ್ವಜನಕ ಮಹತ್ವದ ಪ್ರಶ್ನೆಗಳನ್ನು ಚರ್ಚಿಸಬೇಕಾಗಿದೆ, ಈ ಯುಪಿಎ–2 ಸರಕಾರ ಅವಕ್ಕೆಲ್ಲ ಉತ್ತರ ಕೊಡುವಂತೆ ಮಾಡಬೇಕಾಗಿದೆ. ಆದರೆ ಅದಕ್ಕೆ ಅವಕಾಶ ಕೊಡುವ ಸಂಭವ ಬಹುಮಟ್ಟಿಗೆ ಇಲ್ಲ. ಕಳೆದ ಅಧಿವೇಶನ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ಮ್ಯಾಚ್‌ಫಿಕ್ಸಿಂಗ್'ನಿಂದಾಗಿ ಇಡಿಯಾಗಿ ತೊಳೆದು ಹೋಯಿತು. ಇವರಿಬ್ಬರಿಗೂ ಕಲ್ಲಿದ್ದಲು ಬ್ಲಾಕುಗಳ ನೀಡಿಕೆಯ ಬಗ್ಗೆ ಒಂದು ನಿರ್ದಿಷ್ಟ ಚರ್ಚೆ ಬೇಕಾಗಿರಲಿಲ್ಲ. ಈ ಬಾರಿಯೂ ಹಾಗೇ ಆಗಲಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಮುಖಂಡರ ವಿವಿಧ ಹಗರಣಗಳು ಬಯಲಾಗಿರುವುದರಿಂದ ಈ ಬಗ್ಗೆಯೆ ಪರಸ್ಪರ ಕೆಸರು ಎರಚಾಟ ತೀವ್ರಗೊಳ್ಳಲಿದೆ. ಇದರಿಂದ ಈ ಚಳಿಗಾಲದ ಅಧಿವೇಶನವೂ ಛಿದ್ರಗೊಂಡರೆ ಅದು ಬಹಳ ದುರದೃಷ್ಟಕರ. ಹಾಗಾದರೆ, ನಮ್ಮ ಸಂಸದೀಯ ಪ್ರಜಾಪ್ರಭುತ್ವ ನಿಜವಾಗಿಯೂ ನಮ್ಮ ಜನಗಳಿಗೆ ಒಂದು ಉತ್ತಮ ಬದುಕು ಕೊಡಿಸಬಲ್ಲುದೇ ಎಂದು ಜನಗಳಲ್ಲಿ ಸಿನಿಕತನ ಇನ್ನೂ ಹೆಚ್ಚುವಂತಾಗಬಹುದು.

ಆರ್ಥಿಕ ನಿಧಾನಗತಿ

ಭ್ರಷ್ಟಾಚಾರದ ಹಗರಣಗಳ ಹೆಚ್ಚುತ್ತಿರುವ ಪಿಡುಗನ್ನಷ್ಟೇ ಅಲ್ಲ, ಇನ್ನೂ ಹಲವು ಮಹತ್ವದ ಪ್ರಶ್ನೆಗಳನ್ನು ಈ ಅಧಿವೇಶನದಲ್ಲಿ ಚರ್ಚಿಸಬೇಕಾಗಿದೆ. ಆರ್ಥಿಕ ಬೆಳವಣಿಗೆಯ ನಿಧಾನಗತಿ ಹೆಚ್ಚೆಚ್ಚು ಜನಗಳಿಗೆ ಸಂಕಟಗಳನ್ನು ತಂದೊಡ್ಡುತ್ತಿದೆ. ಬೆಲೆಗಳ ನಿರಂತರ ಬೆಲೆಯೇರಿಕೆ ಬಹುಪಾಲು ಜನಗಳ ಕೈಗಳಲ್ಲಿ ಬದುಕುಳಿಯಲು ಬೇಕಾದ ಖರ್ಚುವೆಚ್ಚಗಳನ್ನು ತೂಗಿಸಿದ ನಂತರ ಏನನ್ನೂ ಉಳಿಸುವುದಿಲ್ಲ. ನಿರುದ್ಯೋಗವನ್ನು ಹೆಚ್ಚಿಸುತ್ತಿದೆ. ಸಂಬಳಗಳನ್ನು ಹಿಂಡುತ್ತಿದೆ; ದೇಶದ ಕಾರ್ಖಾನೆಗಳ ಉತ್ಪಾದನೆ ಸಪ್ಟಂಬರಿನಲ್ಲಿ 0.4 ಶೇ. ಇಳಿದಿದೆ, ರಫ್ತು ಅಕ್ಟೋಬರಿನಲ್ಲಿ 1.63 ಶೇ.ಇಳಿದಿದೆ, ಅಂದರೆ ಸತತವಾಗಿ ಆರನೇ ತಿಂಗಳೂ ಇಳಿಕೆ ತೋರಿಸಿದೆ. ಉದ್ಯೋಗ ಕಡಿತ, ರಿಟ್ರೆಂಚ್‌ಮೆಂಟ್‌ಗಳು ಹೆಚ್ಚುತ್ತಿವೆ. ಗ್ರಾಮೀಣ ಭಾರತದ ಕೋಟ್ಯಂತರ ಮಂದಿಗೆ ಕೃಷಿ ಸಂಕಟಗಳಿಂದ ಮುಕ್ತಿ ದೊರೆತಿಲ್ಲ, ರೈತರ ಆತ್ಮಹತ್ಯೆಗಳು ನಿಲ್ಲುವ ಲಕ್ಷಣಗಳೇ ಇಲ್ಲ. ಜಿಡಿಪಿ ಬೆಳವಣಿಗೆಯ ನಿರೀಕ್ಷೆಯನ್ನು ಸರಕಾರವೇ 6ಶೇ.ಕ್ಕೆ ಇಳಿಸಿತ್ತು. ಆದರೆ ಕಳೆದ ಮೂರು ತಿಂಗಳಲ್ಲಿ ಅದನ್ನೂ ತಲುಪಿಲ್ಲ. ಈ ಹಿಂದೆ ಭಾರತದ ಜಿಡಿಪಿ ಬೆಳವಣಿಗೆ 6.9ಶೇ.





ಇರುತ್ತದೆಂದು ಲೆಕ್ಕ ಹಾಕಿದ್ದ ಐಎಂಎಫ್ ಅದನ್ನೀಗ ಕೇವಲ 4.2ಶೇ.ಕ್ಕೆ ಇಳಿಸಿದೆ.

ಇಂತಹ ಆರ್ಥಿಕ ನಿಧಾನಗತಿಯನ್ನು ಎದುರಿಸಲು ಯುಪಿಎ ಸರಕಾರ ಹೆಚ್ಚೆಚ್ಚು ವಿದೇಶಿ ಬಂಡವಾಳಗಳನ್ನು ಆಕರ್ಷಿಸುವ ಹಣಕಾಸು ಉದಾರೀಕರಣದ ಮುಂದಿನ ಕಂತಿನ ಸುಧಾರಣೆಗಳ ದಿಕ್ಕಿನಲ್ಲಿ ಸಾಗಬೇಕಾಗಿದೆ ಎನ್ನುತ್ತಿದೆ. ಹೂಡಿಕೆಗಳ ಮಟ್ಟ ಏರಿದರೆ ಬೆಳವಣಿಗೆಯ ದರವೂ ಏರುತ್ತದೆ ಎಂಬುದು ಅದರ ಅಂದಾಜು. ಆದರೆ ಜನಗಳ ಕೈಗಳಲ್ಲಿ ಹೆಚ್ಚಿನ ಹೂಡಿಕೆಗಳಿಂದ ಉತ್ಪಾದಿಸಿದ್ದನ್ನು ಕೊಳ್ಳುವ ಶಕ್ತಿಯಿಲ್ಲದಿದ್ದರೆ ಬೆಳವಣಿಗೆ ಸಾಧ್ಯವಿಲ್ಲ ಎಂಬುದನ್ನು ಗ್ರಹಿಸದಿರುವುದೇ ಈ ಪಥ್ಯದ ಮೂಲಭೂತ ದೋಷ. ತದ್ವಿರುದ್ಧವಾದುದೇ ಸಂಭವಿಸುತ್ತಿರುವಾಗ ಇಂತಹ ಸುಧಾರಣೆಗಳಿಂದ ಉನ್ನತ ಬೆಳವಣಿಗೆಯ ನಿರೀಕ್ಷೆ ಕೇವಲ ಭ್ರಮೆ.

ಭಾರತ ತನ್ನ ಆರ್ಥಿಕಕ್ಕೆ ಮತ್ತೆ ಜೀವ ತುಂಬಲು ಇಂತಹ ಕಾರ್ಯತಂತ್ರವನ್ನು ಅಂಗೀಕರಿಸಿರುವುದು ಅಮೆರಿಕಾ, ಅಷ್ಟೇ ಏಕೆ, ಇಡೀ ಜಾಗತಿಕ ಆರ್ಥಿಕ ವ್ಯವಸ್ಥೆ ಅಮೆರಿಕಾ 'ಹಣಕಾಸು ಬೆಟ್ಟದ ಅಂಚಿ'ನಲ್ಲಿ ನೇತಾಡುತ್ತಿರುವಂತಹ ಪರಿಸ್ಥಿತಿಯಲ್ಲಿ. ರಿಪಬ್ಲಿಕನ್ ಮತ್ತು ಡೆಮೊಕ್ರಟಿಕ್ ಶಾಸಕರು ಪರಸ್ಪರ ಒಪ್ಪದಿದ್ದರೆ ಹೊಸದಾಗಿ ಪುನರಾಯ್ಕೆಗೊಂಡ ಅಧ್ಯಕ್ಷ ಒಬಾಮ ಈ ವಿಷಯದಲ್ಲಿ ಅಸಹಾಯಕರಾಗಿ ಬಿಡುವ ಪರಿಸ್ಥಿತಿಯಿದೆ. ಅಂತಹ ಸಂಭವವೇ ಹೆಚ್ಚಾಗಿ ಕಾಣಿಸುತ್ತಿದೆ. ಇದರಿಂದ ಅಮೆರಿಕದ ಆರ್ಥಿಕ ವ್ಯವಸ್ಥೆ ವಿಪರೀತವಾಗಿ ಕುಗ್ಗಿ ಆ ದೇಶದ ಜಿಡಿಪಿ 4ರಿಂದ 6ಶೇ.ದಷ್ಟು ಇಳಿಯಬಹುದು ಎಂದು ಕೆಲವು ವಿಶ್ಲೇಷಕರು ಹೇಳುತ್ತಿದ್ದಾರೆ. ಇದರಿಂದ ಅಮೆರಿಕಾದ ಆರ್ಥಿಕ ದೀರ್ಘಕಾಲದ ಹಿಂಜರಿತಕ್ಕೆ ಒಳಗಾಗಿ ಜಾಗತಿಕ ಆರ್ಥಿಕ ಧ್ವಂಸಗೊಳ್ಳುವ ಸನ್ನಿವೇಶ ಉಂಟಾಗಬಹುದು, 2013ರಲ್ಲಿ ಜಾಗತಿಕ ಆರ್ಥಿಕ ಬೆಳವಣಿಗೆ ದರ ಅರ್ಧಕ್ಕೆ ಇಳಿಯಬಹುದು ಎಂದು ಹೇಳಲಾಗುತ್ತಿದೆ.

ಭಾರೀ ವಿಪತ್ತು ಕಾದಿದೆ

2001ರಲ್ಲಿ ಬಿಲ್ ಕ್ಲಿಂಟನ್ ಅಧಿಕಾರ ಬಿಟ್ಟಾಗ ಅಮೆರಿಕಾ ಜಗತ್ತಿನ ಅತಿ ಹೆಚ್ಚು ಸಾಲಗ್ರಸ್ತ ದೇಶವಾಗಿತ್ತು. ಡಾಲರ್ ಅಂತರ್ರಾಷ್ಟ್ರೀಯ ಸಂಪತ್ತಿನ ಮತ್ತು ವ್ಯವಹಾರಗಳ ಮಾಧ್ಯಮವಾಗಿರುವುದರಿಂದ ಅಮೆರಿಕಾ ತನ್ನ ಸಾಲಕ್ಕೆ ಡಾಲರುಗಳನ್ನು ಮುದ್ರಿಸಿ ಪಾರಾಗುತ್ತಿತ್ತು. ಆದರೆ ಈಗ ಅದು ಕೂಡ ಸಾರ್ವಭೌಮ ದೀವಾಳಿಯತ್ತ ಜಾರುವುದನ್ನು ತಪ್ಪಿಸುವುದು ಬಹಳ ಕಷ್ಟವಾದೀತು.

ಇಂತಹ ಹಿನ್ನೆಲೆಯಲ್ಲಿ ಭಾರತದ ಮುಂದಿನ ಸುಧಾರಣೆಗಳ ಕಂತಿನಿಂದ ನಮ್ಮ ಜನತೆಗೆ ಭಾರೀ ವಿಪತ್ತು ಕಾದಿದೆ. ಮುಂಬರುವ ಬಿಕ್ಕಟ್ಟಿನಿಂದ ಪಾರಾಗಲು ಅಂತರ್ರಾಷ್ಟ್ರೀಯ" ಹಣಕಾಸು ಬಂಡವಾಳ ಲಾಭ ಗಿಟ್ಟಿಸುವ ಹೊಸ–ಹೊಸ ದಾರಿಗಳ ಹುಡುಕಾಟದಲ್ಲಿದೆ. ಇಂತಹ ಸನ್ನಿವೇಶದಲ್ಲಿ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದೊಳಕ್ಕೆ ಪ್ರವೇಶಿಸಲು ಅವಕಾಶ ಒದಗಿಸಿ, ವಿಮೆ, ಬ್ಯಾಂಕಿಂಗ್ ಮತ್ತು ಪೆನ್ಶನ್ ವಲಯಗಳಲ್ಲಿ ವಿದೇಶಿ ಹೂಡಿಕೆಗಳ ಮಿತಿ ಹೆಚ್ಚಿಸುವ ಮೂಲಕ ಭಾರತೀಯ ದುಡಿಯುವ ಜನಗಳ ಉಳಿತಾಯದ ಅಪಾರ ಮೊತ್ತಗಳನ್ನು ವಿದೇಶಿ ಬಂಡವಾಳದ ಕಾಲಬುಡಕ್ಕೆ, ಅದರ ಜೂಜುಕೋರ ಚಟುವಟಿಕೆಗಳಿಗೆ ಒದಗಿಸಲಾಗುತ್ತಿದೆ. ಈ ಮೂಲಕ ದೇಶವನ್ನು ವಿನಾಶಕಾರಿ ಅಂತರ್ರಾಷ್ಟ್ರೀಯ ಹಣಕಾಸು ಏರುಪೇರುಗಳಿಗೆ ದೇಶವನ್ನು ಈಡುಮಾಡಲಾಗುತ್ತಿದೆ.

ನಮ್ಮ ಮೂಲರಚನೆಗಳಲ್ಲಿ ಸಾರ್ವಜನಕ ಹೂಡಿಕೆಗಳನ್ನು ಹೆಚ್ಚಿಸಿ(ಈ ಹಿಂದೆ ಹಲವು ಬಾರಿ ಈ ಅಂಕಣದಲ್ಲಿ ಹೇಳಿರುವಂತೆ ಇದಕ್ಕೆ ಸಂಪನ್ಮೂಲಗಳ ಕೊರತೆಯೇನೂ ಇಲ್ಲ) ಉದ್ಯೋಗಾವಕಾಶಗಳನ್ನು, ಆಂತರಿಕ ಬೇಡಿಕೆಯ ಪ್ರಮಾಣವನ್ನು ಹೆಚ್ಚಿಸುವತ್ತ ಗಮನ ಕೇಂದ್ರೀಕರಿಸುವ ಬದಲು ಈಗ ಯುಪಿಎ ಸರಕಾರ ಹೇಳುತ್ತಿರುವ ಸುಧಾರಣೆಗಳ ಮುಂದಿನ ಕಂತು ಆಂತರಿಕ ಬೇಡಿಕೆಯನ್ನು ಇನ್ನಷ್ಟು ಕುಂಠಿತಗೊಳಿಸಿ ನಮ್ಮ ಜನಗಳ ಮೇಲೆ ಇನ್ನಷ್ಟು ಸಂಕಟಗಳನ್ನು ಹೇರುತ್ತದೆ.

ಎಫ್‌ಡಿಐ:ಮತದಾನದ ಠರಾವು

"ಅಮೆರಿಕಾದಲ್ಲಿನ ಆರ್ಥಿಕ ಪರಿಸ್ಥಿತಿ ಹದಗೆಟ್ಟರೆ, ಮೂಡಿ ಬರುತ್ತಿರುವ ಆರ್ಥಿಕಗಳ ಮೇಲೆ ಅದರ ದುಷ್ಪರಿಣಾಮಗಳು, ಯುರೋ ಪ್ರದೇಶದ ಪರಿಸ್ಥಿತಿಗಿಂತಲೂ ಕೆಟ್ಟದಾಗಿರುತ್ತದೆ" ಎಂದು ಭಾರತದ ಹಣಕಾಸು ಮಂತ್ರಿಗಳು ಟೋಕಿಯೋದಲ್ಲಿ ಐಎಂಎಫ್ ಸಭೆಯೊಂದರಲ್ಲಿ ನಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಅದರೂ ಭಾರತದ ಆಂತರಿಕ ಬೇಡಿಕೆಯನ್ನು ಬಲಪಡಿಸಿ ಈ ದುಷ್ಪರಿಣಾಮವನ್ನು ಎದುರಿಸಲು ಮುಂದಾಗುವ ಬದಲು ಅವರ ಸರಕಾರ ಇಂತಹ ಸುಧಾರಣೆಗಳ ದಾರಿಯನ್ನೇ ಹಿಡಿದು ದೇಶ ಜಾಗತಿಕ ಹಣಕಾಸು ಹೊಯ್ದಾಟಗಳಿಗೆ ಈಡು ಮಾಡಲು ಹೊರಟಿದೆ.

ಸಂಸತ್ತಿನಲ್ಲಿ ಈ ಎಲ್ಲ ಪ್ರಶ್ನೆಗಳನ್ನು ಗಂಭೀರವಾಗಿ ಚರ್ಚಿಸಬೇಕಾಗಿದೆ. ಯುಪಿಎ–2 ಸರಕಾರ ಈಗ ಅನುಸರಿಸುತ್ತಿರುವ ಅಪಾಯಕಾರಿ ದಾರಿಯಿಂದ ಹಿಂದೆ ಸರಿಯುವಂತೆ ಮಾಡಬೇಕಾಗಿದೆ: ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶ ನೀಡುವುದಕ್ಕೆ ಭಾರತೀಯ ಸಂಸತ್ತಿನ ಅಸಮ್ಮತಿಯನ್ನು ವ್ಯಕ್ತಪಡಿಸುವ ನಿರ್ಣಯದ ನೋಟೀಸನ್ನು ಎರಡೂ ಸದನಗಳಲ್ಲಿನ ಸಿಪಿಐ(ಎಂ) ಮುಖಂಡರು ನೀಡಿದ್ದಾರೆ. ಇದನ್ನು ಮತದಾನಕ್ಕೆ ಅವಕಾಶವಿರುವ ನಿಯಮಗಳ ಅಡಿಯಲ್ಲಿ ನೀಡಲಾಗಿದೆ. ಈ ಠರಾವು ಮತ್ತು ಸಾರ್ವಜನಕ ಮಹತ್ವದ ಇತರ ಪ್ರಶ್ನೆಗಳ ಮೇಲೆ ನಿರ್ದಿಷ್ಟ ಚರ್ಚೆಗಳು ನಡೆಯುವಂತೆ ಮಾಡುವುದಕ್ಕೆ ಎಡಪಕ್ಷಗಳ ಒತ್ತು ಕೊಡಲಿವೆ. ಆದರೆ ಬಿಜೆಪಿ ಮತ್ತು ಕಾಂಗ್ರೆಸ್‌ಗಳೆರಡೂ ಇದಕ್ಕೆ ಅವಕಾಶ ನೀಡುತ್ತವೆಯೇ ಎಂಬುದೊಂದು ದೊಡ್ಡಪ್ರಶ್ನೆ. ತಮ್ಮ ಆಂತರಿಕ ಹೊಲಸುಗಳು ಸಂಸತ್ತಿನಲ್ಲಿ ಬಯಲಾಗಬಾರದೆಂಬುದು ಇಬ್ಬರದ್ದೂ ಆಕಾಂಕ್ಷೆಯಾದ್ದರಿಂದ ಅವರಿಬ್ಬರೂ ಈ ಅಧಿವೇಶನದಲ್ಲೂ ಇನ್ನೊಂದು ಸುತ್ತಿನ 'ಮ್ಯಾಚ್‌ಫಿಕ್ಸಿಂಗ್'ಗೆ ಮುಂದಾಗಬಹುದು. ಸಿಪಿಐ(ಎಂ) ಸಂಸತ್ ಸದಸ್ಯರು, ಇತರ ಎಡಪಕ್ಷಗಳ ಮತ್ತು ಜಾತ್ಯಾತೀತ ಮಿತ್ರಪಕ್ಷಗಳ ಸದಸ್ಯರುಗಳ ಜತೆಗೂಡಿ ಈ ಅಧಿವೇಶನದ ಕಲಾಪಗಳು ನಡೆಯುವಂತೆ ಮತ್ತು ಸರಕಾರ ಜನಗಳ ಮತ್ತು ದೇಶದ ಹಿತದೃಷ್ಟಿಯಿಲ್ಲದ ಈ ಸುಧಾರಣೆಗಳನ್ನು ಕೈಬಿಡುವಂತೆ ಮಾಡಲು ಪ್ರಯತ್ನಿಸುತ್ತಾರೆ.

'ನೈಸ್' ಕರ್ಮಕಾಂಡ: ಸಂತ್ರಸ್ತರು ಸಂಘಟಿತರಾಗಬೇಕು

ಆರ್. ರಾಮಕೃಷ್ಣ

ಬಸಪ್ಪ ಅಂತ ಆ ರೈತನ ಹೆಸರು. ವಯಸ್ಸು 77 ವರ್ಷ. ಆವತ್ತು ಅವರ ಕಣ್ಣುಗಳು ಕಿಡಿ ಕಾರುತ್ತಿದ್ದವು. ಅವರ ಅಣ್ಣ 80 ವರ್ಷದ ಆರ್. ಹೊನ್ನಪ್ಪ, ಅವರ ಮಕ್ಕಳು ಇತರ ಕೆಲವು ಬಂಧುಗಳ ಅಲ್ಲಿದ್ದರು. ಎಲ್ಲರ ಮಾತುಗಳಲ್ಲಿಯೂ ಆಕ್ರೋಶ ಸಿಡಿಯುತ್ತಿತ್ತು. ತಲೆತಲಾಂತರಗಳಿಂದ ಬಳುವಳಿಯಾಗಿ ಬಂದ ತಮ್ಮ ಕುಟುಂಬದ ಆಸ್ತಿಯನ್ನು ಅನ್ಯಾಯವಾಗಿ ಕಳೆದುಕೊಂಡು ಬಿಟ್ಟೆವಲ್ಲ, ಹೋಗಿದ್ದು ಸಾಲದು ಅಂತ ಮತ್ತೆ ಉಳಿದಿರುವ ಭೂಮಿಯನ್ನೂ ಕಬಳಿಸಲು ಕ್ರೂರ ಬಾಯೊಂದು ಬಾಯಿ ತೆರೆದು ಕುಳಿತುಕೊಂಡಿದೆಯಲ್ಲ ಎಂಬುದು ಅವರ ಈ ಸಂಕಟ ಮತ್ತು ಸ್ಫೋಟಕ ಮನಸ್ಥಿತಿಗೆ ಕಾರಣವಾಗಿತ್ತು.



ಸೋಮಾಪುರ ಸರ್ಕಲ್ ನೈಸ್ ರಸ್ತೆ

ಇದು 'ನೈಸ್' ಹೆಸರಿನ ರೈತರ ಭೂಮಿ ನುಂಗುವ ವಂಚಕ ಯೋಜನೆಯ ದೈತ್ಯ ಚಪ್ಪಡಿ ತಳಕ್ಕೆ ಸಿಕ್ಕಿ ನರಳುತ್ತಿರುವ ನೂರಾರು ರೈತ ಕುಟುಂಬದಲ್ಲಿ ಒಂದು ರೈತ ಕುಟುಂಬದ ಕತೆ. ನೈಸ್ ಅಂದರೆ ಜನರ ಮನಸ್ಸಿಗೆ ಬರುವ ಚಿತ್ರವೇನು? ವಿಶಾಲ ರಸ್ತೆ-ಒಂದರ ಮೇಲೊಂದು ಹಾದು ಹೋಗುವ ಫ್ಲೈ ಓವರ್‌ಗಳು. ಇಂತಹವುಗಳು ಸಂಧಿಸುವ ಕೂಡು ಸ್ಥಳವನ್ನು ನೈಸ್ ಸಂಕೇತವೆಂಬಂತೆ ಬಿಂಬಿಸಲಾಗುತ್ತಿದೆ. ಈ ಕೂಡು ರಸ್ತೆಯ ಜಾಗವೇ ಹಿಂದೊಮ್ಮೆ ಈ ಬಸಪ್ಪ-ಹೊನ್ನಪ್ಪ ಸಹೋದರರು ಮಾಲೀಕರಾಗಿದ್ದ ಹೊಲವಾಗಿತ್ತು.

ಮೋಸದ ಅಗಾಧತೆ

ಆ 'ಖ್ಯಾತ' ಸರ್ಕಲ್ ಇರುವ ಜಾಗ ಸೋಮಾಪುರ ಅಂತ. ಆ ಜಾಗವನ್ನು ನೈಸ್ ಕಂಪನಿಗೆ ಕೊಟ್ಟವರು ಈ ರೈತರೇ.

ರಸ್ತೆ ಹೆಸರಿನಲ್ಲಿ ಮೊದಲು 17 ಎಕರೆ ಜಮೀನು ನೈಸ್ ಕೈ ಸೇರಿತು. ಎಕರೆಗೆ 7 ಲಕ್ಷದಂತೆ ಪರಿಹಾರ ದೊರೆಯಿತು. ಇವೆಲ್ಲಾ ಆಗುವವರೆಗೆ ಯೋಜನೆಯೊಳಗೆ ಹುದುಗಿಕೊಂಡಿರುವ ವಂಚನೆ ಅವರಿಗೆ ಗೊತ್ತಾಗಲಿಲ್ಲ. ಒಮ್ಮೆ ರಸ್ತೆ ಅಂತ ಆದ ಮೇಲೆ ನೈಸ್ ಹೆಣೆದಿರುವ ಪೂರ್ಣ ಜಾಲ ಈ ರೈತರ ಅರಿವಿಗೆ ಬಂತು. ಈ ಅಣ್ಣ ತಮ್ಮಂದಿರ ಆಸ್ತಿ ಈ ಗ್ರಾಮದಲ್ಲಿಯೂ ಮತ್ತು ಸುತ್ತ ಮುತ್ತಲೂ ಇದೆ. ಇದೇ ಸೋಮಾಪುರದಲ್ಲಿ ಈ ರೈತ ಕುಟುಂಬದ 18 ಎಕರೆ ಭೂಮಿಯನ್ನೂ ತನಗೆ ಕೊಡಲೇ ಬೇಕು ಅಂತ ಈಗ ಕಂಪನಿ ಈ ರೈತರ ಮೇಲೆ ದೌರ್ಜನ್ಯಕ್ಕೆ ನಿಂತಿದೆ. ರಸ್ತೆಯ ನಿರ್ಮಾಣಕ್ಕಾಗಿ ಈಗ ಅಲ್ಲಿ ನೈಸ್ ಕಂಪನಿಗೆ ಯಾವ ಭೂಮಿಯೂ ಬೇಕಿಲ್ಲ. ಆ ಕೆಲಸ ಈಗಾಗಲೇ ಮುಗಿದು ಹೋಗಿದೆ. ಮತ್ತೇಕೆ ಭೂಮಿ ? ಅದೂ ಅಲ್ಲದೇ ಈ ಜಮೀನು ನೈಸ್ ರಸ್ತೆಗೆ ತಾಗಿಕೊಂಡಂತೆ ಏನೂ ಇಲ್ಲ. ಒಂದು ಕಿ.ಮಿ.ನಷ್ಟು ದೂರದಲ್ಲಿದೆ. ನಾವು ಭೂಮಿ ಕೊಡುವುದಿಲ್ಲ ಅಂತ ರೈತರ ಹಠ. ಇಲ್ಲ, ಅದು ನಮಗೆ ಬೇಕೇ ಬೇಕು ಅಂತ ನೈಸ್ ಕಂಪನಿಯ ಹಠ. ನೈಸ್ ಕಂಪನಿ ಈ ಜಮೀನು ಸ್ವಾಧೀನ ಮಾಡಿಕೊಳ್ಳಲು ಕೆಐಎಡಿಬಿ ಯಿಂದ ಜಮೀನು ನೋಟಿಫೈ ಮಾಡಿಸಿಕೊಂಡಿದೆ. ಅಂದರೆ ಜಮೀನು ವಶಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಅಧಿಸೂಚನೆ ಹೊರಡಿಸುವಂತೆ ನೋಡಿಕೊಳ್ಳಲಾಗಿದೆ. ಜಮೀನಿನಲ್ಲಿ ಈಗಲೂ ರೈತರು ವ್ಯವಸಾಯ ಮಾಡುತ್ತಿದ್ದಾರೆ. ಜಮೀನು ರೈತರ ಸ್ವಾಧೀನದಲ್ಲೇ ಇದೆ. ಪರಿಹಾರದ ಹಣವನ್ನಂತೂ ರೈತರು ಮುಟ್ಟಿಯೇ ಇಲ್ಲ. ಭೂಮಿ ಮಾರಲು ಒಪ್ಪಿಲ್ಲ. ಆದರೆ ಸರ್ಕಾರದ ಅಧಿಕೃತ ಪಹಣಿ ದಾಖಲೆ ತೆಗೆದು ನೋಡಿದರೆ ರೈತರಿಗೇ ಆಘಾತ. ಮಾಲಿಕ ರೈತರ ಹೆಸರಿನ ಜೊತೆಗೆ 'ಕೆಐಎಡಿಬಿ ಭೂಸ್ವಾಧೀನ' ಅಂತ ತೋರಿಸುತ್ತಿದೆ ಪಹಣಿ. ಇದೇನು ಪವಾಡ ? ಇದು ನೈಸ್ ಎಂಬ ಭೂಗಳ್ಳ ಕಂಪನಿಯ ಕೈ ಚಳಕದಿಂದಾದ 'ಪವಾಡ' ಎನ್ನುತ್ತಿದ್ದಾರೆ ರೈತರು. ಕೆಐಎಡಿಬಿಯಿಂದ 18 ಎಕರೆ ನೋಟಿಫೈ ಮಾಡಿಸಿಕೊಂಡಿರುವ ನೈಸ್ ಕಂಪನಿ ಅದನ್ನು 118 ಎಕರೆ ಅಂತ ತಿದ್ದಿ ಸುತ್ತ ಮುತ್ತಲ ರೈತರ ಭೂಮಿಯನ್ನೆಲ್ಲಾ ಕಬಳಿಸಲು ಇನ್ನಿಲ್ಲದ ಕಿರುಕುಳ ಕೊಡುತ್ತಾ ರೈತರ ಮೇಲೆ ದಬ್ಬಾಳಿಕೆ ಮಾಡುತ್ತಿದೆ ಎಂಬ ದಂಡಿಯಾದ ವಿವರಗಳನ್ನು, ದಾಖಲೆಗಳನ್ನು ನೀಡುತ್ತಾರೆ ಈ ರೈತರು. ಇವರ 18 ಎಕರೆಗೆ ಮಾತ್ರವಲ್ಲ ಅಕ್ಕಪಕ್ಕದ ಹಳ್ಳಿಗಳಲ್ಲಿ ಇವರಿಗೆ ಇರುವ 2 ಎಕರೆ, 5 ಎಕರೆಗಳ ಬೇರೆ ಬೇರೆ ಜಮೀನನ್ನು ತನಗೆ ಮಾರಲೇ ಬೇಕೆಂದು 'ನೈಸ್' ತನ್ನ ಏಜೆಂಟರ ಮೂಲಕ ನಿರಂತರ ಒತ್ತಡ ಹೇರುತ್ತಿದೆಯಂತೆ.


ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಮ್

ನೈಸ್ ಕಂಪನಿಯ ಇಂತಹ ದಬ್ಬಾಳಿಕೆಯ ವಿರುದ್ಧ ಭೂ ಗಳ್ಳತನದ ವಿರುದ್ಧ ಹೋರಾಟ ನಡೆಸುತ್ತಿದ್ದ ಸಿದ್ದಲಿಂಗ ಪ್ರಭು ಎಂಬ ಕುಟುಂಬದ ಸದಸ್ಯ ಅಕ್ಟೋಬರ್ 17, 2011 ರಂದು ಕೊಲೆಯಾಗಿ ಹೋದರು. ಈ ಕೊಲೆ ಸಂಬಂಧ ನೈಸ್ ಕಂಪನಿಯ ಮಾಲಿಕ ಅಶೋಕ್ ಖೇಣಿಯ ಬಂಟನಾಗಿ ಕೆಲಸ ಮಾಡುತ್ತಿರುವ ರುದ್ರೇಶ್ ಮತ್ತು ಇತರ ನಾಲ್ವರ ಮೇಲೆ ಕೊಲೆ ಆರೋಪದ ಪ್ರಕರಣವನ್ನು ಈ ರೈತ ಕುಟುಂಬ ದಾಖಲಿಸಿದ್ದು ಪ್ರಕರಣದ ತನಿಖೆ ನಡೆಯುತ್ತಿದೆ.


ಕೊಲೆಯಾದ ಸಿದ್ದಲಿಂಗಪ್ರಭುರವರ ಮಡದಿ ಗಂಡನ ಚಿತ್ರದೊಂದಿಗೆ

ಇದು ನೈಸ್ ಕಂಪನಿಯ ನಿಜವಾದ ಮುಖವನ್ನು ತೆರೆದು ತೋರಿಸುವ ಹಲವು ಪ್ರಕರಣಗಳಲ್ಲಿ ಒಂದೇ ಒಂದು ಪ್ರಕರಣ. ಈ ವಂಚನೆಯನ್ನು ಮೀರಿದ ನಾನಾ ಪ್ರಕಾರದ ವಂಚಕ ಪ್ರಕರಣವು ಈ ಬಗೆಗೆ ವಿಚಾರಿಸುತ್ತಾ ಹೋದರೆ ಸಿಗುತ್ತಾ ಹೋಗುತ್ತವೆ.

ನೈಸ್‌ನಘೋರಮುಖ

ಮೈಸೂರು ಮತ್ತು ಬೆಂಗಳೂರು ನಗರಗಳ ನಡುವೆ ವಾಹನಗಳು ವೇಗವಾಗಿ ಸಂಚರಿಸಲು ಅನುಕೂಲವಾಗುವಂತಹ ಉತ್ತಮ ರಸ್ತೆ ನಿರ್ಮಿಸುವ ಹೆಸರಿನಲ್ಲಿ ನೈಸ್ ಕಂಪನಿಯು 1995ರಲ್ಲಿ ರಾಜ್ಯದಲ್ಲಿ ರಂಗ ಪ್ರವೇಶಿಸಿತು. ಆದರೆ ಅದರ ನಿಜವಾದ ಉದ್ದೇಶ ರಸ್ತೆ-ಅದರ ಮೂಲಕ 'ನ್ಯಾಯಬದ್ಧ'ವಾದ ಲಾಭ ಮಾಡುವುದು ಆಗಿರಲೇ ಇಲ್ಲ. ಅದರ ಉದ್ದೇಶ ಅದನ್ನೂ ಮೀರಿದ ಭಾರಿ ರಿಯಲ್ ಎಸ್ಟೇಟ್ ವ್ಯವಹಾರವಾಗಿತ್ತು. ರೈತರ ಭೂಮಿ ಮತ್ತು ಸಾರ್ವಜನಿಕ ಉದ್ದೇಶಕ್ಕೆ ಬಳಕೆಯಾಗಬೇಕಾದ ಸರ್ಕಾರಿ ಜಮೀನಿನ ದೈತ್ಯ ಲೂಟಿಯಾಗಿತ್ತು. ಈ ವಿಷಯವೀಗ ಯಾರಿಗೂ ಅನುಮಾನ ಇಲ್ಲದಷ್ಟು ಸ್ಪಷ್ಟವಾಗಿ ಹೋಗಿದೆ.

ಲೋಕಾಯುಕ್ತ ನ್ಯಾಯಾಲಯದ ಏಟು

ಅಕ್ಟೋಬರ್ 26, 2012 ರಂದು ಕರ್ನಾಟಕ ಲೋಕಾಯುಕ್ತ ವಿಶೇಷ ನ್ಯಾಯಾಲಯವು ಆದೇಶವೊಂದನ್ನು ನೀಡಿ ನೈಸ್ ಕಂಪನಿಯು ಬಿಎಂಐಸಿ ಯೋಜನೆಯಲ್ಲಿ ಕಳೆದ 17 ವರ್ಷಗಳಲ್ಲಿ ನಡೆದಿರುವ ಅಕ್ರಮಗಳ ಕುರಿತು ತನಿಖೆಗೆ ಮಾಡಲು ಆದೇಶ ನೀಡಿದೆ. ನೈಸ್ ಆಕ್ರಮವಾಗಿ ಮಾಡಿಕೊಂಡಿರುವ ಭೂಮಿಯನ್ನು ಸರ್ಕಾರದ ವಶಕ್ಕೆ ನೀಡುವಂತೆ ಆದೇಶಿಸಿದೆ. ಮಾತ್ರವಲ್ಲ, ಹೊಸೂರು ರಸ್ತೆ ಮತ್ತು ತುಮಕೂರು ರಸ್ತೆಗಳ ನಡುವೆ ಸಂಪರ್ಕ ಕಲ್ಪಿಸುವ ಬೆಂಗಳೂರು ಹೊರವಲಯದ ಸು. 41 ಕಿ.ಮಿ. ದೂರದ 'ನೈಸ್' ರಸ್ತೆಯ ಟೋಲ್ ಗೇಟುಗಳಲ್ಲಿ ಇಲ್ಲಿಯವರೆಗೆ ಸಂಗ್ರಹಿಸಲಾಗಿರುವ ಸುಮಾರು 75 ಕೋಟಿ ರೂಪಾಯಿಗಳಷ್ಟು ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಆದೇಶ ನೀಡಿದೆ. ಕೊನೆಗೂ ನ್ಯಾಯಾಲಯಕ್ಕೆ ನೈಸ್ ಕಂಪನಿಯ 'ವ್ಯವಹಾರ'ಗಳು, 'ಅಭಿವೃದ್ಧಿ ಕಾರ್ಯ'ಗಳು ಹೇಗೆ ಕಂಡಿವೆ ಎಂಬುದಕ್ಕೆ ನ್ಯಾಯಾಲಯದ ಈ ಆದೇಶವೇ ಸಾಕ್ಷಿಯಾಗಿದೆ. ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಎಂಬುವವರು ನೈಸ್ ಕಂಪನಿಯ ವಿರುದ್ಧ ಹೂಡಿರುವ ಮೊಕದ್ದಮೆ ಹಾಗೂ ಒದಗಿಸಿರುವ ದಾಖಲೆಗಳ ಆಧಾರದಲ್ಲಿ ನ್ಯಾಯಾಲಯ ಈ ಆದೇಶ ನೀಡಿದೆ. ನೈಸ್ ಅಕ್ರಮಗಳ ವಿರುದ್ಧ

ಪುಟ 10 ಕ್ಕೆ

ಮನೆ ನಿವೇಶನಗಳಿಗಾಗಿ – ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ ಒತ್ತಾಯಿಸಿ

40 ಸಾವಿರ ಅರ್ಜಿದಾರರ ಬಂಧನ–ಬಿಡುಗಡೆ

ವರದಿ–2

ಸರ್ಕಾರ ಭರವಸೆಗಳ ಮೇಲೆ ಭರವಸೆ ನೀಡುತ್ತಿದೆಯೇ ಹೊರತು ನಿವೇಶನ, ಭೂಮಿ ನೀಡದೇ ನಿರ್ಲಕ್ಷಿಸುತ್ತಿದೆ. ಬೇಡಿಕೆಗಾಗಿ ಹೋರಾಟಕ್ಕೆ ಮುಂದಾದಾಗ ಬಂಧಿಸಿದೆ ನೂರಾರು ಜನರನ್ನು ಜೈಲಿಗೂ ತಳ್ಳಿದೆ. ಇದರ ವಿರುದ್ಧ ನಡೆದ ರಾಜ್ಯವ್ಯಾಪ್ತಿ ಚಳುವಳಿಯ ವರದಿ–2 ಇಲ್ಲಿದೆ.

ಸ್ವಂತ ಮನೆ ನಿವೇಶನ ಇಲ್ಲದವರಿಗೆ ನಿವೇಶನಗಳನ್ನು ವಿತರಣೆ ಮಾಡಬೇಕು, ಸರ್ಕಾರಿ ಜಾಗಗಳಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುವ ಬಡವರಿಗೆ ಹಕ್ಕುಪತ್ರ ನೀಡಬೇಕು, ಕಂದಾಯ ಭೂಮಿ ಹಾಗೂ ಅರಣ್ಯ ಇಲಾಖೆಗೆ ಸೇರಿರುವ ಕೃಷಿ ಯೋಗ್ಯ ಭೂಮಿಯಲ್ಲಿ ಹಲವಾರು ವರ್ಷಗಳಿಂದ ವ್ಯವಸಾಯ ಮಾಡುತ್ತಿರುವ ಬಡ ರೈತ ಮತ್ತು ಭೂರಹಿತ ಕೃಷಿ ಕೂಲಿಕಾರರಿಗೆ ಸಾಗುವಳಿ ಚೀಟಿ ಕೊಡಬೇಕು ಎಂದು ಅಗ್ರಹಿಸಿ ಇದೇ ನವೆಂಬರ್ 5ರಂದು ಸರ್ಕಾರಿ ಕಛೇರಿಗಳಿಗೆ ಮುತ್ತಿಗೆ ಹಾಕಿ ಬಂಧನಕ್ಕೆ ಒಳಗಾಗಲು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ನೀಡಿದ ಕರೆಗೆ ರಾಜ್ಯಾದ್ಯಂತ ವ್ಯಾಪಕ ಬೆಂಬಲ ವ್ಯಕ್ತವಾದ ಬಗ್ಗೆ ಕಳೆದ ವಾರ ವರದಿ ಓದಿದ್ದೀರಿ. ಈ ವಾರ ಉಳಿದ ಜಿಲ್ಲೆಗಳ ವರದಿ ಓದಿ.

ಕುಂದಾಪುರ ತಾಲೂಕು ಪಂಚಾಯತ್ ಕಚೇರಿಗೆ ಮುತ್ತಿಗೆ ಪ್ರತಿಭಟನೆ

ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವ ಬಡವರಿಗೆ ಕೂಡಲೇ ನಿವೇಶನ ನೀಡುವಂತೆ ಒತ್ತಾಯಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಸದಸ್ಯರು ಕುಂದಾಪುರ ತಾಲೂಕು ಪಂಚಾಯತ ಕಚೇರಿ ಹಾಗೂ ಉಡುಪಿ ತಾಲೂಕು ಪಂಚಾಯತ್ ಕಚೇರಿ ಎದುರು ನವೆಂಬರ್ 5 ರಂದು ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿ ಹಾಗೂ ಮನೆ ನಿವೇಶನ ರಹಿತರ ಹೋರಾಟ ಸಮಿತಿ ಆಶ್ರಯದಲ್ಲಿ ನಡೆದ ಎರಡೂ ತಾಲೂಕು ಪಂಚಾಯತ್ ಕಚೇರಿ ಮುತ್ತಿಗೆ ಹೋರಾಟ ಚಳುವಳಿಯನ್ನು ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದ ಸ್ವಾಮಿ ಉದ್ಘಾಟಿಸಿ ಮಾತನಾಡುತ್ತಾ, ರಾಜ್ಯಾದ್ಯಂತ ಶ್ರೀಮಂತರು ಹಾಗೂ ಭೂ ಮಾಲಕರು ಅತಿಕ್ರಮವಾಗಿ ಆಕ್ರಮಿಸಿಕೊಂಡಿರುವ ಸಾವಿರಾರು ಎಕ್ರೆ ಸರಕಾರಿ ಭೂಮಿಗಳನ್ನು ವಶಪಡಿಸಿಕೊಂಡು ರಾಜ್ಯದಲ್ಲಿರುವ ನಿವೇಶನ ರಹಿತ ಬಡವರಿಗೆ ಹಂಚುವ ಕಾರ್ಯಕ್ರಮಗಳು ಸರಕಾರದಿಂದ ಕೂಡಲೇ ನಡೆಯಬೇಕು ಎಂದು ಸರಕಾರವನ್ನು ಆಗ್ರಹಿಸಿದರು.



ಕುಂದಾಪುರದಲ್ಲಿ ಬಂಧನಕ್ಕೊಳಗಾಗುತ್ತಿರುವ ಚಳುವಳಿಗಾರರು

ಸ್ವಂತ ಭೂಮಿಯನ್ನು ಹೊಂದುವುದು ಪ್ರತಿಯೊಬ್ಬ ಮನುಷ್ಯನ ಮೂಲಭೂತ ಹಕ್ಕು, ಕೃಷಿಕರಿಗೆ ಕೃಷಿ ಭೂಮಿ, ನಿವೇಶನ ರಹಿತರಿಗೆ ನಿವೇಶನ ನೀಡುವ ಜವಾಬ್ದಾರಿ ಸರಕಾರದ್ದು. ಒಂದೊಮ್ಮೆ ಈ ವಿಚಾರದಲ್ಲಿ ಸರಕಾರ ಮೀನ ಮೇಷ ಎಣಿಸಿದರೆ ರಾಜ್ಯಾದ್ಯಂತ ಅನಿರ್ದಿಷ್ಟ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ನಿತ್ಯಾನಂದ ಸ್ವಾಮಿ ಸರಕಾರವನ್ನು ಎಚ್ಚರಿಸಿದರು. ಕಳೆದ 15 ವರ್ಷಗಳಿಂದ ನಮ್ಮನ್ನಾಳಿದ ಕಾಂಗ್ರೆಸ್ ಹಾಗೂ ಬಿ.ಜೆ.ಪಿ. ಸರಕಾರಗಳು ಬಡವರಿಗೆ ನಿವೇಶನ ನೀಡುವುದು ಬಿಡಿ, ಕನಿಷ್ಟ ಆಲೋಚನೆಯನ್ನೂ ಮಾಡಿರುವುದಿಲ್ಲ. ಬಡವರು ಭೂಮಿಯ ಹಕ್ಕಿಗಾಗಿ ಹೋರಾಡುತ್ತಿದ್ದಾರೆ, ಸರಕಾರ ಮಂತ್ರಿಗಳು ಭೂ ಕಬಳಿಕೆಯಲ್ಲಿ ತೊಡಗಿದ್ದಾರೆ ಎಂದು ಸ್ವಾಮಿ ದೂರಿದರು.

ಉಡುಪಿ ಜಿಲ್ಲೆಯಲ್ಲಿ 12 ಸಾವಿರ ನಿವೇಶನ ರಹಿತರಿಗೆ ಹಕ್ಕುಪತ್ರ ವಿತರಿಸಲಾಗುವುದು ಎಂದು ಹೇಳಲಾಗಿದ್ದರೂ ಈ ತನಕ ನಿವೇಶನ ಹಂಚಿಕೆ ಪ್ರಕ್ರಿಯೆ ಆರಂಭವಾಗಿಲ್ಲ. ರಾಜ್ಯದಲ್ಲಿ 12 ಲಕ್ಷ ಎಕ್ರೆ ಭೂಮಿ ಒತ್ತುವರಿಯಾಗಿರುವುದಾಗಿ ಬಾಲಸುಬ್ರಹ್ಮಣ್ಯಂ ಸಮಿತಿ ವರದಿ ನೀಡಿದೆ. ಕರ್ನಾಟಕದಲ್ಲಿ 85 ಲಕ್ಷ ನಿವೇಶನ ರಹಿತರಿದ್ದಾರೆ. ಆದ್ದರಿಂದ ಒತ್ತುವರಿ ಭೂಮಿಯನ್ನು ಸರಕಾರ ಕೂಡಲೇ ವಶಕ್ಕೆ ತೆಗೆದುಕೊಂಡು ಬಡವರಿಗೆ ಹಂಚಬೇಕು. ರಾಜ್ಯ ಸರಕಾರ ತಿದ್ದುಪಡಿ ಮಾಡಿ ಸದನದಲ್ಲಿ ಮಂಡಿಸಿದ 94ಸಿ ಕಂದಾಯ ಕಾಯಿದೆಯ ಅನುಷ್ಠಾನದಿಂದ ಕರಾವಳಿಯ ಉಭಯ ಜಿಲ್ಲೆಯಲ್ಲಿನ ಶೇಕಡಾ 80% ರಿಂದ 90% ರಷ್ಟು ಸಂಭಾವ್ಯ ಫಲಾನುಭವಿ ಕುಟುಂಬಗಳಿಗೆ ಮನೆ ನಿವೇಶನದ ಹಕ್ಕುಪತ್ರ ಲಭ್ಯವಾಗುವುದು ಕನಸು. ಆದರೆ ಸದನದಲ್ಲಿ ಮಂಡಿಸಿದ್ದರೂ ರಾಜ್ಯಪಾಲರು ಈ ತಿದ್ದುಪಡಿಯನ್ನು ಅಸಮ್ಮತಿಸಿ ಪುನರ್ ವಿಮರ್ಶೆಗೆ ಹಿಂದಕ್ಕೆ ಕಳುಹಿಸಿದ್ದು, ಬದಲಾವಣೆಗೆ ಮತ್ತೊಮ್ಮೆ ಅವಕಾಶ ನೀಡಿದಂತಾಗಿದೆ. ಈಗ ಇರುವಂತೆಯೇ ತಿದ್ದುಪಡಿ ವಿಧೇಯಕ ಮಂಜೂರಾಗಿದ್ದರೆ ಗೋಮಾಳ, ಡೀಮ್ಡ್ ಫಾರೆಸ್ಟ್, ಕುಮ್ಕಿ ಮೊದಲಾದ ಜಾಗದಲ್ಲಿ ಮನೆ ಕಟ್ಟಿಕೊಂಡಿರುವವರ ಜಾಗ ಸಕ್ರಮವಾಗುವುದಿಲ್ಲ. ದ.ಕ ಮತ್ತು ಉಡುಪಿ ಜಿಲ್ಲೆಯಲ್ಲಿನ ಸರಕಾರಿ ಭೂಮಿಯಲ್ಲಿ ಮನೆ ಕಟ್ಟಿಕೊಂಡವರ ಬಹುತೇಕ ಜಾಗಗಳು ಗೋಮಾಳ, ಕುಮ್ಕಿ, ಪರಂಬೋಕುವಿನಂತಹ ಜಾಗದಲ್ಲಿಯೇ ಬರುತ್ತದೆ. ಈ ಜಾಗದಲ್ಲಿರುವ ಕುಟುಂಬಗಳಿಗೆ ಹಕ್ಕುಪತ್ರ ಲಭ್ಯವಾಗುವಂತೆ ತಿದ್ದುಪಡಿ ನಡೆದರೆ ಮಾತ್ರ ಕರಾವಳಿಗರಿಗೆ ಲಭ್ಯವಾಗುತ್ತದೆ. ಬಿ.ಜೆ.ಪಿ. ಸರಕಾರ 94ಸಿ ಗೆ ತಿದ್ದುಪಡಿ ಮಾಡಿರುವುದು ಸರಿಯಾಗಿಲ್ಲ, ಈ ವಿಧೇಯಕಕ್ಕೆ ರಾಜ್ಯಪಾಲರು ಅಂಕಿತ ಹಾಕದಿರುವುದು ಸರಿಯಾಗಿದೆ ಎಂದು ನಿವೇಶನ ರಹಿತರ ಬೃಹತ್ ಸಮಾವೇಶದ ಸಭೆಯಲ್ಲಿ ಅಭಿಪ್ರಾಯ ತರಲಾಯಿತು.



ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿಯಲ್ಲಿ ತಾಲ್ಲೂಕು ಕಛೇರಿ ಮುತ್ತಿಗೆ

ಸರಕಾರಿ ಜಮೀನಿದ್ದಲ್ಲಿ ಸರಕಾರಿ ಜಮೀನನ್ನು, ಇಲ್ಲದ ಕಡೆ ಖಾಸಗಿಯವರಿಂದ ಖರೀದಿಸಿ ನಿವೇಶನ ನೀಡಲಾಗುವುದು. ಉಡುಪಿಯಲ್ಲಿ 68 ಎಕ್ರೆ ಭೂಮಿ ಗುರುತಿಸಲಾಗಿದೆ ಎಂದು ಸರಕಾರ ಹೇಳಲಾಗಿದ್ದರೂ ಈ ನಿಟ್ಟಿನಲ್ಲಿ ನಿವೇಶನ ರಹಿತರಿಗೆ ಹಕ್ಕುಪತ್ರ ಮಂಜೂರು ಮಾಡುವ ಯಾವುದೇ ಪ್ರಕ್ರಿಯೆ ಆರಂಭಗೊಂಡಿಲ್ಲ ಎಂದು ಸಭೆಯಲ್ಲಿ ಆತಂಕ ವ್ಯಕ್ತ ಪಡಿಸಲಾಯಿತು.



ಹಾಸನ ತಾಲ್ಲೂಕು ಕಛೇರಿ ಮುತ್ತಿಗೆಗೆ ಹೋರಾಟ ಭಗರ್ ಹುಕುಂ ಸಾಗುವಳಿದಾರರು

ಭೂಮಿ ಹಕ್ಕಿನ ಹೋರಾಟದ – ತಾಲೂಕು ಪಂಚಾಯತ್ ಕಚೇರಿ ಮುತ್ತಿಗೆ– ಬಂಧನಕ್ಕೊಳಗಾಗುವ ಚಳುವಳಿಯ ಬೃಹತ್

ಪುಟ 12 ಕ್ಕೆ

'ನೈಸ್': ಸಂತ್ರಸ್ಥರು ಸಂಘಟಿತರಾಗಬೇಕು

ಪುಟ 8 ರಿಂದ

ಹೋರಾಡುತ್ತಿರುವ ನನಗೆ ನೈಸ್ ಮುಖ್ಯಸ್ಥ ಅಶೋಕ್ ಖೇಣಿಯಿಂದ ಪ್ರಾಣ ಬೆದರಿಕೆ ಇದೆ ಎಂದು ಟಿಜೆ ಅಬ್ರಹಾಂ ಇತ್ತೀಚೆಗೆ ಸಾರ್ವಜನಿಕವಾಗಿ ಹೇಳಿಕೊಂಡಿದ್ದಾರೆ.

'ನೈಸ್' ಎಂಬ ದಗಾಕೋರ ಕಂಪನಿಯ ಯೋಜನೆ

1995 ರಲ್ಲಿ ಎಚ್.ಡಿ.ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಜನ್ಮ ತಳೆದ ಯೋಜನೆ ಇದು.

ಮೂಲ ಯೋಜನೆಯಂತೆ 18,313 ಎಕರೆ ಭೂಮಿಯನ್ನು ಯೋಜನೆಗೆ ನೀಡಬೇಕೆಂದಿತ್ತು. ಮುಂದೆ ಯೋಜನೆಗೆ ಅಗತ್ಯವಾದ ಭೂಮಿಯ ಪ್ರಮಾಣವನ್ನು 20,193 ಎಕರೆಗೆ ಏರಿಸಲಾಗಿದೆ. ರಸ್ತೆ ನಿರ್ಮಾಣದ ನೆಪವನ್ನು ತೋರಿಸುತ್ತಾ ಅಗ್ಗದ ದರದಲ್ಲಿ ರೈತರ ಭೂಮಿ ಕಿತ್ತುಕೊಳ್ಳುವುದು, ಸರ್ಕಾರಿ ಜಮೀನನ್ನು ಬಾಚಿಕೊಳ್ಳುವುದು, ಯೋಜನೆಯ ಭಾಗವಾದ 'ಟೌನ್ ಶಿಪ್' ಹೆಸರಿನಲ್ಲಿ ಅಧಿಕೃತವಾಗಿಯೇ ಸಹಸ್ರಾರು ಕೋಟಿ ರೂಪಾಯಿಗಳ ರಿಯಲ್ ಎಸ್ಟೇಟ್ ದಂಧೆ ನಡೆಸುವುದು ನೈಸ್‌ನ ಬಹಿರಂಗವಾಗಿಯೇ ಕಾಣುತ್ತಿರುವ ಯೋಜನೆ.

ಅದಕ್ಕೆ ತಕ್ಕಂತೆ ಯೋಜನೆಯಲ್ಲಿ ರಸ್ತೆಗೆ ಅಗತ್ಯವಾಗಿರುವುದಕ್ಕಿಂತಲೂ ಭಾರಿ ಪ್ರಮಾಣದ ಭೂಮಿ ದೊರಕುವಂತೆ ಯೋಜಿಸಿಕೊಳ್ಳಲಾಗಿದೆ.

ಈ ವಿಷಯದಲ್ಲಿ ನುರಿತ ಕೆಲವರು ಅಂದಾಜು ಮಾಡಿರುವಂತೆ ನೈಸ್ ಕಂಪನಿ ಅಧಿಕೃತವಾಗಿ ಪಡೆದುಕೊಂಡಿರುವ ಭೂಮಿಯಲ್ಲಿ ನಿಜಕ್ಕೂ ರಸ್ತೆಯ ಉದ್ದೇಶಕ್ಕೆ ಬಳಕೆಯಾಗಿರುವುದು ಮತ್ತು ಆಗುವುದು ಒಟ್ಟು ಸೇರಿ ಕೇವಲ ಶೇ. 30 ರಷ್ಟು ಭೂಮಿ ಮಾತ್ರ. ಇನ್ನು ಉಳಿದ ಶೇ. 70 ರಷ್ಟು ಭೂಮಿ ಬಳಕೆಯಾಗುವುದು ಟೌನ್ ಶಿಪ್ ಇತ್ಯಾದಿ ರಿಯಲ್ ಎಸ್ಟೇಟ್ ದಂಧೆಗೆ. ಇಂತಹ ಒಂದು 'ರಿಯಲ್ ಎಸ್ಟೇಟ್ ದಂಧೇಕೋರ' ಯೋಜನೆಗೆ ನಮ್ಮ ಆಳುವ ಸರ್ಕಾರ 'ಕಣ್ಣು ಮುಚ್ಚಿಕೊಂಡು' ಯಾಕೆ ಒಪ್ಪಿಗೆ ಕೊಟ್ಟಿವೆ ಎಂಬುದು ನಿಜಕ್ಕೂ ತನಿಖೆಗೆ ಗುರಿಯಾಗಬೇಕಾದ ಪ್ರಶ್ನೆ. ನ್ಯಾಯಾಲಯ ಈಗ ಅದಕ್ಕೇ ಆದೇಶ ನೀಡಿದೆ.

ಬೇನಾಮಿ ವ್ಯಾಪಾರ-ಭೂಗತ ದಗಲ್ಬಾಜಿ ವ್ಯವಹಾರ

ಘೋಷಿತ ಅಧಿಕೃತ ಭೂದಂಧೆ ವ್ಯವಹಾರಗಳಲ್ಲದೇ ನೈಸ್ ಕಂಪನಿಯ ಅಘೋಷಿತ, ಭೂಗತ ವ್ಯವಹಾರಗಳು ನಾನಾ ರೂಪಗಳಲ್ಲಿ ನಡೆದಿರುವುದು ಈ ಭಾಗದ ಯಾವುದೇ ರೈತರನ್ನು ಕೇಳಿದರೂ ಹೊರಬೀಳುವ ಒಂದು ಭೀಕರ ಸತ್ಯ.

ತನ್ನ ಏಜೆಂಟರ ಮೂಲಕ ರಸ್ತೆಯ ಇಕ್ಕೆಲಗಳ ರೈತರು ಜಮೀನು ಪರಭಾರೆ ಮಾಡುವಂತೆ ಇನ್ನಿಲ್ಲದ ಆಮಿಷ ತೋರಿಸಿ, ಆಮೀಷಕ್ಕೆ ಬಲಿಯಾಗದಿದ್ದರೆ, ಬೆದರಿಸಿ ಖರೀದಿ ರೂಪದಲ್ಲಿ ರೈತರ ಜಮೀನು ಕಿತ್ತುಕೊಳ್ಳುವುದು ನಡೆಯುತ್ತಿದೆ. 'ಎಂ.ಆರ್.ಆರ್. ಡೆವಲಪರ್' ಎಂಬುದು ಇಲ್ಲಿನ ಇಂತಹ ಕೆಲಸ ಮಾಡುತ್ತಿರುವ ನೈಸ್ ಕಂಪನಿಯ ಮಾಲಿಕ ಅಶೋಕ್ ಖೇಣಿಯ ಒಂದು ಬೇನಾಮಿ ಸಂಸ್ಥೆ. ಸುತ್ತಿ ಬಳಸಿ ಆ ಜಮೀನು ಮತ್ತೆ ನೈಸ್ ಖೇಣಿಯ ಕೈಗೇ ಹೋಗಿ ಬೀಳುತ್ತದೆ ಎನ್ನುತ್ತಾರೆ ರೈತರು.

ನೈಸ್ ಕಂಪನಿಯ ಭೂ ದಾಹ ಅರ್ಥವಾಗಬೇಕಾದರೆ ಈ ಮಾಹಿತಿ ನೋಡ ಬೇಕು. ನೈಸ್ ಕಂಪನಿ ರೈತರಿಗೆ ಪರಿಹಾರ ನೀಡಿರುವುದು ಮತ್ತು ನೀಡುವುದು ಎಕರೆ ಭೂಮಿಗೆ ಕೆಲವೆಡೆ 6.25 ಲಕ್ಷ, ಕೆಲವು ಕಡೆ 7 ಲಕ್ಷ. ಈಗ ಈ ಭಾಗದಲ್ಲಿ ಇದೇ ಜಮೀನಿನ ಮಾರುಕಟ್ಟೆ ಮೌಲ್ಯ ಎಕರೆಗೆ 80–90 ಲಕ್ಷ, ಕೆಲವೆಡೆ ಒಂದು ಕೋಟಿ ಒಂದೂ ಕಾಲು ಕೋಟಿ ಮೀರಿದೆ. ರಸ್ತೆ ಹೆಸರಿನಲ್ಲಿ ರೈತರ ಭೂಮಿಯನ್ನು ಬಿಸಾಡುವ ಬೆಲೆಯಲ್ಲಿ ಹೊಡೆದುಕೊಳ್ಳಲು ನಮ್ಮ ಆಳುವ ಸರ್ಕಾರಗಳು–ನಮ್ಮ ವ್ಯವಸ್ಥೆಯೇ ಅವಕಾಶ ಮಾಡಿಕೊಟ್ಟರೆ ನೈಸ್‌ಗೆ ಯಾಕೆ ತಾನೇ ಬೇಡ !!

ಟೌನ್ ಶಿಪ್ ಎಂಬ ದೋಖಾ

ಬೆಂಗಳೂರಿನಿಂದ ಮೈಸೂರು ಕಡೆಗೆ ಹೋಗುವ ಮಾರ್ಗದಲ್ಲಿ ಹೆದ್ದಾರಿಯ ಬಲಭಾಗಕ್ಕೆ ತಿಪ್ಪೂರು, ಶೀಗೇಹಳ್ಳಿ, ಲಿಂಗಾಪುರ ಮುಂತಾದ ಹಳ್ಳಿಗಳಿವೆ. ಈ ಯೋಜನೆಯ ಆರಂಭ ಘಟ್ಟದಲ್ಲಿ ಅಂದರೆ ಸು. ಒಂದೂವರೆ ದಶಕಗಳ ಹಿಂದೆ ಈ ಹಳ್ಳಿಗಳ 3,500 ಎಕರೆ ತೆಂಗಿನ ಸಹಿತವಾದ ಸಾಗುವಳಿ ಜಮೀನನ್ನು ನೈಸ್ ಕಂಪನಿಯ ಟೌನ್‌ಶಿಪ್‌ಗೆಂದು ನೋಟಿಫೈ ಮಾಡಲಾಗಿದೆ. ಅಲ್ಲಿನ ರೈತರು ತಮ್ಮ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿರುವುದು ಬಿಟ್ಟರೆ ಜಮೀನಿಗೆ ಸಾಲ ಗೀಲ ಪಡೆದುಕೊಳ್ಳುವಂತಿಲ್ಲ, ಒಂದು ಬೋರ್ ವೆಲ್ ಹಾಕಿಕೊಳ್ಳುವುದು ಕೂಡ ಆಗದ ಕೆಲಸವಾಗಿದೆ. ಮಕ್ಕಳ ಶಿಕ್ಷಣ, ಮದುವೆ ಇತ್ಯಾದಿಗಳಿಗಾಗಿ ಜಮೀನು ಮಾರಲು ಹೋದರೆ ನೋಟಿಫಿಕೇಷನ್ ಭೂತ ಅಡ್ಡ ಬರುತ್ತಿದೆ. ಯಾರೂ ಕೊಳ್ಳುವವರಿಲ್ಲ. ಇಲ್ಲಿ ಈ ಜಮೀನಿನ ಬೆಲೆ ಎಕರೆಗೆ ಸುಮಾರು ಮುಕ್ಕಾಲು ಕೋಟಿ ದಾಟಿ ಇದ್ದರೆ ನೈಸ್ ಕಂಪನಿಯು ಜಮೀನು ಅಧಿಸೂಚನೆ ಹೊರಡಿಸಿದಾಗ ನಿಗದಿಯಾದ ಬೆಲೆ ಅಂದರೆ ಎಕರೆಗೆ ಜಜುಬಿ ಹಣ ಮಾತ್ರ ಕೊಡುತ್ತೇನೆ ಅನ್ನುತ್ತಿದೆ. ಹೇಗಿದೆ ದಗಲುಬಾಜಿತನದ ಸ್ವರೂಪ.

ರೈತರು ಮಾತ್ರವಲ್ಲ ಈ ಭಾಗದ ಬಡ ನಿವೇಶನದಾರರು ಸಹ ನೈಸ್ ದೌರ್ಜನ್ಯದಡಿ ನಲುಗಿಹೋಗಿದ್ದಾರೆ. ಬೆಂಗಳೂರಿನಲ್ಲಿ ನೈಸ್ ರಸ್ತೆಯ ಆರಂಭ ಬಿಂದು ಇರುವುದು ಹೊಸಕೆರೆ ಹಳ್ಳಿಯಲ್ಲಿ. ಈಗ ಅಲ್ಲಿ ಪ್ರವೇಶ ದ್ವಾರವಿರುವ ಜಾಗದಲ್ಲಿ ಮೊದಲಿಗೆ ಒಂದು ರೆವಿನ್ಯೂ ಬಡಾವಣೆ ಇತ್ತು. ಹತ್ತಾರು ಸಂಸಾರಗಳು ಅಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದವು. ಒಂದು ದಿನ ದಿಢೀರನೆ ಭೂಮಿ ನೈಸ್ ಕಂಪನಿಯ ವಶವಾಯಿತು. ಮನೆಗಳನ್ನು ನಿರ್ದಯವಾಗಿ ಒಡೆಯಲಾಯಿತು. ಈಗ ನೋಡಿದರೆ ಆ ಪ್ರವೇಶದ್ವಾರದ ಅಕ್ಕ–ಪಕ್ಕ ರಸ್ತೆ ಮತ್ತು ಟೋಲ್‌ಗೇಟ್ ಆದ ನಂತರವೂ ಸಾಕಷ್ಟು ವಿಶಾಲವಾದ ಜಾಗ ಮಿಕ್ಕಿದೆ. ನಿವೇಶನದಾರರು ಅಲ್ಲಿ ತಮಗೆ ನಿವೇಶನ ಕೊಡಿ ಎಂದು ಬೇಡಿಕೆ ಇಟ್ಟು ಹೋರಾಟ ನಡೆಸುತ್ತಿದ್ದಾರೆ. ಆದರೆ ಜಮೀನಿನ ಮೂಲ ಮಾಲಿಕನಿಗೆ ಎಕರೆ ಲೆಕ್ಕದಲ್ಲಿ ನಿಕೃಷ್ಟ ಪರಿಹಾರ ಧನ ಮಾತ್ರ ಕೊಡಲು ಸಿದ್ಧವಿರುವ ಖೇಣಿ ನಿವೇಶನದಾರರ ಯಾವ ಕಷ್ಟವನ್ನು ಕೇಳದೆ ಕಿವುಡನಂತೆ, ಕುರುಡನಂತೆ ವರ್ತಿಸುತ್ತಿದ್ದಾನೆ.

ಜನರ ಕಣ್ಣಿಗೆ ಮಂಕುಬೂದಿ

ರೈತರ ಜಮೀನು ಕಬಳಿಸಲು ಎಲ್ಲವನ್ನು ಬಿಟ್ಟು ಟೊಂಕ ಕಟ್ಟಿ ನಿಂತಿರುವ ಈ ನೈಸ್ ಕಂಪನಿ ತನ್ನ ಅಸಲಿ ಮುಖ ಕಾಣದಂತೆ ಮಸುಕು ಮಾಡಲು ನಾನಾ ತಂತ್ರಗಳನ್ನು ಹೂಡುತ್ತಿದೆ. ಊರಿಗೆ ದೇವಾಲಯವನ್ನು ಕಟ್ಟಿಸಿ ಕೊಡುವುದು ಅಂತಹ ಯೋಜನೆಯಲ್ಲಿ ಒಂದು .

ಇದೇ ಸೋಮಾಪುರದ ಸಮೀಪ ಬಸವಣ್ಣನ ದೇವಸ್ಥಾನವೊಂದನ್ನು ಕಂಪನಿ ಕಟ್ಟಿಕೊಟ್ಟಿದೆ. ಇಲ್ಲಿ ರೈತರು ಪುಗಸಟ್ಟೆಯಾಗಿ ಕೊಟ್ಟ ಜಮೀನಿನ ಮೇಲೆ ತಲೆ ಎತ್ತಿದೆ ಈ ದೇಗುಲ. ವರಾಸಂದ್ರ ಎಂಬ ಇಲ್ಲಿನ ಗ್ರಾಮವೊಂದರಲ್ಲಿ ಹೀಗೆ ಕಟ್ಟಲಾದ ಕಲ್ಯಾಣ ಮಂಟಪದ ವ್ಯಾಪಾರಿ ಉದ್ದೇಶವನ್ನು ಅರಿತ ರೈತರು ಕಲ್ಯಾಣ ಮಂಟಪವನ್ನೇ ಒಡೆದು ಹಾಕಿದ್ದಾರಂತೆ.

ನೈಸ್ ಹೂಡಿದ ಬಾರಿ ಬಂಡವಾಳ

ಉದಾರೀಕರಣ, ಜಾಗತೀಕರಣದ ಯುಗದಲ್ಲಿ ಸರ್ಕಾರ ಮಾಡಬೇಕಿದ್ದ ಎಲ್ಲ ಕೆಲಸಗಳನ್ನು ಖಾಸಗಿಯವರ ಹೆಗಲಿಗೆ ವಹಿಸುತ್ತಾ ಖಾಸಗಿ ಕಂಪನಿಗಳು ನೈಸರ್ಗಿಕ ಸಂಪತ್ತನ್ನು, ಕೊಳ್ಳೆ ಹೊಡೆಯಲು, ಜನರನ್ನು ಹಿಂಡಿ ಅಪಾರ ಲಾಭವನ್ನು ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತಿದೆ. ಈ ಪೈಕಿ ರಸ್ತೆ, ಸೇತುವೆಗಳಂತಹ ಆಧುನಿಕ ಬದುಕಿನ ಮೂಲಭೂತ ಅಗತ್ಯಗಳು ಸೇರಿಬಿಟ್ಟಿವೆ.

ಇವನ್ನೆಲ್ಲಾ ಸರ್ಕಾರವೇ ಮಾಡಬಹುದಲ್ಲ ಎಂದರೆ ಉತ್ತರ ಸಿದ್ಧವಾಗಿರುತ್ತದೆ. ಯೋಜನೆಗೆ ಅಗತ್ಯವಾದ ಬಂಡವಾಳ ಹೂಡುವವರು ಯಾರು ? ಬಂಡವಾಳವನ್ನು ಎಲ್ಲಿಂದ ತರುವುದು ? ಎಂಬುದೇ ಆ ಪ್ರಶ್ನೆ. ಸರ್ಕಾರದ ಬಳಿ ಹಣ ಇಲ್ಲ ಎಂಬುದು ಒಂದು ಬಗೆಯ ಸುಳ್ಳು. ಮತ್ತೊಂದು ಕಡೆ ಈ ನೈಸ್ ಕಂಪನಿಯಂತಹ ಕಂಪನಿ ಈ ಬಿಎಂಐಸಿ ಯೋಜನೆಯಲ್ಲಿ ಏನು ಮಹಾ ಬಂಡವಾಳ ಹೂಡಿದೆ ಎಂಬುದನ್ನೂ ನೋಡಬಹುದು.

ಒಟ್ಟು 1583.76 ಕೋಟಿ ರೂಪಾಯಿಗಳ ಯೋಜನೆಯಲ್ಲಿ 522 ಕೋಟಿ ರೂಪಾಯಿಗಳನ್ನು ನೈಸ್ ಕಂಪನಿ ಬಂಡವಾಳವಾಗಿ ತೊಡಗಿಸುವುದು, ಬಾಕಿ 1063.65 ಕೋಟಿ ರೂಪಾಯಿಗಳನ್ನು ಸಾಲ ಪಡೆದು ಯೋಜನೆ ಜಾರಿ ಮಾಡುವುದು.... ಇದು ಯೋಜನೆಯ ಮೂಲ ಒಪ್ಪಂದದ ಸಾರ. ಆದರೆ ಈ ಒಟ್ಟು ಯೋಜನೆಯಲ್ಲಿ ನೈಸ್ ಕಂಪನಿಯು ಯಾವ ಬಂಡವಾಳವನ್ನು ಹೂಡಲಿಲ್ಲ. ಎಲ್ಲ ನಿಯಮಾವಳಿಗಳನ್ನು ಮೀರಿ 1,931 ಎಕರೆ ಸರ್ಕಾರಿ ಭೂಮಿಯನ್ನು ವಶಕ್ಕೆ ತೆಗೆದುಕೊಂಡ ನೈಸ್ ಕಂಪನಿ ಆ ಭೂಮಿಯನ್ನು ಬ್ಯಾಂಕಿನಲ್ಲಿ ಅಡವಿಟ್ಟು ಸಾಲ ಪಡೆದಿದೆ. ಭೂಮಿಯನ್ನು ತನ್ನ ಹೆಸರಿಗೆ ಪಡೆದುಕೊಳ್ಳುವಾಗಲೂ ಕೋಟ್ಯಾಂತರ ರೂಪಾಯಿ ಸ್ಟಾಂಪ್ ಶುಲ್ಕ ಮನ್ನಾ ಮಾಡಿಸಿಕೊಂಡಿದೆ.

ಈ ವಿಧಾನದಲ್ಲಿ ಸರ್ಕಾರಕ್ಕೆ ರಸ್ತೆ ನಿರ್ಮಿಸಲು ಆಗುತ್ತಿರಲಿಲ್ಲವೇ ಎಂದರೆ ಆಗುತ್ತಿತ್ತು. ಆದರೆ ಪಾಪ ಆಳುವ ರಾಜಕೀಯ ವರ್ಗದ ರಾಜಕೀಯ ಪಕ್ಷಗಳ ಶಾಸಕರು, ಸಚಿವರು ಜೇಬಿಗೆ ಇಷ್ಟೊಂದು ಪ್ರಸಾದವನ್ನು ತಂದು ತುಂಬುತ್ತಿದ್ದವರು ಯಾರು ?

ಇಲ್ಲಿಯವರೆಗೆ ನೈಸ್ ಕಂಪನಿಯ ಬಾಯಿಗೆ ಬೆಂಗಳೂರು ನಗರದ ಅಂಚಿನಲ್ಲಿದ್ದ 6,999 ಎಕರೆ , ಅಂದರೆ ಸುಮಾರು ಏಳು ಸಾವಿರ ಎಕರೆಯಷ್ಟು ಸರ್ಕಾರಿ ಭೂಮಿ ಬಿದ್ದಿದೆ ಎಂದರೆ ಯೋಜನೆಯ ವಂಚಕ ಸ್ವರೂಪ ಏನೆಂದು ಗೊತ್ತಾಗುತ್ತದೆ. ಮತ್ತು ಯಾರ್‍ಯಾರ ಪಾಲಿಗೆ, ಯಾವ ಯಾವ ರಾಜಕೀಯ ಪಕ್ಷಗಳ ಗುಪ್ತ ಖಜಾನೆಗೆ ಎಷ್ಟೆಷ್ಟು 'ಪ್ರಸಾದ' ಸಲ್ಲಿಕೆಯಾಗಿದೆ ಎಂಬುದನ್ನೂ ಅರ್ಥ ಮಾಡಿಕೊಳ್ಳಬಹುದು. ಯೋಜನೆಯ ಆರಂಭದಲ್ಲಿ ನೈಸ್ ಕಂಪನಿಯ ಖೇಣಿ ಅಮೆರಿಕದಲ್ಲಿ ಅಸ್ತಿತ್ವದಲ್ಲಿ ಇಲ್ಲದಿದ್ದ ನಕಲಿ ಕಂಪನಿಗಳ ಹೆಸರು ಹಾಗೂ ಅಮೆರಿಕದ ವಂಚಕ ರಾಜಕಾರಣಿಗಳು, ಭಾರತದ ಕೆಲವು ಇರುವ ಕಂಪನಿಗಳು ಎಲ್ಲರ ಹೆಸರನ್ನು ಬಳಸಿಕೊಂಡು ಈ ಭೂಮಿ ನುಂಗುವ ದೈತ್ಯ ಕ್ರಿಯಾ ಯೋಜನೆಯನ್ನು ಸಿದ್ಧ ಮಾಡಿಕೊಂಡು ಬಂದು ಕರ್ನಾಟಕದ ರೈತರ ಮೇಲೆ ಕರ್ನಾಟಕದ ಮೇಲೆ ಈ ಪರಿ ದಾಳಿ ಮಾಡಿದ್ದಾನೆ.

ಅಶೋಕ್ ಖೇಣಿ ಬರೀ ಭೂಮಿ ಲಪಟಾಯಿಸುವ ಭೂ ದಂಧೆಕೋರನಷ್ಟೇ ಆಗಿ ಉಳಿದಿಲ್ಲ. ಅವನ ಯೋಜನೆಗಳನ್ನು ನೋಡಿದರೆ ಅವನೊಳಗೊಬ್ಬ ಮಹತ್ವಾಕಾಂಕ್ಷಿ ರಾಜಕಾರಣಿ ಕೂಡ ಇದ್ದಾನೆ. ನೈಸ್ ರಸ್ತೆಯ ಸುತ್ತ ಮುತ್ತಲ ಹಳ್ಳಿಗಳಲ್ಲಿ ಆಗಾಗ್ಗೆ ಅವನ ಬೃಹತ್ ಕಟೌಟುಗಳು ತಲೆ ಎತ್ತಿ ನಿಂತಿರುತ್ತವೆ. ಆತನ ಹುಟ್ಟು ಹಬ್ಬಕ್ಕೆ ಸಹಸ್ರಾರು ಜನರನ್ನು ಸೇರಿಸಿ ಜನಜಾತ್ರೆ ಮಾಡಲಾಗುತ್ತಿದೆ. ಆಳುವ ವರ್ಗದ ನಾನಾ ರಾಜಕೀಯ ಪಕ್ಷಗಳ ಪ್ರಮುಖ ಧುರೀಣರು, ತಾವು ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವಾಗ ಜನಾರ್ಧನ ರೆಡ್ಡಿ, ಅಶೋಕ್ ಖೇಣಿಯಂತಹ 'ಉದ್ಯಮಿ'ಗಳನ್ನು ಸಂಪರ್ಕಿಸಿ 'ವಿಚಾರ ವಿನಿಮಯ' ಮಾಡುವುದು ಇದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದ ಹೊಸತರಲ್ಲಿ ಬಿಜೆಪಿ ಸರ್ಕಾರದ ಸಚಿವರ ಮತ್ತು ಶಾಸಕರ ದೊಡ್ಡ ದಂಡು ಸನ್ಮಾನ್ಯ ಖೇಣಿಯವರನ್ನು ಕಂಡು 'ವಿಚಾರ ವಿನಿಮಯ' ಮಾಡಿಕೊಂಡು ಬಂದಿದ್ದನ್ನು ಸಾರ್ವಜನಿಕರು ಮರೆತಿರಲಾರರು.

ಖೇಣಿಯವರ ಪ್ರಭಾವಳಿ ಇಷ್ಟೆ ಇಲ್ಲ. ಯಾವುದ್ಯಾವುದೋ ಬೃಹತ್ ಸಾರ್ವಜನಿಕ ಸಮಾರಂಭ'ದಲ್ಲಿ ಖೇಣಿ ಪ್ರಮುಖ ಮಠಾಧೀಶರೊಂದಿಗೆ, ರಾಜ್ಯದ ಪ್ರಮುಖ ಚಿತ್ರನಟರರೊಂದಿಗೆ ತಾನೂ ಒಬ್ಬ ಮುಖ್ಯ ಅತಿಥಿಯಾಗಿ ವಕ್ಕರಿಸಿರುವುದು ಇದೆ.

ಹೊಸ ರಾಜಕೀಯ ಪಕ್ಷವನ್ನು ಕಟ್ಟುವ 100 ವಿಧಾನ ಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಉದ್ದೇಶ ಇದೆಯೆಂದು ಹೇಳುತ್ತಿದ್ದಾನೆ.

ಮುಂದೇನು ?

ಬೆಂಗಳೂರಿನಿಂದ ಮೈಸೂರುವರೆಗಿನ ನೈಸ್ ರಸ್ತೆಗಾಗಿ ಭೂಮಿ ಕಳೆದುಕೊಂಡ ರೈತರು ಸಂಘಟಿತರಾಗಿ ಒಂದು ಬಲಿಷ್ಟವಾದ ಚಳುವಳಿಯನ್ನು ಆರಂಭಿಸಲು ಇದು ಸಕಾಲ. ಈ ಕುರಿತು ಕೈಚೆಲ್ಲಿ ಕುಳಿತಿರುವ ರೈತರ ನಡುವೆ ವ್ಯವಸ್ಥಿತವಾದ ಪ್ರಚಾರ ನಡೆಸುವುದು ಅತ್ಯಗತ್ಯವಾಗಿದೆ. ■

ಎಐಟಿಯುಸಿಯವರ ಸುಳ್ಳು ಕೊಲೆ ಕೇಸುಗಳಿಗೆ ಸಿಐಟಿಯು ಮಣಿಯುವುದಿಲ್ಲ

ಎಸ್. ಪ್ರಸನ್ನ ಕುಮಾರ್

ಸಿಐಟಿಯುನ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಪ್ರಸನ್ನಕುಮಾರ್ ಮತ್ತು ಕೆಎಸ್‌ಆರ್‌ಟಿಸಿ ನೌಕರರ ಫೆಡರೇಷನ್ ಅಧ್ಯಕ್ಷರಾಗಿರುವ ಕಾಂ. ರೇವಪ್ಪ ಮತ್ತು ಪ್ರಧಾನ ಕಾರ್ಯದರ್ಶಿಯಾಗಿರುವ ಕಾಂ. ಮಂಜುನಾಥ ಅವರ ಮೇಲೆ ಕೊಲೆ ಆರೋಪ ಹೊರಿಸಿ ಕಲಂ 302 ರ ಅಡಿಯಲ್ಲಿ ಎಐಟಿಯುಸಿ ಮುಖಂಡರಿಂದ ಮೊಕದ್ದಮೆ ದಾಖಲಿಸಲಾದ ವಿಷಯ 'ಜನಶಕ್ತಿ' ಓದುಗರು ಗಮನಿಸಿರುತ್ತಾರೆ. ಹೃದಯ ಅಘಫಾತದಿಂದ ಮೃತರಾಗಿದ್ದ ಕೇಶವನ್ ಎಂಬ ಮೆಕ್ಯಾನಿಕ್ ಅವರ ಸಾವನ್ನು ಕೊಲೆ ಎಂದು ತಿರುಚಿ ಎಐಟಿಯುಸಿ ಮುಖಂಡರು ಬೆಂಗಳೂರಿನ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ಧಾರೆ. ಇಂತಹ ಕೀಳು ಮಟ್ಟದಲ್ಲಿ ಸುಳ್ಳು ಕೊಲೆ ಆರೋಪವನ್ನು ಎಐಟಿಯುಸಿ ಮುಖಂಡರು ಏಕೆ ಮಾಡಿದ್ದಾರೆ? ಸುಳ್ಳು ಕ್ರಿಮಿನಲ್ ಮೊಕದ್ದಮೆಗಳನ್ನು ಸಾಮಾನ್ಯವಾಗಿ ಮಾಲಿಕ ವರ್ಗದವರು ಕಾರ್ಮಿಕ ಮುಖಂಡರ ಮೇಲೆ ಹೂಡುವುದು ಮತ್ತು ಕಾರ್ಮಿಕರು ಒಗ್ಗಟ್ಟಾಗದಂತೆ, ಸಂಘಟಿತರಾಗದಂತೆ ... ಸಂಘ ಮಾಡಿಕೊಳ್ಳದಂತೆ ತಡೆಯಲು ಪಿತೂರಿಗಳನ್ನು ಮಾಡುವುದನ್ನು ಹಲವು ಸಂದರ್ಭಗಳಲ್ಲಿ ನೋಡಿದ್ದೇವೆ ಮತ್ತು ಎದುರಿಸಿ ಹಿಮ್ಮೆಟ್ಟಿಸಿದ್ದೇವೆ. ಆದರೆ ಒಂದು ಕೇಂದ್ರ ಕಾರ್ಮಿಕ ಸಂಘಟನೆಯ ಮುಖಂಡರು ಮಾಲೀಕ ವರ್ಗದವರಂತೆ ಸುಳ್ಳು ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವುದು ಅವರ ದೋಷಪೂರ್ಣ ಸೈದ್ಧಾಂತಿಕ ಕಣ್ಣೋಟ, ಸಂಕುಚಿತ ಗುರಿ ಮತ್ತು ವ್ಯಕ್ತಿ ನಿಷ್ಠವಾದ ಹೋರಾಟದ ಕೀಳು ತಿಳುವಳಿಕೆಗಳನ್ನು ಬಯಲು ಮಾಡುತ್ತದೆ. ಈ ಹಿಂದೆಯೂ ರಾಜ್ಯದ ಕಾರ್ಮಿಕ ಚಳುವಳಿಯ ಹಿರಿಯ ಮುಖಂಡರಾಗಿದ್ದ ಸಿಐಟಿಯು ರಾಜ್ಯ ಅಧ್ಯಕ್ಷರಾಗಿದ್ದ ಕಾಂ: ಸೂರ್ಯನಾರಾಯಣ ರಾವ್ ಅವರ ಮೇಲೆ ದಾವಣಗೆರೆಯಲ್ಲಿ ಇದೇ ಎಐಟಿಯುಸಿಯವರು ಸುಳ್ಳು ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿದ್ದು ಇತಿಹಾಸ.

ಈಗ ಕೆಎಸ್‌ಆರ್‌ಟಿಸಿ ನೌಕರರನ್ನು ಸಿಐಟಿಯು ನೇತೃತ್ವದಲ್ಲಿ ಸಂಘಟಿಸುತ್ತಿರುವಾಗ ಸಿಐಟಿಯು ಮುಖಂಡರ ವಿರುದ್ಧ ಹೂಡಲಾಗಿರುವ ಸುಳ್ಳು ಕ್ರಿಮಿನಲ್ ಮೊಕದ್ದಮೆಯ ವಾಸ್ತವಗಳೇನು? ಏಕೆ ಇಂತಹ ದುಷ್ಕೃತ್ಯಗಳಿಗೆ ಎಐಟಿಯುಸಿ ಮುಖಂಡರು ತೊಡಗಿಸಿಕೊಂಡಿದ್ದಾರೆ? ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ರಾಜ್ಯ ಸಾರಿಗೆ 4 ನಗಮಗಳಲ್ಲಿರುವ ವಾಸ್ತವ ಪರಿಸ್ಥಿತಿಗಳನ್ನು ಪರಿಗಣಿಸುವುದು ಅಗತ್ಯ. ಅಷ್ಟೇ ಅಲ್ಲ. ಸಾರಿಗೆ ನಗಮಗಳಲ್ಲಿ ಕಾರ್ಮಿಕರ ಪರಿಸ್ಥಿತಿ ಮತ್ತು ಕಾರ್ಮಿಕರ ಮನೋ... ನಿಗಮಗಳಲ್ಲಿ ಕಾರ್ಮಿಕ ಚಳುವಳಿಯ ... ಹಾಗೂ ಸಿಐಟಿಯು ನೇತೃತ್ವದಲ್ಲಿ ಸಂಘಟನೆಯನ್ನು ಬಲಪಡಿಸುವ ಕರ್ತವ್ಯ ಕುರಿತು ಪರಿಶೀಲನೆ ನಡೆಸುವುದು ಅಗತ್ಯವಾಗಿದೆ.

ರಸ್ತೆ ಸಾರಿಗೆ ವ್ಯವಸ್ಥೆಯು ಎಲ್ಲಾ ಅಧುನಿಕ ಸಮಾಜಗಳ ನರನಾಡಿಗಳಂತೆ ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ನಗರ ಮತ್ತು ಮಹಾನಗರಗಳಲ್ಲಿ ಸಾರಿಗೆ ಇಲ್ಲದಿದ್ದರೇ ಯಾವುದೇ ಆರ್ಥಿಕ ಚಟುವಟಿಕೆ ನಡೆಯುವುದು ಕಷ್ಟವಾಗುತ್ತದೆ. ಇತ್ತೀಚೆಗೆ 13 ಮತ್ತು 14 ಸೆಪ್ಟೆಂಬರ್ 2012 ರಂದು ಎರಡು ದಿನಗಳ ಕಾಲ ಸಾರಿಗೆ ನಿಗಮಗಳ ನೌಕರರ ಮುಷ್ಕರವು ಅಭೂತಪೂರ್ವವಾಗಿ ನಡೆಯಿತು. ನೌಕರರ ಮುಷ್ಕರದಿಂದಾಗಿ ಕೇವಲ ಸಾರಿಗೆ ಚಕ್ರಗಳು ಮಾತ್ರ ಸ್ಥಗಿತವಾಗಲಿಲ್ಲ. ಬೆಂಗಳೂರಿನ ಬಹುತೇಕ ದೊಡ್ಡ ಮತ್ತು ಸಣ್ಣ ಕೈಗಾರಿಕೆಗಳು ಉತ್ಪಾದನೆಯನ್ನು ಸ್ಥಗಿತಗೊಳಿಸಿದವು. ಹೆಚ್ಚಿನವರು ಅವರ ಕೆಲಸಗಳಿಗೆ ಹೋಗಲು ಸಾಧ್ಯವಾಗಲಿಲ್ಲ. ಇಂತಹ ಸಾಮೂಹಿಕ ಮುಷ್ಕರವು ಎರಡು ದಶಕಗಳ ಅವಧಿಯಲ್ಲಿ ಇದೇ ಮೊದಲು.

ಇಂತಹ ಗಂಭೀರ ಮುಷ್ಕರ ನಡೆಸಲು ನೌಕರರಿಗೆ ಇದ್ದ ಪ್ರಮುಖ ಕಾರಣಗಳೇನು ಎಂಬುದು ಬಹಳ ಮಹತ್ವದ ವಿಚಾರವಾಗಿದೆ. ಸಾರಿಗೆ ನಿಗಮಗಳ ನೌಕರರು ತೀವ್ರವಾಗಿ ...ರು, ದಿನ ನಿತ್ಯದ ಸಂಕಷ್ಟಗಳನ್ನು ಅನುಭವಿಸುತ್ತಿದ್ದೂ ಅವರ ಹೆಪ್ಪುಗಟ್ಟಿದ್ದ ಆಕ್ರೋಶವು ಮುಷ್ಕರದ ದಿನಕ್ಕಾಗಿ ಕಾಯುತ್ತಿದ್ದಂತೆ ಇತ್ತು. ಆದ್ದರಿಂದಲೇ ಆಡಳಿತ ವರ್ಗದ ಎಲ್ಲಾ ಬೆದರಿಕೆಗಳನ್ನು ಕಡೆಗಣಿಸಿ ... ಚಕ್ರಗಳನ್ನು ಸ್ತಬ್ದಗೊಳಿಸಿ ಸ್ವಯಂ ... ಕೆಲಸಕ್ಕೆ ಗೈರು ಹಾಜರಾಗಿದ್ದರು.



ಎಐಟಿಯುಸಿಯುವರ ಕುತಂತ್ರದ ವಿರುದ್ಧ ಹಾಸನದಲ್ಲಿ ಸಿಐಟಿಯು ಪ್ರತಿಭಟನೆ

ದಿನಾಂಕ 13 ಮತ್ತು 14 ಸೆಪ್ಟೆಂಬರ್ 2012 ಎರಡು ದಿನಗಳ ಮುಷ್ಕರ ಪ್ರಕ್ರಿಯೆಯಲ್ಲಿ 14 ರಂದು ತಡ ರಾತ್ರಿ ಸಾರಿಗೆ ಸಚಿವರಾಗಿರುವ ಅಶೋಕ್ ಅವರ ಅದ್ಯಕ್ಷತೆಯಲ್ಲಿ ಜಂಟಿ ಸಮಿತಿಯ ಮುಖಂಡರೊಂದಿಗೆ ಲಿಖಿತ ನಡುವಳಿಕೆಗಳಿಗೆ ಸಹಿ ಮಾಡಿ ಮುಷ್ಕರವನ್ನು ಹಿಂದಕ್ಕೆ ಪಡೆಯಲಾಗಿದೆ. ಎರಡು ದಿನಗಳ ಮುಷ್ಕರದಲ್ಲಿ ನೌಕರರು ಸ್ವಯಂ ಸ್ಫೂರ್ತಿಯಿಂದ ಭಾವಹಿಸಿದ್ದು ... ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ ... ಸ್ಥಳದಲ್ಲಿ ನೆಮ್ಮದಿಯಿಂದ ಕರ್ತವ್ಯ ನಿರ್ವಹಿಸುವ ವಾತಾವರಣ ಇಲ್ಲ. ವೇತನ ಭತ್ಯೆಗಳು ಬೆಲೆ ಏರಿಕೆಯ ಇಂದಿನ ಪರಿಸ್ಥಿತಿಗೆ ತಕ್ಕಂತೆ ಹೆಚ್ಚಳವಾಗಬೇಕು ಮತ್ತು ... ನ್ಯಾಯಸಮ್ಮತವಾಗಿರಬೇಕೆಂಬ ಹಬ್ಬಿಯಾಕೆ ಮುಷ್ಕರದ ಹಿಂದಿತ್ತು. ಆದರೆ ಜಂಟಿ ಸಮಿತಿಯ ದೊಡ್ಡ ಸಂಘವಾಗಿದ್ದ ಎಐಟಿಯುಸಿ ನೇತೃತ್ವದ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಮುಖಂಡರು ವೇತನ ಹೆಚ್ಚು ಮಾಡುವ ಒಶೆಯಲ್ಲಿ ಕಮ ವಹಿಸುವ ಬದಲಾಗಿ ಸರಕಾರ ಈಗಾಗಲೇ ಏಕ ಪಕ್ಷೀಯವಾಗಿ ಎಲ್ಲಾ ... ಮೂಲ ವೇತನದಲ್ಲಿ ಶೇ 10 ಏರಿಕೆ ಮಾಡಿರುವುದರ ಅರ್ಧದಷ್ಟು (50%) ಕಡಿತ ಮಾಡುವ ಒಪ್ಪಂದಕ್ಕೆ ಸರಕಾರದೊಂದಿಗೆ ಸಹಿ ಮಾಡಿ ಮುಷ್ಕರವನ್ನು ಹಿಂದಕ್ಕೆ ಪಡೆಯಲು ನಿರ್ಣಯಿಸಿದ್ದಾರೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೇ ಸಾರಿಗೆ ನಿಗಮಗಳ ಆಡಳಿತ ಮಂಡಲಿಯು ಶೇ 10 ಮೂಲವೇತನ ಏರಿಕೆನ್ನು ಆಗಸ್ಟ್ ತಿಂಗಳ ವೇತನಕ್ಕೆ ಅನ್ವಯಿಸಿ ಸೆಪ್ಟೆಂಬರ್ 7 ನೇ ತಾರಿಕಿನ ಒಳಗೆ ಎಲ್ಲರ ಸಂಬಳದಲ್ಲಿ ಸೇರಿಸಿ ಪಾವತಿ ಮಾಡಿತ್ತು. ಹೆಚ್ಚಳ ಮಾಡಿದ ಶೇ 10 ಮೂಲ ವೇತನದಿಂದಾಗಿ ತಿಂಗಳಿಗೆ ಆರಂಭಿಕ ವೇತನ ಶ್ರೇಣಿಯಲ್ಲಿ ಕನಿಷ್ಟ ರೂ.1,030/- ಗಳು ಹೆಚ್ಚಳವಾಗಿತ್ತು. ಕಂಡಕ್ಟರ್ ಡ್ರೈವರ್, ಮೆಕಾನಿಕ್ ಆಡಳಿತ ಸಿಬ್ಬಂದಿಗಳಿಗೆ ಗರಿಷ್ಟವಾಗಿ ರೂ. 5,500/- ಸಂಬಳದ ಏರಿಕೆ ಆಗಿತ್ತು. ಹೆಚ್ಚಳವಾದ ಸಂಬಳ ಕೈಗೆ ಪಡೆದ ನಂತರವೂ ನೌಕರರು ಅಭೂತಪೂರ್ವ ರೀತಿಯಲ್ಲಿ ಮುಷ್ಕರದಲ್ಲಿ ಭಾಗವಹಿಸಿದ್ದರು ಎಂಬ ವಿಚಾರವು ನೌಕರರ ಮನೋಸ್ಥಿತಿಗೆ ಕನ್ನಡಿ ಹಿಡಿದ್ಧಂತಿದೆ, ಈಗಾಗಲೇ ಜಾರಿಯಾಗಿರುವ ಶೇ. 10 ರ ಮೂಲವೇತನ ಹೆಚ್ಚಳ ಸಂತೃಪ್ತಿಕರವಾಗಿಲ್ಲ ಎನ್ನುವುದಕ್ಕೆ 2 ದಿನಗಳ ಮುಷ್ಕರವೇ ಸಾಕ್ಷಿಯಾಗಿದೆ. ಆದರೆ, 14 ಸೆಪ್ಟೆಂಬರ್ ತಡರಾತ್ರಿ ಎಐಟಿಯುಸಿ ನೇತೃತ್ವದಲ್ಲಿ ಸಾರಿಗೆ ಸಚಿವರೊಂದಿಗೆ ಸಹಿ ಮಾಡಿದ ನಡುವಳಿಯ ದಾಖಲೆಯ ಪ್ರಕಾರ ವೇತನ ಹೆಚ್ಚಾಗಲಿಲ್ಲ ಬಧಲಾಗಿ ರೂ.1030 ಹೆಚ್ಚಾಗಿದ್ದ ನೌಕರರನಿಗೆ ರೂ.520/- ಕಡಿತ ಮಾಡುವುದು ಮತ್ತು ರೂ. 5,500/- ಹೆಚ್ಚಾಗಿದ್ದ ನೌಕರರಿಗೆ ರೂ. 2,275/ ... ವೇತನ ಸೂತ್ರವನ್ನು ಒಪ್ಪಿ ಸಹಿ ... ಹೆಚ್ಚಿಸಲಾಗಿರುವ ಸಂಬಳದಲ್ಲಿ ಕಡಿತವಾಗುವ ಕಾರಣಗಳನ್ನು ತಿಳಿದುಕೊಳ್ಳಲು ಈ ಕೆಳಗಿನ ಉದಾಹರಣೆಯನ್ನು ಗಮನಿಸಿದರೆ ಅರ್ಥವಾಗುತ್ತದೆ.

ಉದಾ: ... ನೌಕರನಿಗೆ ಮಾಸಿಕ ... ರೂ. 10,000 ಇದ್ದಲ್ಲಿ,

... ಏಕೆಪಕ್ಷೀಯ ...	ರೂ. 1,000
... ವೇತನಕ್ಕೆ ತುಟ್ಟಿ ಭತ್ಯೆ ಶೇ 76.75 ಹೆಚ್ಚಳ	ರೂ. 767.50
ಮೂಲ ವೇತನಕ್ಕೆ ಮನೆ ಬಾಡಿಗೆ ಭತ್ಯೆ ಶೇ. 25	ರೂ. 50.
ಅಂದರೆ ಒಟ್ಟು ಹೆಚ್ಚಳ :	ರೂ. 2,017.50

ಪುಟ 15 ಕ್ಕೆ

40 ಸಾವಿರ ಅರ್ಜಿದಾರರ ಬಂಧನ.....

ಕುಂದಾಪುರದಲ್ಲಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಮುಖಂಡರಾದ ರಾಜೀವ ಪಡುಕೋಣೆ, ದೋಗು ಸುವರ್ಣ, ವೆಂಕಟೇಶ್ ಕೋಣಿ, ಎಚ್. ವಿಠಲ ಪೂಜಾರಿ, ಕಾಪು ಲಕ್ಷ್ಮಣ, ಉಮೇಶ್ ಕುಂದರ್, ಸಾಹಿರಾ, ಮುಮ್ತಾಜ್, ವಿದ್ಯಾರಾಜ್, ನಾಗರತ್ನ ನಾಡ, ಸಿಐಟಿಯು ಮುಖಂಡರಾದ ಕೆ. ಶಂಕರ, ಎಚ್. ನರಸಿಂಹ, ಪಿ. ವಿಶ್ವನಾಥ ರೈ, ಮಹಾಬಲ ವಡೇರಹೋಬಳಿ, ಡಿವೈಎಫ್ಐ ಮುಖಂಡರಾದ ಸುಬ್ರಹ್ಮಣ್ಯ ಆಚಾರ್, ಶ್ರೀಕಾಂತ್, ರಾಜೇಶ್ ವಡೇರಹೋಬಳಿ, ಕರಿಯ ದೇವಾಡಿಗ, ಸುರೇಶ ಕಲ್ಲಾಗರ, ಅಶ್ವಥ ಕುಮಾರ್, ತ್ರಾಸಿ ಗ್ರಾಪಂ. ಅಧ್ಯಕ್ಷ ರೆನ್ಸಿಮ್ ಪಿರೇರಾ, ಬೈಂದೂರು ನಾಗರಿಕ ಹೋರಾಟ ಸಮಿತಿ ಅಧ್ಯಕ್ಷ ರವಿಂದ್ರನಾಥ ಶ್ಯಾನುಭಾಗ್ ಉಪಸ್ಥತರಿದ್ದರು. ಕುಂದಾಪುರದಲ್ಲಿ 25 ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತ ಹೋರಾಟ ಸಮಿತಿಯ ಎಲ್ಲಾ ಸಂಚಾಲಕರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕುಂದಾಪುರ ತಾಲೂಕು ಪಂಚಾಯತ್ ಕಚೇರಿ ಮುತ್ತಿಗೆ ಹೋರಾಟದಲ್ಲಿ ನಿವೇಶನ ರಹಿತ ಅರ್ಜಿದಾರರು 3000, ಉಡುಪಿ ತಾಲೂಕು ಪಂಚಾಯತ್ ಕಚೇರಿ ಮುತ್ತಿಗೆ ಹೋರಾಟದಲ್ಲಿ ನಿವೇಶನ ರಹಿತ ಅರ್ಜಿದಾರರು 2000 ಉಡುಪಿ ಜಿಲ್ಲೆಯಲ್ಲಿ ಒಟ್ಟು 5000ಕ್ಕೂ ಹೆಚ್ಚು ನಿವೇಶನ ರಹಿತರು ಭೂಮಿ ಹಕ್ಕಿನ ಹೋರಾಟದಲ್ಲಿ ಭಾಗವಹಿಸಿ ಬಂಧನಕ್ಕೊಳಗಾಗಿದ್ದು ಐತಿಹಾಸಿಕ ಘಟನೆಯಾಗಿದ್ದು, ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಗಿದೆ.

ಧಾರವಾಡ: ಜಿಲ್ಲಾಧಿಕಾರಿಗಳ ಕಚೇರಿ ಪಿಕೆಟಿಂಗ್– ಸಭೆ ನಿಗದಿ ಭರವಸೆ.

ಜಿಲ್ಲೆಯ ಧಾರವಾಡ, ಹುಬ್ಬಳ್ಳಿ ಹಾಗೂ ಕಲಘಟಗಿ ತಾಲೂಕುಗಳ ಅನೇಕ ಗ್ರಾಮಗಳ ಬಡ, ದಲಿತ, ಕೃಷಿಕೂಲಿಕಾರರು, ರೈತರು ಸರಕಾರಿ, ಅರಣ್ಯ ಹಾಗೂ ಖಾಸಗಿ ಒಡೆತನದ ಹೆಚ್ಚುವರಿ ಜಮೀನುಗಳಲ್ಲಿ ಅನೇಕ ವರ್ಷಗಳಿಂದ ಉಳುಮೆ ಮಾಡುತ್ತಾ ಬಂದಿದ್ದಾರೆ. ಬಗರಹುಕುಂ ಸಾಗುವಳಿ ಸಕ್ರಮಕ್ಕಾಗಿ ನಮೂನೆ–50 ಮತ್ತು 53 ರಲ್ಲಿ ಸಲ್ಲಿಸಲಾದ ಅರ್ಜಿಗಳು ತಿರಸ್ಕರಿಸಲ್ಪಟ್ಟಿದ್ದು ಎಲ್ಲ ಅರ್ಜಿಗಳನ್ನು ಪುನರ್ ಪರಿಶೀಲನೆ ಮಾಡಬೇಕು, ನಮೂನೆ–50 ಮತ್ತು 53 ರಲ್ಲಿ ಸಲ್ಲಿಸಲಾಗಿದ್ದ ಅರ್ಜಿಗಳಲ್ಲಿ ಇನ್ನು ಸುಮಾರು ಅರ್ಜಿಗಳು ಬಾಕಿ ಇದ್ದು, ಕೂಡಲೇ ಎಲ್ಲಾ ಅರ್ಜಿಗಳನ್ನು ಇತ್ಯರ್ಥಪಡಿಸಿ ಸಕ್ರಮ ಗೊಳಿಸಬೇಕು. ಇದಕ್ಕಾಗಿ ತಾಲೂಕ ಮಟ್ಟದ ಭೂ ವಿತರಣಾ ಸಮಿತಿಗಳು ಕಾರ್ಯಮಾಡುವಂತೆ ಆದೇಶ ನೀಡಬೇಕು. ಬಗರಹುಕುಂ ಸಾಗುವಳಿ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಲು ಹೊಸದಾಗಿ ಅವಕಾಶ ಕಲ್ಪಿಸಬೇಕು ಹಾಗೂ ಮನೆ ನಿವೇಶನಕ್ಕಾಗಿ ಗ್ರಾಮ ಪಂಚಾಯತ್‌ಗಳಿಗೆ, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆಗಳಿಗೆ ಅರ್ಜಿ ಸಲ್ಲಿಸಿರುವ ಎಲ್ಲ ಅರ್ಹ ಅರ್ಜಿದಾರರಿಗೆ ಮನೆ, ನಿವೇಶನ ಒದಗಿಸಲು ಸರಕಾರ ತಿರ್ಮಾನ ಕೈಗೊಳ್ಳಬೇಕು, ಗ್ರಾಮೀಣ ಮತ್ತು ನಗರ ಪ್ರದೇಶಗಳ ವ್ಯಾಪ್ತಿಯ ಸರಕಾರಿ ಜಮೀನುಗಳಲ್ಲಿ ಅಥವಾ ಅರಣ್ಯ ಭೂಮಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುವ ಬಡವರ ಮನೆಗಳನ್ನು ಸಕ್ರಮಗೊಳಿಸಿ ಅವರಿಗೆ ಹಕ್ಕು ಪತ್ರ ನೀಡಬೇಕೆಂದು ಆಗ್ರಹಿಸಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಪಿಕೆಟಿಂಗ್ ಪ್ರತಿಭಟನೆ ನಡೆಸಲಾಯಿತು.

ಇದಕ್ಕೂ ಮೊದಲು ನಗರದ ಕಲಾಭವನದಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಬಿ.ಎಸ್.ಸೊಪ್ಪಿನ, ಕಾರ್ಯದರ್ಶಿ ಕೆ.ಎಚ್.ಪಾಟೀಲ ಸಿಐಟಿಯು ಮುಖಂಡರಾದ ಮಹೇಶ ಪತ್ತಾರ, ಬಿ.ಐ.ಈಳಿಗೇರ ಮಾತನಾಡಿದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಅಪರ ಜಿಲ್ಲಾಧಿಕಾರಿ ಬಗರ್ ಹುಕುಂ ಸಾಗುವಳಿದಾರರ, ಮನೆ ನಿವೇಶನದಾರರ ಸಮಸ್ಯೆಗಳ ಕುರಿತು ಚರ್ಚಿಸಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಭೆ ಕರೆಯುವುದಾಗಿ ಭರವಸೆ ನೀಡಿದರು. ಮುಖಂಡರಾದ ಮಂಜುನಾಥ ಕೇರಾಳಿ, ಮಡಿವಾಳಪ್ಪ ಡೊಂಬರಕೊಪ್ಪ, ನೀಲಕಂಠಪ್ಪ ಶಿಂಪಗೇರ, ಮಲ್ಲಿಕಾರ್ಜುನ ಉಪ್ಪಾರ, ಮೈಲಾರಪ್ಪ ಶಿವಪ್ಪನವರ, ಸಿಂಗಯ್ಯ ಚಿಕ್ಕಮಠ, ಲಿಂಗರಾಜ ತಿರ್ಲಾಪೂರ, ರಮೇಶ ಬರ್ಗಿ ವಿವಿಧ ಗ್ರಾಮಗಳ ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಹಾಸನ:ಬಗರ್ ಹುಕುಂ ರೈತರ ಹೋರಾಟ

ಹಾಸನದ ಬಗರ್‌ಹುಕುಂ ಸಾಗುವಳಿದಾರರು ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನವೆಂಬರ್ 5 ರಂದು ಸಾಗುವಳಿ ಭೂಮಿಗೆ ಹಕ್ಕು ಪತ್ರ ನೀಡುವಂತೆ ಆಗ್ರಹಿಸಿ ಹಾಸನದ ತಹಸೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿದರು. ಸು. 400 ಜನ ಬಗರ್ ಹುಕುಂ ಸಾಗುವಳಿದಾರ ರೈತರು ಹೋರಾಟದಲ್ಲಿ ಭಾಗವಹಿಸಿದ್ದರು. ಚಳುವಳಿಗೆ ಪೂರ್ವಭಾವಿಯಾಗಿ ತಾಲ್ಲೂಕಿನಾದ್ಯಂತ 3 ದಿನಗಳ ಕಾಲ ಪ್ರಚಾರ ಜಾಥಾವನ್ನು ಹಮ್ಮಿಕೊಂಡು ಹಳ್ಳಿ ಹಳ್ಳಿಗಳಲ್ಲಿ ವ್ಯಾಪಕ ಪ್ರಚಾರ ಮಾಡಲಾಯಿತು. ಈ ಸಂದರ್ಭದಲ್ಲಿ ಮುಖಂಡರೊಂದಿಗೆ ತಮ್ಮ ಸಂಕಷ್ಟಗಳನ್ನು ಹಂಚಿಕೊಂಡ ರೈತರು ಹಲವು ವರ್ಷಗಳಿಂದ ಪಾಳುಬಿದ್ದಿದ್ದ ಭೂಮಿಯನ್ನು ಹಸನುಗೊಳಿಸಿ ಫಲವತ್ತಾದ ಭೂಮಿಯನ್ನಾಗಿ ಪರಿವರ್ತಿಸಿದ್ದರೂ ಭೂಮಿಯನ್ನು ಸಾಗುವಳಿದಾರರಿಗೆ ನೀಡದಿರುವ ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಹಲವರಿಗೆ ಹಕ್ಕುಪತ್ರಗಳನ್ನೇ ನೀಡದಿರುವ ಬಗ್ಗೆ ಅಸಮಾಧಾನ ತೋಡಿಕೊಂಡ ಬಡ ರೈತರು ಇದೇ ಭೂಮಿಯನ್ನು ನಂಬಿದ್ದು ತಮ್ಮ ಕುಟುಂಬ ಮತ್ತು ಮುಂದಿನ ಪೀಳಿಗೆಗೆ ಈ ಭೂಮಿಯೇ ಆಧಾರವಾಗಿರುವುದರಿಂದ ಯಾವುದೇ ಕಾರಣಕ್ಕೂ ಒಂದಿಂಚು ಭೂಮಿಯನ್ನು ಯಾರಿಗೂ ಬಿಟ್ಟುಕೊಡುವುದಿಲ್ಲ. ಬದಲಾಗಿ ಸಂಘಟಿತರಾಗಿ ಹೋರಾಟ ಮಾಡುತ್ತೇವೆಂದರು. ನಗರದ ಹೇಮಾವತಿ ಪ್ರತಿಮೆಯ ಬಳಿಯಿಂದ ಮೆರವಣಿಗೆ ಹೊರಟ ರೈತರು ಎನ್.ಆರ್ ವೃತ್ತದಲ್ಲಿ ಕೆಲಕಾಲ ಮಾನವ ಸರಪಳಿ ಮಾಡಿ ರಸ್ತೆ ತಡೆ ನಡೆಸಿದರು. ನಂತರ ತಹಸೀಲ್ದಾರ್ ಕಚೇರಿಗೆ ಹೋಗಿ ಮುತ್ತಿಗೆ ಹಾಕಲಾಯಿತು. ಮನವಿಯನ್ನು ತಹಸಿಲ್ದಾರ್ ಸ್ವೀಕರಿಸಿದರು.

ಸಕಲೇಶಪುರದಲ್ಲೂ ಬಗರ್ ಹುಕುಂ ಸಾಗುವಳಿದಾರರು ಕೆಪಿಆರ್‌ಎಸ್ ನೇತೃತ್ವದಲ್ಲಿ ನವೆಂಬರ್ 7 ರಂದು ತಹಸೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಸಕಲೇಶಪುರ ತಾಲೂಕಿನಾದ್ಯಂತ ಜಾಥಾ ನಡೆಸಿ ವ್ಯಾಪಕ ಪ್ರಚಾರವನ್ನು ಮಾಡಲಾಯಿತು. ಈ ತಾಲ್ಲೂಕಿನಲ್ಲಿ ಸಾಗುವಳಿ ಭೂಮಿಯ ಜೊತೆ ರೈತರು ಕಟ್ಟಿಕೊಂಡಿರುವ ಮನೆಗಳೂ ಕೂಡ ಬಗರ್ ಹುಕುಂ ಸಾಗುವಳಿ ಭೂಮಿಯೇ ಆಗಿರುವುದರಿಂದ ಮನೆಗಳಿಗೂ ಹಕ್ಕುಪತ್ರವಿಲ್ಲದೇ ಅತಂತ್ರ ಸ್ಥಿತಿಯಲ್ಲಿದ್ದಾರೆ. ಇದರ ಜೊತೆಗೆ ಅವರ ಭೂಮಿಗಳನ್ನು ದೊಡ್ಡ ದೊಡ್ಡ ಶ್ರೀಮಂತ ಕಾಫೀ ತೋಟದ ಮಾಲೀಕರು ಮತ್ತು ಕಾಫೀ ತೋಟಗಳನ್ನು ನಡೆಸುತ್ತಿರುವ ಕಂಪನೀ ಮಾಲೀಕರು ಬಡ ಬಗರ್ ಹುಕುಂ ಸಾಗುವಳಿದಾರರ ಭೂಮಿಯನ್ನು ಲಪಟಾಯಿಸಲು ಹೊಂಚುಹಾಕುತ್ತಿದ್ದಾರೆ ಎಂದು ರೈತರು ದೂರಿದರು.

ಕೆಪಿಆರ್‌ಎಸ್ ನ ಜಿಲ್ಲಾ ಸಂಚಾಲಕರಾದ ಎಚ್.ಆರ್. ನವೀನ್‌ಕುಮಾರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ದಾವಣಗೆರೆ:

ಬಗರ್ ಹುಕುಂ ಅರಣ್ಯ ಭೂಮಿ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಣೆ, ನಿವೇಶನರಹಿತರಿಗೆ ನಿವೇಶನ ನೀಡಬೇಕೆಂದು ಒತ್ತಾಯಿಸಿ ಬಗರ್ ಹುಕುಂ ಸಾಗುವಳಿ ಹೋರಾಟ ಸಮಿತಿ, ದೇವದಾಸಿ ಮಹಿಳಾ ವಿಮೋಚನಾ ಸಂಘ, ಆಟೋರಿಕ್ಷಾ ಚಾಲಕರ ಸಂಘಗಳ ನೇತೃತ್ವದಲ್ಲಿ ದಾವಣಗೆರೆಯಲ್ಲಿ ಪ್ರತಿಭಟನೆ ನಡೆಸಲಾಯಿತು. ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಿಂದ ಗಾಂಧಿ ವೃತ್ತದವರೆಗೂ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ಮಾನವ ಸರಪಳಿ ನಿರ್ಮಿಸಿ ರಾಜ್ಯ ಸರ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಬೇಡಿಕೆಗಳ ಮನವಿಯನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಗರ್ ಹುಕುಂ ಸಾಗುವಳಿದಾರರ ಹೋರಾಟ ಸಮಿತಿಯ ಸಂಚಾಲಕ ಜಯಾ ನಾಯ್ಕ ಅನಧಿಕೃತ ಸಾಗುವಳಿ ಜಮೀನಿನ ಹಕ್ಕುಪತ್ರಗಳನ್ನು ನೀಡುವ ಮೂಲಕ ಬಡ ಸಾಗುವಳಿದಾರರ ಹಿತ ಕಾಯಬೇಕು ಎಂದು ಒತ್ತಾಯಿಸಿದರು. ಕಾರ್ಮಿಕ ಮುಖಂಡ ಕೆ.ಎಲ್.ಭಟ್ ಮಾತನಾಡಿ ದೇವದಾಸಿ ಮಹಿಳೆಯರಿಗೆ ತಲಾ 2 ಎಕರೆ ಕೃಷಿಯೋಗ್ಯ ಭೂಮಿಯನ್ನು ವಾಸಕ್ಕೆ ಒಂದು ಮನೆಯನ್ನು ಕಲ್ಪಿಸಬೇಕೆಂದು ಆಗ್ರಹಿಸಿದರು.

ಆಟೋರಿಕ್ಷಾ ಚಾಲಕರ ಸಂಘದ ಸಂಚಾಲಕ ಬಿ. ವಿನಯ್‌ಕುಮಾರ್, ಡಿವೈಎಫ್ಐನ ಮುಖಂಡ ಶ್ರೀನಿವಾಸ, ಎಸ್ಎಫ್ಐನ ಎ. ಭರಮಪ್ಪ, ದೇವದಾಸಿ ಮಹಿಳಾ ವಿಮೋಚನಾ ಸಂಘದ ಜಿಲ್ಲಾಧ್ಯಕ್ಷೆ ಮೈಲಮ್ಮ, ಕಾರ್ಯದರ್ಶಿ ಟಿ.ವಿ. ರೇಣುಕಮ್ಮ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಜಗಳೂರು: ಪ್ರಾಂತ ರೈತ ಸಂಘ ಮತ್ತು ಪ್ರಾಂತ ಕೃಷಿ ಕೂಲಿಕಾರರ ಸಂಘಗಳ ಜಂಟಿ ಕರೆಯ ಮೇರೆಗೆ ಜಗಳೂರಿನಲ್ಲಿ, ಪ್ರವಾ... ಮಂದಿರದಿಂದ ತಾಲೂಕು ಕಛೇರಿ ವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವಿರುದ್ಧ ಘೋಷಣೆ ಕೂಗುತ್ತಾ, ತಹಶಿಲ್ದಾರಿಗೆ ಮನವಿ ಪ... ಸಲ್ಲಿಸಿದರು. 2006ರ ಅರಣ್ಯ ಕಾಯ್ದೆ ಅಡಿಯ... ಪರಿಶಿಷ್ಟ ಪಂಗಡವರಿಗೆ ಹಾಗೂ ಇತರೆ ಬಡವರಿಗೆ ಅವರು ಸಾಗುವಳಿ ಮಾಡುತ್ತಿರು... ಭೂಮಿಯ ಹಕ್ಕನ್ನು ನೀಡಬೇಕು, ಮ... ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದವರಿ... ನಿವೇಶನಗಳನ್ನು ವಿತರಿಸಬೇಕ... ಬರಗಾಲದಿಂದಾಗಿ ಬೆಳೆ ಹಾನಿ ಅನುಭವಿಸಿ... ರೈತರಿಗೆ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ನ್ಯಾಯವಾದಿಗಳು ಪ್ರಾಂತ ರೈ... ಸಂಘದ ಮುಖಂಡರೂ ಆಗಿರುವ ಆರ... ಓಬಳೇಶ್ ಮಾತನಾಡಿದರು.

ರೈತ ಸಂಘದ ಲುಕ್ಮಾನ್ ಖಾನ್, ಆಟೋ... ಚಾಲಕರ ಸಂಘದ ಅಧ್ಯಕ್ಷ ಗಂಗಾಧರ... ಎಸ್ಎಫ್ಐನ ರೋಷನ್ ಅಲಿ, ವಸಂ... ಕುಮಾರ್ ಮೊದಲಾದವರು ಪ್ರತಿಭಟನೆಯ... ನೇತೃತ್ವ ವಹಿಸಿದ್ದರು.

ಹರಪನಹಳ್ಳಿ: ಸರ್ಕಾರಿ ಕಛೇರಿಗಳ... ಮುತ್ತಿಗೆ ಹಾಕಿ ಬಂಧನಕ್ಕೆ ಒಳಗಾಗುವ ರಾಜ... ವ್ಯಾಪ್ತಿ ಚಳುವಳಿಯ ಅಂಗವಾಗಿ ಹರಪನಹ... ತಹಶಿಲ್ದಾರರ ಕಛೇರಿಗೆ ನುಗ್ಗಲು ಪ್ರಯತ್ನಿಸಿ... ರೈತ ಸಂಘ, ಕೃಷಿ ಕೂಲಿಕಾರರ ಸಂಘ ಮತ್ತು ದೇವದಾಸಿ ಮಹಿಳಾ ವಿಮೋಚನಾ ಸಂಘದ... 500ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೋಲಿಸರು ವಶಕ್ಕೆ ತೆಗೆದು ಅವರಲ್ಲಿ ... ಜನರನ್ನು ಬಂಧಿಸಿ ನಂತರ ಜಾಮೀನಿನ ಮೇ... ಬಿಡುಗಡೆ ಮಾಡಿದರು.

ಇದಕ್ಕೂ ಮೊದಲು ಪಟ್ಟಣದ ಕೋ... ಆಂಜನೇಯ ದೇವಸ್ಥಾನದಿಂದ ಮೆರವಣಿಗೆಯ... ಬಂದ ಪ್ರತಿಭಟನಾಕಾರರು ಮಿನಿ ವಿಧಾನಸೌಧ... ತೆರಳಿ ಬಹಿರಂಗ ಸಭೆ ನಡೆಸಿದರು. ಪ್ರಾಂ... ರೈತ ಸಂಘದ ರಾಜ್ಯ ಸಮಿತಿ ಸದಸ್ಯ ಎಚ್... ವೆಂಕಟೇಶ್, ಕೃಷಿ ಕೂಲಿಕಾರರ ಸಂಘದ ರಾ... ಸಮಿತಿ ಸದಸ್ಯ ಎಲ್.ಬಿ. ಹಾಲೇಶ ನಾಯ... ಡಿವೈಎಫ್ಐನ ಬೇವಿನಹಳ್ಳಿ ವೆಂಕಟೇಶ್ ಮತ್ತು ದೇವದಾಸಿ ಮಹಿಳಾ ವಿಮೋಚನಾ ಸಂಘದ ರಾಜ್ಯ ಉಪಾಧ್ಯಕ್ಷೆ ಟಿ. ಪದ್ಮಾವತಿ ಮಾತನಾ... ಅರಣ್ಯ ಭೂಮಿಯಲ್ಲಿ ಮನೆ ಕಟ್ಟಿಕೊಂಡವರಿ... ಮತ್ತು ಸಾಗುವಳಿ ಮಾಡುತ್ತಿರುವ ಬಡವರಿ... ಹಕ್ಕು ಪತ್ರ ನೀಡಬೇಕು, ಅವರ ವಿರು... ಹೂಡಲಾದ ಕೇಸುಗಳನ್ನು ವಾಪಾಸ್ ಪಡೆಯಬೇಕು, ಮನೆಗಳಿಗಾಗಿ ಅರ್ಜಿಸಲ್ಲಿರು... ಎಲ್ಲ ಅರ್ಜಿದಾರ ಕುಟುಂಬಗಳಿಗೆ ಮ... ನಿವೇಶನಗಳನ್ನು ಒದಗಿಸಬೇಕು ದೇವದಾ... ಮಹಿಳೆಯರಿಗೆ ತಲಾ ಎರಡು ಎಕ... ಭೂಮಿಯನ್ನು ನೀಡಬೇಕು, ಮತ್ತು ಅವರ ಇತರ... ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು. ಹೋರಾಟದಲ್ಲಿ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದ... ಧೈರ್ಯದಿಂದ ಬಂಧನಕ್ಕೊಳಗಾದರು.

ಕಾಂಗ್ರೆಸ್–ಬಿಜೆಪಿಗಳನ್ನು ಕಿತ್ತೊಗೆಯಿರಿ..... ಜನತೆಯನ್ನು ರಕ್ಷಿಸಿ

ರಾಜಕೀಯ ಪ್ರಚಾರಾಂದೋಲನ ಜಾಥಾ



ಜಾಥ – 01

9–11–2012	ಉದ್ಘಾಟನೆ	ಬಸವಕಲ್ಯಾಣ ಬೀದರ್ ಹುಮ್ನಾಬಾದ್
0–11–2012		ಕಮಲಾಪುರ ಮಹಾಗಾಂವ್ ಸಲಗರ ವಿ.ಕೆ.
1–11–2012		ಗುಲ್ಬರ್ಗಾ ಶಾಹಬಾದ್ ಜೇವರ್ಗಿ
2–11–2012		ಶಹಾಪುರ ಯಾದಗಿರಿ ಜಾಲಹಳ್ಳಿ
3–11–2012		ರಾಯಚೂರು ದೇವದುರ್ಗ ಹಟ್ಟಿ
4–11–2012		ಲಿಂಗಸಗೂರು ಸಿಂಧನೂರು ಶಿರಗುಪ್ಪ
5–11–2012	(ಮೊಹರಂ)	ಬಿಡುವು
6–11–2012		ಬಳ್ಳಾರಿ ಕುರಗೋಡು ಕಂಪ್ಲಿ ಗಂಗಾವತಿ
7–11–2012		ಕೊಪ್ಪಳ ಕನಕಗಿರಿ ಹೊಸಪೇಟೆ
8–11–2012		ಹ.ಬೊ. ಹಳ್ಳಿ ಹರಪ್ಪನಹಳ್ಳಿ ದಾವಣಗೆರೆ
9–11–2012		ಚಿತ್ರದುರ್ಗ ಚಳ್ಳಕೆರೆ ಶಿರಾ ತುಮಕೂರು
0–11–2012		ಕೊರಟಗೆರೆ ಹೊಸೂರು ಗೌರಿಬಿದನೂರು ಗುಡಿಬಂಡೆ
01–12–2012		ಚಿಕ್ಕಬಳ್ಳಾಪುರ ಬಾಗೇಪಲ್ಲಿ ಚಿಕ್ಕಬಳ್ಳಾಪುರ ಶಿಡ್ಲಘಟ್ಟ ಚಿಂತಾಮಣಿ
02–12–2012		ಶ್ರೀನಿವಾಸಪುರ ಕೋಲಾರ ಕೆ.ಜಿ.ಎಫ್
03–12–2012		ಮಾಲೂರು ಹೊಸಕೋಟೆ ಕೆ.ಆರ್.ಪುರಂ ಅನೇಕಲ್

ಮುಕ್ತಾಯ

ಜಾಥ – 02

18–11–2012	ಉದ್ಘಾಟನೆ	ರಾಮದುರ್ಗ ಯರಗಟ್ಟಿ
19–11–2012		ಬೆಳಗಾಂ ಕಿತ್ತೂರು ಧಾರವಾಡ
20–11–2012		ಹುಬ್ಬಳ್ಳಿ ಕಲಘಟಗಿ ಹಳಿಯಾಳ
21–11–2012		ದಾಂಡೇಲಿ ಜೋಯಿಡಾ
22–11–2012		ಕಾರವಾರ ಬಿಣಗಾ ಅಂಕೋಲಾ ಕುಮಟಾ
23–11–2012		ಹೊನ್ನಾವರ ಭಟ್ಕಳ ಬೈಂದೂರು
24–11–2012		ಕುಂದಾಪುರ ಬ್ರಹ್ಮಾವರ
25–11–2012		ಉಡುಪಿ ಮುಲ್ಕಿ ಸುರತ್‌ಕಲ್
26–11–2012		ಮಂಗಳೂರು ತೊಕ್ಕೊಟು ಬಿ.ಸಿ. ರೋಡ್
27–11–2012		ಬೆಳ್ತಂಗಡಿ ಪುತ್ತೂರು ಸುಳ್ಯ
28–11–2012		ಮಡಿಕೇರಿ ವಿರಾಜಪೇಟೆ ಸಿದ್ಧಾಪುರ
29–11–2012		ಸಕಲೇಶಪುರ ಹಾಸನ
30–11–2012		ಹುಣಸೂರು ನಂಜನಗೂಡು ಮೈಸೂರು
01–12–2012		ಮಂಡ್ಯ ಮಳವಳ್ಳಿ ಮದ್ದೂರು
02–12–2012		ರಾಮನಗರ ಮಾಗಡಿ ನೆಲಮಂಗಲ
03–12–2012		ದೊಡ್ಡಬಳ್ಳಾಪುರ ದೇವನಹಳ್ಳಿ ಯಲಹಂಕ

ಮುಕ್ತಾಯ

ಭಾಗವಹಿಸಿ ಯಶಸ್ವಿಗೊಳಿಸಿ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

ವೇಳಾಪಟ್ಟಿ ಮತ್ತು ವಿವರಗಳು



ನವೆಂಬರ್ 5ರ ಭೂ–ಚಳುವಳಿ, ಹರಪ್ಪನಹಳ್ಳಿಯಲ್ಲಿ ಪ್ರತಿಭಟನಾ ಮೆರವಣಿಗೆ

ಜಗದಗಲ

ಶರತ್‌ಚಂದ್ರ

ಉತ್ತಮವಾದದ್ದು ಇನ್ನಷ್ಟೇ ಬರಲಿದೆಯೇ ?

'ಉತ್ತಮವಾದದ್ದು ಇನ್ನಷ್ಟೇ ಬರಲಿದೆ'

ಹೀಗೆಂದು ಪುನಃ ನಾಲ್ಕು ವರ್ಷಗಳಿಗೆ ಅಮೆರಿಕದ ಅಧ್ಯಕ್ಷರಾಗಿ ಚುನಾಯಿತರಾದ ಒಬಾಮಾ ಹೇಳಿದ್ದಾರೆ. ಇವರನ್ನು ನಂಬಬಹುದೇ ? ನಾಲ್ಕು ವರ್ಷದ ಕೆಳಗೆ 'ಬದಲಾವಣೆ' ಮಾಡುವ ಬಗ್ಗೆ 'ಆಶಾಭಾವನೆ' ಇಡಬಹುದು ಎಂದು ಆಶ್ವಾಸನೆ ಕೊಟ್ಟಿದ್ದರು. ಅದು ಹುಸಿಯಾಗಿತ್ತು. ಅವರು ತಂದ 'ಬದಲಾವಣೆ' ಏನು ಎಂದು ಬ್ಯಾಟರಿ ಹಾಕಿ ಹುಡುಕಬೇಕಿತ್ತು. ಅಮೆರಿಕದ ಆರೋಗ್ಯಸೇವೆಯಲ್ಲಿ ಕೆಲವು ಸೀಮಿತ ಸುಧಾರಣೆಗಳನ್ನು ಬಿಟ್ಟರೆ ಏನೂ ಇಲ್ಲ. ಆದರೆ ಒಬಾಮಾ ಪುನಃ ಚುನಾಯಿತರಾದದ್ದು ಸಕಾರಾತ್ಮಕ ಮತ್ತು ಸಮಾಧಾನಕರ ಬೆಳವಣಿಗೆಯೇ ಸರಿ. ಯಾಕೆಂದರೆ ರೊಮ್ನಿ ಗೆಲುವು ಇನ್ನಷ್ಟು ಭಯಾನಕವಾಗಿರುತ್ತಿತ್ತು. ಅಮೆರಿಕಕ್ಕೂ, ಇಡೀ ಜಗತ್ತಿಗೂ. ಕರಾಳ ಬುಶ್ ಜಮಾನಾ ಇನ್ನೊಮ್ಮೆ ಬಂದಂತಾಗುತ್ತಿತ್ತು. ಆದರೆ ಅಷ್ಟೇ ಸಮಾಧಾನದ ವಿಷಯ. ಮತದಾನದ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ ಎಂದೂ ಹೇಳಲಾಗಿದೆ.



ಆದರೆ ಒಬಾಮರ ಡೆಮೊಕ್ರಾಟಿಕ್ ಪಕ್ಷಕ್ಕೆ ಪೂರ್ಣ ಜನಾದೇಶ ಸಿಕ್ಕಿದೆ ಎನ್ನುವಂತೆ ಸಹ ಇಲ್ಲ. ಜತೆಗೆ ಕೆಳಸದನ 'ಹೌಸ್ ಆಫ್ ಕಾಮನ್ಸ್'ದಲ್ಲಿ ರಿಪಬ್ಲಿಕನ್ನರಿಗೆ ಬಹುಮತ ಮುಂದುವರೆದಿದೆ. 435 ಸೀಟುಗಳಲ್ಲಿ 234 ಸೀಟು ಪಡೆದು ರಿಪಬ್ಲಿಕನ್ನರಿಗೆ ಬಹುಮತ ಬಂದಿದೆ. ಡೆಮೊಕ್ರಾಟರು 197 ಸೀಟುಗಳಿಗೆ ತೃಪ್ತರಾಗಬೇಕಾಗಿದೆ. ಅಧ್ಯಕ್ಷೀಯ ಚುನಾವಣೆ ಜತೆಗೆ 'ಹೌಸ್ ಆಫ್ ರೆಪ್ರೆಸೆಂಟೆಟಿವ್ಸ್'(ಪ್ರತಿನಿಧಿ ಸದನ)ದ ಎಲ್ಲಾ ಸೀಟುಗಳಿಗೂ ಚುನಾವಣೆ ನಡೆಯುತ್ತದೆ. 2008 ರಲ್ಲಿ ಡೆಮೊಕ್ರಾಟರು 257 ಸೀಟು ಪಡೆದು ಭಾರೀ ಬಹುಮತ ಪಡೆದಿದ್ದರು. ಆದರೆ 2010ರಲ್ಲಿ ರಿಪಬ್ಲಿಕನರು 242 ಸೀಟು ಪಡೆದು ಬಹುಮತ ಪಡೆದಿದ್ದರು ಎಂದು ಇಲ್ಲಿ ಗಮನಿಸಬೇಕು. ಮೇಲ್ ಸದನವಾದ ಸೆನೆಟಿನಲ್ಲಿ ಮೂರನೇ ಒಂದು ಭಾಗ ಸೀಟುಗಳಿಗೆ ಚುನಾವಣೆ ನಡೆದವು. ಸೆನೆಟಿನಲ್ಲಿ 2 ಸೀಟುಗಳನ್ನು ಹೆಚ್ಚಿಗೆ ಪಡೆದು ಡೆಮೊಕ್ರಾಟರು ನೂರರಲ್ಲಿ 55 ಸೀಟು ಗಳಿಸಿ ತಮ್ಮ ಬಹುಮತ ಉಳಿಸಿಕೊಂಡಿದ್ದಾರೆ. ಇದರಿಂದಾಗಿ ಒಬಾಮರ 'ಬದಲಾವಣೆ' 'ಸುಧಾರಣೆ'ಗಳಿಗೆ ಎರಡನೇ ಅವಧಿಯಲ್ಲೂ ರಿಪಬ್ಲಿಕನ್ ಪ್ರತಿನಿಧಿ ಸದನ ಅಡ್ಡಕಾಲು ಹಾಕಬಹುದು ಎನ್ನುವ ಸ್ಥಿತಿ ಬದಲಾಗಿಲ್ಲ.

ಆದರೆ ಒಬಾಮಾ ಈ ಪುನರಾಯ್ಕೆ ಮೂಲಕ ಹಲವು ರೆಕಾರ್ಡುಗಳನ್ನು ಮುರಿದಿದ್ದಾರೆ. ಹೊಸ ರೆಕಾರ್ಡುಗಳನ್ನು ಮಾಡಿದ್ದಾರೆ. 1820ರ ನಂತರ ಮೊದಲ ಬಾರಿಗೆ ಸತತವಾಗಿ ಮೂರು ಅಧ್ಯಕ್ಷರುಗಳು ಪುನರಾಯ್ಕೆಯಾಗಿದ್ದಾರಂತೆ. ಡೆಮೊಕ್ರಾಟಿಕ್ ಅಧ್ಯಕ್ಷೀಯ ಅಭ್ಯರ್ಥಿಗಳು ಸತತವಾಗಿ ಎರಡು ಬಾರಿ ಸ್ಪಷ್ಟ ಬಹುಮತ (ಶೇ.50ಕ್ಕಿಂತ ಹೆಚ್ಚು ಮತ) ಪಡೆದಿದ್ದು 1944ರ (ರೂಸ್‌ವೆಲ್ಟ್) ನಂತರ ಮೊದಲ ಬಾರಿ. ನಿರುದ್ಯೋಗದ ದರ ಶೇ.7ಕ್ಕಿಂತ ಹೆಚ್ಚಿದ್ದಾಗ ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದು ಸಹ ಒಬಾಮಾ 1944ರ (ರೂಸ್‌ವೆಲ್ಟ್) ನಂತರ ಮೊದಲ ಬಾರಿಯಂತೆ. ರೇಗನ್ (1980) ನಂತರ ಸ್ಪಷ್ಟ ಬಹುಮತ ಪಡೆದ ಮೊದಲ ಅಧ್ಯಕ್ಷರೂ ಒಬಾಮ.

ಒಬಾಮಾ ಶೇ.50.6 ಮತ ಗಳಿಸಿದ್ದರೆ, ರೊಮ್ನಿ ಶೇ. 47.8 ಮತ ಗಳಿಸಿದ್ದಾರೆ. ಮತಗಳ ಅಂತರ ಈ ಬಾರಿ ಕೇವಲ ಶೇ.1.8 ಇದ್ದು, ಕಳೆದ ಬಾರಿಯ ಶೇ.7 ಕ್ಕಿಂತ ಬಹಳ ಕಡಿಮೆ ಇದೆ. ಸ್ಪಷ್ಟ ಬಹುಮತ ಪಡೆಯದೆ ಎರಡೇ ಅಭ್ಯರ್ಥಿಗಳು ಇರುವಾಗ ಅಧ್ಯಕ್ಷರಾಗಿ ಆಯ್ಕೆಯಾಗುವುದು ಹೇಗೆ ಸಾಧ್ಯ ಎಂದು ನಿಮಗೆ ಆಶ್ಚರ್ಯವಾಗಬಹುದು. ಆದರೆ ಅಮೆರಿಕದ ಸ್ವಲ್ಪ ವಿಚಿತ್ರವಾದ ಅಧ್ಯಕ್ಷೀಯ ಚುನಾವಣಾ ವಿಧಾನದಲ್ಲಿ ಇದು ಸಾಧ್ಯ. ಮೊದಲನೆಯದಾಗಿ ಈ ಬಾರಿ ಒಬಾಮಾ ರೊಮ್ನಿ ಅಲ್ಲದೆ 6 ಇತರ ಅಭ್ಯರ್ಥಿಗಳು ಇದ್ದರು. ಅವರ ಬಗ್ಗೆ ಯಾವ ಮಾಧ್ಯಮಗಳಲ್ಲೂ ಸುದ್ದಿ ಬರಲಿಲ್ಲ ಎನ್ನುವುದು ಬೇರೆ ಮಾತು. ಅವರು ಉಳಿದ ಶೆ.1.6 ಮತ ಗಳಿಸಿದ್ದರು. ಆದರೆ ಒಬ್ಬ ಅಭ್ಯರ್ಥಿ ಎದುರಾಳಿಗಿಂತ ಕಡಿಮೆ ಮತ ಗಳಿಸಿಯೂ ಅಧ್ಯಕ್ಷರಾಗಿ ಆಯ್ಕೆಯಾಗಬಹುದು. 2000ರ ವಿವಾದಿತ ಚುನಾವಣೆಯಲ್ಲಿ ಬುಶ್ ಶೇ. 47.9 ಮತ ಗಳಿಸಿದರೆ ಅಲ್ ಗೋರ್ ಶೇ. 48.4 ಮತ ಗಳಿಸಿದ್ದರು. ಗೋರ್ ಅವರು ಬುಶ್ ಅವರಿಗಿಂತ 5 ಲಕ್ಷ ಹೆಚ್ಚು ಮತ ಗಳಿಸಿದ್ದರು. ಆದರೂ ಅಧ್ಯಕ್ಷೀಯ ಚುನಾವಣಾ ಮಂಡಳಿಯ ಮತಗಳಲ್ಲಿ ಗೋರ್ 266 ಬುಶ್ 271 ಮತ ಗಳಿಸಿದರು.

ಇಂತಹ ವಿಚಿತ್ರ ಸಾಧ್ಯವಾಗುವುದು ವಿಚಿತ್ರವಾದ ಅಧ್ಯಕ್ಷೀಯ ಚುನಾವಣಾ ವಿಧಾನದಿಂದಾಗಿ. ನಿಜವಾಗಿಯೂ ಅಮೆರಿಕದ ಅಧ್ಯಕ್ಷರು ಚುನಾಯಿತರಾಗುವುದು ನೇರ ಮತಗಳಿಂದ ಅಲ್ಲ. ಪ್ರತೀ ಅಮೆರಿಕದ ಪ್ರಾಂತ್ಯದ ಜನ ಚುನಾಯಿಸುವುದು ಅಧ್ಯಕ್ಷೀಯ ಚುನಾವಣಾ ಮಂಡಳಿಗೆ ಸದಸ್ಯರನ್ನು. ಪ್ರತೀ ಪ್ರಾಂತ್ಯಕ್ಕೆ ಅದರ ಜನಸಂಖ್ಯೆಯ ಆಧಾರದ ಮೇಲೆ ಚುನಾವಣಾ ಮಂಡಳಿ ಸದಸ್ಯರ ಸಂಖ್ಯೆ ನಿಗದಿಪಡಿಸಲಾಗಿದೆ. ಉದಾಹರಣೆಗೆ ಹೆಚ್ಚಿನ ಜನಸಂಖ್ಯೆಯ ರಾಜ್ಯವಾದ ಟೆಕ್ಸಾಸ್ 38 ಸದಸ್ಯರನ್ನು ಆರಿಸುತ್ತದೆ. ಚಿಕ್ಕ ನ್ಯೂ ಮೆಕ್ಸಿಕೊ ಕೇವಲ 5 ಸದಸ್ಯರನ್ನು ಆರಿಸುತ್ತದೆ. ಪ್ರತೀ ಪ್ರಾಂತ್ಯದಲ್ಲಿ ಬಹುಮತ ಪಡೆದ ಅಭ್ಯರ್ಥಿಗೆ ಎಲ್ಲಾ ಸೀಟು ಸಿಗುತ್ತದೆ. ಸಿಕ್ಕಿದ ಮತಗಳ ಪ್ರಮಾಣದ ಆಧಾರದ ಮೇಲೆ ಅಲ್ಲ. ಕೆಲವು ದೊಡ್ಡ ರಾಜ್ಯಗಳನ್ನು ಅಲ್ಪ ಬಹುಮತದಲ್ಲಿ ಗೆದ್ದರೆ ಒಟ್ಟು ಮತ ಕಡಿಮೆ ಇದ್ದರೂ ಅಧ್ಯಕ್ಷೀಯ ಚುನಾವಣೆ ಗೆಲ್ಲಬಹುದು. ಇದು ಸಾಲದೆಂಬಂತೆ ಚಾರಿತ್ರಿಕ ಕಾರಣಗಳಿಂದ ಯಾವಾಗಲೂ ಕೆಲವು ರಾಜ್ಯಗಳು ರಿಪಬ್ಲಿಕನ್ ಮತ್ತು ಇನ್ನೂ ಕೆಲವು ರಾಜ್ಯಗಳು ಡೆಮೊಕ್ರಾಟಿಕ್ ಅಭ್ಯರ್ಥಿಗಳನ್ನು ಆರಿಸುತ್ತವೆ. 50 ರಾಜ್ಯಗಳಲ್ಲಿ ಕೇವಲ 8 ರಾಜ್ಯಗಳು 'ಹೊಯ್ದಾಡುವ ರಾಜ್ಯಗಳು' ಎಂದು ಹೆಸರಾಗಿವೆ. ಉಳಿದ 42 ರಾಜ್ಯಗ ಮತದಾರರ ಮತಗಳಿಗೆ ಬೆಲೆಯೆ ಇಲ್ಲವೆಂಬಂತೆ. ಎಲ್ಲಾ ಗಮ ಸ್ವಾಭಾವಿಕವಾಗಿಯೇ ಈ 8 ರಾಜ್ಯಗಳ ಇರುತ್ತದೆ. ನೀರಿನಂತೆ ಖರ್ಚು ಮಾಡುವ ಹಣ ಸಿಂಹಪಾಲು ಈ ರಾಜ್ಯಗಳಿಗೆ ಹೋಗುತ್ತ ಒಬಾಮ ಈ 8 ರಾಜ್ಯಗಳಲ್ಲಿ ಒಂದನ್ನು ಬಿ (ಉತ್ತರ ಕೆರೊಲಿನಾ) ಎಲ್ಲವನ್ ಗೆದ್ದಿದ್ದರಿಂದಲೇ ಅವರು ಚುನಾವಣ ಮಂಡಳಿಯಲ್ಲಿ 332 ಸೀಟುಗಳನ್ನು ಗೆದ್ದಿದ್ದಾ ರೊಮ್ನಿ ಕೇವಲ 206 ಸೀಟುಗಳನ್ನು ಗೆದ್ದಿದ್ದಾ

ಎಂದಿನಂತೆ ವರ್ಣ ಮತ್ತು ಹ ಚುನಾವಣೆಯಲ್ಲಿ ದೊಡ್ಡ ಪಾತ್ರ ವಹಿಸಿ ಅಧ್ಯಕ್ಷೀಯ, ಸೆನೆಟ್, ಪ್ರತಿನಿಧಿ ಸಭೆಯ ಚುನಾವಣೆಗಳನ್ನು ಸೇರಿಸಿದರೆ ಸುಮಾರು 60 ಕೋಟಿ ಡಾಲರುಗಳನ್ನು (ಸುಮಾರು 3 ಸಾವಿರ ಕೋಟಿ ರೂ.) ಖರ್ಚು ಮಾಡಲಾಗಿ ಇದರಲ್ಲಿ 100 ಕೋಟಿ ಡಾಲರುಗಳ 'ಹೊಯ್ದಾಡುವ' ಕೇವಲ ಮೂರು ರಾಜ್ಯಗಳ – ಫ್ಲೋರಿಡಾ, ಒಹೈಯೊ, ವರ್ಜಿನಿಯಾ ಇಬ್ಬರೂ ಅಧ್ಯಕ್ಷೀಯ ಅಭ್ಯರ್ಥಿಗಳು ಖರ್ಚು ಮಾಡಿದರು. ಉಳಿದ ಎಲ್ಲಾ ರಾಜ್ಯಗಳಲ್ಲಿ ಆದ ಮೂರು ಪಟ್ಟು ಖರ್ಚು ಮಾಡಲಾಗಿದ ಸುಮಾರು 10 ಲಕ್ಷ ಟಿವಿ ಜಾಹೀರಾತುಗ ಸುರಿಮಳೆಯ ದಾಳಿ ಮತದಾರ ಮೇಲಾಯಿತು. ರೊಮ್ನಿ ಬಿಳಿಯ ಛಾಂಪಿಯನ್ನರಂತೆ ಪೋಸು ಕೊಟ್ಟು, ಇತ ವರ್ಣೀಯರೆಲ್ಲ ಅಮೆರಿಕದ ಪಾವಿತ್ರ್ಯ ಹಾ ಮಾಡುತ್ತಿದ್ದಾರೆ ಎಂದು ಘೋಷಿ ಚುನಾವಣೆಯನ್ನು 'ವರ್ಣ'ಮಯ ಮಾಡಲ ಯತ್ನಿಸಿದರು. ರೊಮ್ನಿ (2008ರ ರಿಪಬ್ಲಿಕನ ಅಭ್ಯರ್ಥಿ) ಮೆಕೇನ್ ಅವರಿಗಿಂತ ಹೆಚ್ಚು ಬಿಳಿಯರ ಮತ ಗಳಿಸುವುದರಲ್ಲಿ ಯಶಸ್ವಿಯಾದರು. ಆದರೆ ಅದೇ ಅಮೆರಿ ಮುಳುವಾದಂತೆ ಕಂಡು ಬಂದಿದೆ.

ಚುನಾವಣಾ ವಿಶ್ಲೇಷಣೆ ಪ್ರಕಾರ ಒಬಾಮ ಬಿಳಿಯೇತರ ಎಲ್ಲಾ ವರ್ಣಗಳ ಕರಿಯ (ಶೇ.93), ಲ್ಯಾಟಿನೊ (ಶೇ.71), ಏಶ್ಯನ್ (ಶೇ.73) ಮತಗಳ ಸಿಂಹಪಾಲು ಪಡೆದರು ಬಿಳಿಯರ ಮತಗಳಲ್ಲೂ ಶೇ.40 ಪಡೆದರು ಆದರೆ ಬರಿಯ ವರ್ಣ ಕೆಲಸ ಮಾಡಿಲ್ಲ ಕರಿಯರು ಮತ್ತು ಲ್ಯಾಟಿನೋಗಳ ಬಹುಪಾಲ ಕೆಳ-ಮಧ್ಯಮ, ಕೆಳವರ್ಗದವರು ಸಹ ಪರೋಕ್ಷವಾಗಿಯಾದರೂ ವರ್ಗ ಕೆಲ ಮಾಡಿದೆ. ಬಿಳಿಯರಲ್ಲೂ ಒಬಾಮರಿಗೆ ಮ ನೀಡಿದವರು ಬಹುಪಾಲು ಕೆಳ-ಮಧ್ಯಮ ಕೆಳವರ್ಗದವರೇ. ರೊಮ್ನಿ ಬಿಳಿಯ ಛಾಂಪಿಯನ್ನರಂತೆ ಪೋಸು ಕೊಟ್ಟಿದ್ದ ಪರಿಣಾಮವಾಗಿ ಬಿಳಿಯೇತರರು ದೊಡ ಪ್ರಮಾಣದಲ್ಲಿ ಮತದಾನಕ್ಕೆ ಬಂದಿರುವ ಸಾಧ್ಯ ಇದೆ ಎನ್ನಲಾಗಿದೆ. ಮಾತ್ರವಲ್ಲ ಅಮೆರಿ

ಬಿಳಿಯರು ಬಹುಸಂಖ್ಯಾತರಾಗಿರುವ ದೇಶವಾಗಿದ್ದದ್ದು ವೇಗವಾಗಿ ಬದಲಾವಣೆ ಆಗುವ ಲಕ್ಷಣಗಳು ಕಂಡು ಬಂದಿದೆ. ಸುಮಾರು ಶೇ.36 ಬಿಳಿಯೇತರರು ಈಗ ಇದ್ದಾರೆ. ಒಬಾಮ ಈ ಬಿಳಿಯೇತರರ ಶೇ.70 ಮತ ಗಳಿಸಿದರು. 2011ರ ಜನಗಣತಿ ಪ್ರಕಾರ ಎರಡು ಶತಕಗಳ ಅಮೆರಿಕದ ಇತಿಹಾಸದಲ್ಲಿ ಮೊದಲ ಬಾರಿಗೆ 1 ವರ್ಷದ ಕೆಳಗಿನ ಮಕ್ಕಳಲ್ಲಿ ಬಿಳಿಯೇತರ ಮಕ್ಕಳು (ಶೇ.50.4) ಬಹುಸಂಖ್ಯಾತರಾಗಿದ್ದಾರೆ.

ಈ ಫಲಿತಾಂಶದಿಂದ ನೀರಿನಂತೆ ಖರ್ಚು ಮಾಡಿದ್ದು ಯಾವುದೇ ಪ್ರಯೋಜನಕ್ಕೆ ಬಂದಿಲ್ಲ. ವರ್ಣ–ವರ್ಗ ಚುನಾವಣೆಯ ಫಲಿತಾಂಶ ನಿರ್ಧರಿಸುತ್ತದೆ. ಹಣವಲ್ಲ. ಇದು ಸಕಾರಾತ್ಮಕ ಬೆಳವಣಿಗೆ ಎಂಬ ತೀರ್ಮಾನಕ್ಕೆ ಕೆಲವರು ಬಂದಿದ್ದಾರೆ. ಆದರೆ ಇದು ನಿಜವಲ್ಲ. ಹಣದ ಪ್ರಭಾವ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಇಬ್ಬರೂ ಅಭ್ಯರ್ಥಿಗಳ ಹಣದ ಮೂಲ ಒಂದೇ. ಅಮೆರಿಕವನ್ನು ಆಳುವ ಕಾರ್ಪೊರೇಟುಗಳು. ಯಾರೂ ಗೆದ್ದರೂ ಅವರ ಯಜಮಾನಿಕೆ ಪ್ರಭುತ್ವದ ಮೇಲೆ ಎಳ್ಳಷ್ಟು ಕಡಿಮೆಯಾಗುವುದಿಲ್ಲ ಎಂಬುದು ಇನ್ನೂ ಹೆಚ್ಚು ನಿಜ ಈಗ. ಆದ್ದರಿಂದಲೇ 2008ರಲ್ಲಿ ನಿಜವಾದ 'ಬದಲಾವಣೆ'ಯ ಬಗ್ಗೆ ಇದ್ದ 'ಆಶಾಭಾವನೆ' ಈ ಬಾರಿ ಇರಲಿಲ್ಲ. ಇಟ್ಟುಕೊಳ್ಳಲು ಆಧಾರಗಳೂ ಇಲ್ಲ.

ಒಬಾಮ ಇನ್ನೂ ತಮ್ಮ ಸಂಪುಟ ಘೋಷಿಸಿಲ್ಲ. ಆದರೆ ಆ ಬಗ್ಗೆ ಬರುತ್ತಿರುವ ಊಹಾಪೋಹಗಳನ್ನು ನೋಡಿದರೆ ಆಂತರಿಕ ಆರ್ಥಿಕ ಅಥವಾ ವಿದೇಶ ನೀತಿಯಲ್ಲಿ ಯಾವುದೇ ಗಮನಾರ್ಹ ಬದಲಾವಣೆ ತರಬಲ್ಲ ವ್ಯಕ್ತಿಗಳು ಅಥವಾ ಟೀಮ್ ಎಲ್ಲೂ ಕಂಡು ಬರುತ್ತಿಲ್ಲ. ಅದೇ ಕಾರ್ಪೊರೇಟು ಪ್ರಾಯೋಜಿತ ಅಭ್ಯರ್ಥಿಗಳೇ. ಕಳೆದ 4 ವರ್ಷಗಳಂತೆ ರಿಪಬ್ಲಿಕನ್ನರು ಒಬಾಮ ಸುಧಾರಣೆಗಳಿಗೆ ಅಡ್ಡಕಾಲು ಹಾಕಿದರೆ, ಇನ್ನೊಂದು ಚುನಾವಣೆಯ ಭಯ ಇಲ್ಲದಿರುವುದರಿಂದ ಒಬಾಮ ಧೈರ್ಯದಿಂದ ಧೃಢವಾಗಿ ವರ್ತಿಸಬಹುದು. ಅಗತ್ಯ ಬಿದ್ದರೆ ಅಧ್ಯಕ್ಷೀಯ ವಿಶೇಷ ಅಧಿಕಾರಗಳನ್ನು ಬಳಸಬಹುದು. 2008ರ 'ಬದಲಾವಣೆ'ಯ ಭರವಸೆಗಳನ್ನು ಈಡೇರಿಸಬಹುದು ಎಂಬ 'ಆಶಾಭಾವನೆ' ಹಲವರಲ್ಲಿದೆ. ಒಬಾಮರಿಗೆ ಆ ಕಣ್ಣೋಟವಿದೆ. ಜನಪ್ರಿಯತೆಯೂ ಇದೆ. ಆ ಧೈರ್ಯವೂ ಇದೆ ಎಂದಿಟ್ಟುಕೊಂಡರೂ, ಹಾಗೊಮ್ಮೆ ಅವರು ಮುಂದುವರೆದರೂ ದೈತ್ಯ ಕಾರ್ಪೊರೇಟುಗಳು ಕೈಕಟ್ಟಿ ಕುಳಿತುಕೊಂಡಿರುವುದಿಲ್ಲ. ಅವರ ಬತ್ತಳಿಕೆಯಲ್ಲಿ ಅಸಂಖ್ಯ ಬಾಣಗಳಿವೆ. ಅದನ್ನು ಎದುರಿಸಲು ಅಮೆರಿಕದ ದುಡಿಯುವ ಜನತೆಯನ್ನು ಅಣಿ ನೆರೆಸಲು ಒಬಾಮ ತಯಾರಿದ್ದಾರೆಯೇ ಎಂಬುದರ ಮೇಲೆ ಎಲ್ಲಾ ಅವಲಂಬಿಸಿದೆ. ಈ ವರೆಗೆ ಆ ಸಾಧ್ಯತೆ ಕಂಡು ಬಂದಿಲ್ಲ. ಅಲ್ಲಿಯ ವರೆಗೆ ಒಬಾಮರ ಹೊಸ ಆಶ್ವಾಸನೆಯಾದ 'ಉತ್ತಮವಾದದ್ದು ಇನ್ನಷ್ಟೇ ಬರಲಿದೆ'ಯೇ ಎಂದು ಅಷ್ಟೇನೂ 'ಆಶಾಭಾವನೆ' ಇಟ್ಟುಕೊಳ್ಳದೆ ಕಾಯಬೇಕಷ್ಟೇ. ●

ಮೇ ನಾಲ್ಕರ ಚಳುವಳಿಗೆ ಕಾರ್ಮಿಕರ ಪ್ರವೇಶ....

ಪುಟ 16 ರಿಂದ

ಹಾಕಿ ಸುಡಲಾಯಿತು. ಅದಕ್ಕೆ ಬದಲಾಗಿ ಚೀನೀ ತಯಾರಿಕೆಯ ವಸ್ತುಗಳನ್ನು ಪ್ರೋತ್ಸಾಹಿಸಲಾಯಿತು. ಜಪಾನ್‌ನ ವಸ್ತುಗಳ ಮಾರಾಟಕ್ಕೆ ಒಂದು ದೊಡ್ಡ ಪೆಟ್ಟು ಬಿದ್ದಿತು. ತಮಾಷೆಯೆಂದರೆ ಚೀನಾದ ಅಂದಿನ ಯುದ್ಧಕೋರರ ಸರ್ಕಾರ ಇದಕ್ಕಾಗಿ ಜಪಾನಿನ ಕ್ಷಮೆಯನ್ನು ಬೇಡಿತು ! ಜಪಾನಿನ ವಸ್ತುಗಳ ಬಹಿಷ್ಕಾರವನ್ನು ನಿಷೇಧಿಸಿತು.
ಆದರೆ ಇದರಿಂದಾಗಿ ಜಪಾನ್ ವಸ್ತುಗಳ ಬಹಿಷ್ಕಾರವನ್ನು ಚೀನಾದ ಜನತೆ ಮತ್ತಷ್ಟು ರಭಸದಿಂದ ಮುಂದುವರೆಸಿದರು. ಕೆಲ ತಿಂಗಳ ನಂತರ ಮತ್ತೂ ಒಮ್ಮೆ ಬಹಿಷ್ಕಾರವನ್ನು ನಿಷೇಧಿಸ ಬೇಕಾಯಿತು.
ಮೇ ನಾಲ್ಕರ ಚಳುವಳಿ ಚೀನಾದ ಕ್ರಾಂತಿಯ ಹಾದಿಯಲ್ಲಿ ಮಹತ್ವದ ಹಂತ.
ಇಡೀ ಚೀನಾದ ಜನತೆಗೆ ತಮ್ಮ ದೇಶದ ಸ್ಥಿತಿಯ ಬಗೆಗೆ, ಸಾಮ್ರಾಜ್ಯಶಾಹೀ ಶೋಷಣೆ– ಕುತಂತ್ರಗಳ ಬಗೆಗೆ ಎಚ್ಚರ ಮೂಡಿಸುವ ಮೂಲಕ, ಅವರನ್ನು ಚಳುವಳಿಗೆ ಸೆಳೆಯುವ ಮೂಲಕ ಮೇ ನಾಲ್ಕರ ಚಳುವಳಿ ಒಂದು ದೊಡ್ಡ ಪಾತ್ರವನ್ನು ವಹಿಸಿತು. ಕಾರ್ಮಿಕ ವರ್ಗ ಮೊತ್ತ ಮೊದಲನೆಯ ಬಾರಿಗೆ ಒಂದು ಸ್ವತಂತ ಶಕ್ತಿಯಾಗಿ ರಾಜಕೀಯದ ಕಣಕ್ಕೆ ಧುಮುಕಿದ್ದು ಮತ್ತೊಂದು ಮಹತ್ವದ ಅಂಶ. ಕಾರ್ಮಿಕರಿಗೆ ತಮ್ಮ ಸ್ವಂತ ಶಕ್ತಿಯ ಅರಿವಾಯಿತು ಮಾತ್ರವಲ್ಲ–ವಿದ್ಯಾರ್ಥಿಗಳು, ಬುದ್ಧಿ ಜೀವಿಗಳು ಮೊದಲಾದ ಪುಟ್ಟ ಬಂಡವಾಳಶಾಹಿ ಮತ್ತಿತರೆ ವರ್ಗಗಳಿಗೆ ಕೂಡ ಕಾರ್ಮಿಕ ವರ್ಗದ ನಿರ್ಣಾಯಕ ಶಕ್ತಿಯ ಅರಿವಾಯಿತು. ಮೊದಲನೇ ಮಹಾಯುದ್ಧದ ಸಮಯದಲ್ಲಿ ಬೆಳೆದ ಚೀನಾದ ರಾಷ್ಟ್ರೀಯ ಬಂಡವಾಳಶಾಹೀ ವರ್ಗವೂ, ವ್ಯಾಪಾರೀ ವರ್ಗವೂ ಚಳುವಳಿಗೆ ಬೆಂಬಲ ವ್ಯಕ್ತಪಡಿಸಿದವು.
ವಿದ್ಯಾರ್ಥಿಗಳು, ಬುದ್ಧಿ ಜೀವಿಗಳಿಗೆ ಜನತೆಯೊಡನೆ ಮಿಳಿತಗೊಳ್ಳ ಬೇಕಾದ ಅವಶ್ಯಕತೆಯ ಬಗ್ಗೆ ಅರಿವು ಮೂಡಿಸಿತು. ಆ ಮೂಲಕ ಚೀನಾದ ದುಡಿಯುವ ಜನರನ್ನು ಸಂಘಟಿಸಲು ಸಿದ್ಧರಾದ ಸಾವಿರಾರು ಕಾರ್ಯಕರ್ತರನ್ನು ಸೃಷ್ಟಿಸಿತು. ಈಗಾಗಲೇ ವಿವರಿಸಿದಂತೆ ಪ್ರಜಾಪ್ರಭುತ್ವವಾದೀ ಭ್ರಮೆಗಳು, ಅಮೇರಿಕ ಮೊದಲಾದ ಸಾಮ್ರಾಜ್ಯಶಾಹೀ ದೇಶಗಳ ಬಗೆಗಿನ ಮೋಹವನ್ನು ತೊಡೆದು ಮಾರ್ಕ್ಸ್‌ವಾದದತ್ತ ಸೆಳೆಯುವುದರಲ್ಲಿ ಮುಖ್ಯ ಪಾತ್ರ ವಹಿಸಿತು.
ಬಾಕ್ಸ್ ಆರಂಭ
ಒಂದು ಪ್ರಮುಖ ಸೈದ್ಧಾಂತಿಕ ಸಂಘರ್ಷ 1915ರಿಂದ ಆರಂಭವಾಗಿ ಮೇ ನಾಲ್ಕರ ಚಳುವಳಿಗೆ ಕೊಡುಗೆ ನೀಡಿದ ಹೊಸ ಸಾಂಸ್ಕೃತಿಕ ಚಳುವಳಿಯಲ್ಲಿ ಅನೇಕ ವರ್ಗಗಳ ಬದ್ಧಿ ಜೀವಿಗಳು ಸೇರಿದ್ದರು. ಈ ಚಳುವಳಿಯ ಸಂದರ್ಭದಲ್ಲಿ ಅವರ ನಡುವೆ ಒಂದು ದೊಡ್ಡ ವೈಚಾರಿಕ ಸಂಘರ್ಷ ನಡೆಯಿತು. ಯಾವುದೇ ಇಸಂ–ಸಿದ್ಧಾಂತ ನಮಗೆ ಬೇಡ ಎಂದು, ಆ ಮರೆಯಲ್ಲಿ ಮಾರ್ಕ್ಸ್‌ವಾದವನ್ನು ವಿರೋಧಿಸುವ ಬಂಡವಾಳಶಾಹೀ ಪ್ರಜಾಪ್ರಭುತ್ವದ ಸಿದ್ಧಾಂತವನ್ನು ಎತ್ತಿಹಿಡಿಯುವ ವಾದವನ್ನು ಕೆಲವರು ಮಂಡಿಸಿದರು. ಈಗಾಗಲೇ ಹೆಸರಿಸಿದ, ಚೀನಾದಲ್ಲಿ ಮೊದಲು ರಷಿಯನ್ ಕ್ರಾಂತಿಯ ವಿಚಾರಗಳನ್ನು ಪಸರಿಸಿದ, ಲಿ ದಝಾವೋ ಈ ವಾದವನ್ನು ಖಂಡ ತುಂಡವಾಗಿ ಖಂಡಿಸಿದರು. "ನವ ಯುವ ಜನತೆ" ಪತ್ರಿಕೆ ಇದಕ್ಕೊಂದು ವೇದಿಕೆಯಾಯಿತು. ಈ ಸೈದ್ಧಾಂತಿಕ ಸಂಘರ್ಷ "ನವ ಯುವ ಜನತೆ" ಪತ್ರಿಕೆಯ ಪ್ರಭಾವದಲ್ಲಿ ಚೀನಾದ ನಗರಗಳಲ್ಲಿ ಬೆಳೆದಿದ್ದ ಅನೇಕ ಸಂಘಗಳಲ್ಲಿ ಯೂ ಸೈದ್ಧಾಂತಿಕ ಸಂಘರ್ಷಕ್ಕೆ ಕಾರಣವಾಯಿತು. ಈ ಸಂಘಗಳ ಯುವಜನರು ಗಣನೀಯ ಪ್ರಮಾಣದಲ್ಲಿ ಮಾರ್ಕ್ಸ್‌ವಾದಿಗಳಾಗಿ ಮಾರ್ಪಟ್ಟರು.
1911ರ ಕ್ರಾಂತಿಗೆ ಕಾರಣವಾಗಿದ್ದ ಕೋಮಿಂಟಾಂಗ್ ಪಕ್ಷ ಮೇ ನಾಲ್ಕರ ಚಳುವಳಿಗೆ ಹಾಗೂ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಕಿತ್ತೊಗೆಯುವ ಸಾಂಸ್ಕೃತಿಕ ಚಳುವಳಿಗೆ ವಿರೋಧವಾಗಿ ನಿಂತದ್ದು ಒಂದು ವಿಪರ್ಯಾಸ.
ಬಾಕ್ಸ್ ಕೊನೆ
ಈ ಚಳುವಳಿಯ ನಂತರದ ಒಂದೆರಡು ವರ್ಷಗಳಲ್ಲಿ ಚೀನಾದಲ್ಲಿ ಕಮ್ಯುನಿಸ್ಟ್ ಗುಂಪುಗಳು ರೂಪುಗೊಂಡವು. ಅಂತಿಮವಾಗಿ ಚೀನಾ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯೂ ಆಯಿತು. ●

ಎಐಟಿಯುಸಿ ಯವರ ಸುಳ್ಳು ಕೇಸುಗಳಿಗೆ ಮಣಿಯುವುದಿಲ್ಲ

ಪುಟ 11 ರಿಂದ

ಸದರಿ ಹೆಚ್ಚಳದ ಮೊತ್ತಕ್ಕೆ ಪಿ.ಎಫ್. ಮತ್ತು ನಿವೃತ್ತಿಗೊಳ್ಳುವ ನೌಕರರಿಗೆ .ಗ್ರಾಚ್ಯುಟಿಯಲ್ಲಿ ಇಡೀ ಸೇವಾ ಅವಧಿಗೆ ಲಭ್ಯವಾಗುತ್ತದೆ.

ಆದರೆ ಎಐಟಿಯುಸಿ ಮತ್ತು ಸರಕಾರ ನಡುವೆ ಆಗಿರುವ ನಡುವಳಿಕೆಯಂತೆ ಶೇ 10 ಮೂಲವೇತನದಲ್ಲಿ ಹೆಚ್ಚಾಗುವ ಬದಲಾಗಿ ಮಧ್ಯಂತರ ಪರಿಹಾರವೆಂದು ಪರಿಗಣಿಸಲಾಗುತ್ತದೆ. (1–1–2012 ರಿಂದ 31–3–2012 ವರಗೆ) ಇದರಿಂದಾಗಿ ತುಟ್ಟಿ ಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆಗಳು ಹೆಚ್ಚಳಕ್ಕೆ ಧಕ್ಕೆ ಉಂಟಾಗುತ್ತದೆ. ಆನಂತರ 1–4–2012 ರಿಂದ ಶೇ 10+ ಶೇ 76.75 (ತುಟ್ಟಿ ಭತ್ಯೆ) ಒಟ್ಟು ಶೇ 86.75 ಹೆಚ್ಚಳ ಮಾಡಲಾಗುತ್ತದೆ. ಇಲ್ಲಿಯೂ ಮೂಲವೇತನಕ್ಕೆ ಸೇರ್ಪಡೆ ಆಗದ ಕಾರಣ ನೌಕರರ ವೇತನಗಳಲ್ಲಿ ಮೇಲೆ ತಿಳಿಸಿದ ರೀತಿಯಲ್ಲಿ ನಷ್ಟಕ್ಕೆ ಕಾರಣವಾಗುತ್ತದೆ. ಈ ವಿಚಾರದಲ್ಲಿ ದಿನಾಂಕ 15–9–2012 ರಂದೇ ಅಂದರೆ ಮುಷ್ಕರದ ಮರುದಿನವೇ ಸಿಐಟಿಯು ಸಂಘಟನೆಯಿಂದ ಆಡಳಿತವರ್ಗಕ್ಕೆ ಮತ್ತು ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಸಾರಿಗೆ ಸಚಿವರಿಗೆ ಲಿಖಿತವಾದ ಮನವಿ ಸಲ್ಲಿಸಿ ಯಾವುದೇ ಕಾರಣಕ್ಕೂ ಕಡಿತ ಮಾಡದಮತೆ ಒತ್ತಿಯಿಸಲಾಗಿದೆ. ನಮ್ಮ ಸಂಘಟನೆಯ ಒತ್ತಾಯದ ನಂತರ ಕೆಎಸ್‌ಆರ್‌ಟಿಸಿ ಆಡಳಿತ ವರ್ಗವೂ ಕೂಡ ಸರಕಾರಕ್ಕೆ ಪತ್ರ ಬರೆದಿದ್ದು, ಸರಿಪಡಿಸುವ ನಿಟ್ಟಿನಲ್ಲಿ ಸರಕಾರದ ಆದೇಶಕ್ಕಾಗಿ ಕಾಯಲಾಗುತ್ತಿದೆ.

ಕೆ.ಎಸ್.ಆರ್.ಟಿ.ಸಿ ನೌಕರರ ಆಗ್ರಹದ ಮೇರೆಗೆ, ಎ.ಐ.ಟಿ.ಯು.ಸಿ ಮುಖಂಡರು ಮತ್ತು ಉಪ ಮುಖ್ಯಮಂತ್ರಿ ಆರ್.ಅಶೋಕ್ ಅವರ ನಡುವೆ ಏರ್ಪಟ್ಟ ಒಪ್ಪಂದದ ಸಾಧಕ ಬಾಧಕಗಳನ್ನು ವಿವರಿಸಲು ನವೆಂಬರ್ 9 ರಂದು ತುಮಕೂರಿನಲ್ಲಿ ಸಿ.ಐ.ಟಿ.ಯು ಸಂಘದ ವತಿಯಿಂದ ವಿಭಾಗೀಯ ಸಮಾವೇಶವನ್ನು ಏರ್ಪಡಿಸಲಾಗಿತ್ತು. ಆ ಕುರಿತು ಪ್ರಚಾರ ಮಾಡಲು ಸಿಐಟಿಯು ಸಂಘದ ವತಿಯಿಂದ ಜಾಥಾವೊಂದನ್ನು ಸಂಘಟಿಸಲಾಗಿತ್ತು. ಅಂದು ಬೆಳಿಗ್ಗೆ

ಸುಮಾರು 8 ಗಂಟೆಗೆ ಪ್ರಚಾರ ವಾಹನ ಜಾಥಾ ಬೆಂಗಳೂರು ಶಾಂತಿನಗರದ ಬಿಎಂಟಿಸಿ ಕೇಂದ್ರೀಯ ಕಾರ್ಯಾಗಾರದ ಮುಂದೆ ಆಗಮಿಸಿ ಧ್ವನಿವರ್ಧಕದ ಮೂಲಕ ಪ್ರಚಾರ ಮಾಡುತ್ತಾ ಕರಪತ್ರಗಳ ವಿತರಣೆ ಮಾಡಲಾಗುತ್ತಿತ್ತು. ಕಾರ್ಯಾಗಾರದ ಹೊರಗಡೆ ಪ್ರಚಾರ ನಡೆಯುತ್ತಿದ್ದಾಗ ದ್ವಿಚಕ್ರ ವಾಹನದಲ್ಲಿ ಆಗಮಿಸಿದ ಕೇಶವನ್ ಎಂಬ ನೌಕರ ವರ್ಕ್‌ಶಾಪ್ ಒಳಗೆ ತನ್ನ ದ್ವಿಚಕ್ರ ವಾಹನವನ್ನು ಪಾರ್ಕ್ ಮಾಡಿ, ಪಂಚ್ ಮಾಡಿ ತನ್ನ ಕೆಲಸದ ಸ್ಥಳಕ್ಕೆ ಹೋಗುವಾಗ ಕುಸಿದು ಬಿದ್ದು ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾನೆ. ಕಾರ್ಮಿಕನೊಬ್ಬ ಕೆಲಸದ ಸ್ಥಳದಲ್ಲೆ ಸಾವನಪ್ಪಿದಾಗ ಆತನ ಕುಟುಂಬಕ್ಕೆ ಸರಿಯಾದ ಪರಿಹಾರ ದೊರಕುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಬದಲು ಈ ದುರ್ಘಟನೆಯನ್ನು ಸಿಐಟಿಯು ವಿರುಧ್ಧ ದ್ವೇಷ ಸಾಧಿಸಲು ಎಐಟಿಯುಸಿ ಮುಖಂಡರು ಬಳಸಿಕೊಂಡಿರುವುದು ನಾಚಿಕೆಗೇಡಿನ ವಿಷಯ. ಸಿಐಟಿಯು ಮುಖಂಡರ ಮೇಲೆ ಕೊಲೆ ಆರೋಪ ಹೊರಿಸುವಂತೆ ಕ್ರಿಮಿನಲ್ ಮೆದುಳುಗಳು ತುರ್ತಾಗಿ ಕೆಲಸ ಮಾಡಿವೆ. ಕಾಮ್ರೇಡ್ ಅನಂತಸುಬ್ಬರಾವ್ ಅವರ ಆಪ್ತ ಅನುಯಾಯಿ ನಾಗರಾಜು ಮಾರ್ಗದರ್ಶನದಲ್ಲಿ ಮುನಿರೆಡ್ಡಿ ಎಂಬುವನ ಮೂಲಕ ದೂರು ನೀಡಲಾಗಿದೆ. ಸಿಐಟಿಯು ಮುಖಂಡರನ್ನು ಜೈಲಿಗೆ ಹಾಕಿಸುವ ಮೂಲಕ ಕೆಎಸ್‌ಆರ್‌ಟಿಸಿ ನೌಕರರ ನಡುವೆ ಸಿಐಟಿಯು ಪ್ರಬಾವ ಬೆಳೆಯುವುದನ್ನು ತಡೆಯ ಬಹುದೆಂದು ಎಐಟಿಯುಸಿಯವರು ಅಂದುಕೊಂಡಿದ್ದಾರೆ. ಅದು ಅವರ ಭ್ರಮೆ. ಇಂತಹ ಬೆದರಿಕೆಗಳಿಗೆ ಸಿಐಟಿಯು ಎಂದೂ ಸೊಪ್ಪೆಹಾಕಿಲ್ಲ, ಇನ್ನು ಮುಂದೆಯೂ ಇಲ್ಲ. ಕೆಎಸ್‌ಆರ್‌ಟಿಸಿ ನೌಕರರನ್ನು ಒಂದುಗೂಡಿಸಲು ಮತ್ತು ಅವರ ಹಕ್ಕುಗಳಿಗಾಗಿ ಹೋರಾಟ ನಡೆಸಲು ಸಿಐಟಿಯು ಎಂದೆಂದಿಗೂ ಬಧ್ಧವಾಗಿರುತ್ತದೆ ●

JANASHAKTHI KANNADA VARA PATRIKE NOV 25, 2012 Price : Rs. 5/- RNI No. ...
Postal Reg. No. RNP/KA/BGS/2078/2010-12 Posted at MBC Bangalore GPO



ಮೇ ನಾಲ್ಕರ ಚಳುವಳಿಗೆ ಕಾರ್ಮಿಕರ ಪ್ರವೇಶ ಹಾಗೂ ನಿರ್ಣಾಯಕ ಪಾತ್ರ

ಜಿ.ಎನ್.ನಾಗರಾಜ್ 14

ಇಡೀ ಚೀನಾದಲ್ಲಿ ವಿದ್ಯಾರ್ಥಿಗಳು. ಬುದ್ಧಿಜೀವಿಗಳು ಪರಾಧೀನತೆಯ ವಿರುದ್ಧ ಮುಖ್ಯವಾಗಿ ಜಪಾನಿನ ವಿರುದ್ಧ ಚಳುವಳಿಗೆ ಧುಮುಕಿದರು. ಇದರಿಂದ ಇಲ್ಲಿಯವರೆಗೂ ಇದ್ದ ಸಾಂಸ್ಕೃತಿಕ ರೂಪದ ಜೊತೆಗೆ ಇಡೀ ಚಳುವಳಿಗೆ ಒಂದು ರಾಜಕೀಯ ರೂಪ ದೊರಕಿತು. ಇಡೀ ಚೀನಾವನ್ನು ವ್ಯಾಪಿಸಿದ ಒಂದು ವಿಸ್ತಾರ ದೊರಕಿತು.

ಮೇ ನಾಲ್ಕರ ಚಳುವಳಿಯ ಮರು ದಿನ ಮೇ 5 ರಂದು ಬೀಜಿಂಗ್‌ನಲ್ಲಿ ವಿದ್ಯಾರ್ಥಿಗಳು, ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದರು. ಅಂದು ಸರ್ಕಾರ ಮುನ್ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಬಂಧಿಸಿತು. ಮೇ 7ರಂದು ಬೀಜಿಂಗ್ ವಿದ್ಯಾರ್ಥಿಗಳು ಸಂಘವನ್ನು ರಚಿಸಿಕೊಂಡರು. ಇಡೀ ಚೀನಾದ ವಿವಿಧ ನಗರಗಳ ವಿದ್ಯಾರ್ಥಿಗಳಿಗೆ ಟೆಲಿಗ್ರಾಂಗಳನ್ನು ,ಕರಪತ್ರಗಳನ್ನು ಕಳುಹಿಸಿದರು. ವಿವಿಧ ನಗರಗಳಿಗೆ ಭಾಷಣ ಪ್ರವಾಸ ಮಾಡಿದರು. ಇದರಿಂದ ಚೀನಾದ ಬಹಳಷ್ಟು ನಗರಗಳಿಗೆ ಚಳುವಳಿ ತನ್ನೆಲ್ಲಾ ಬಿರುಸಿನೊಂದಿಗೆ ಹಬ್ಬಿತು. ಶಾಂಘೈ ಮೊದಲಾದ ಹತ್ತಾರು ನಗರಗಳಲ್ಲಿ ಬೃಹತ್ ಮೆರವಣಿಗೆ, ಪ್ರತಿಭಟನೆಗಳು ನಡೆದವು.

ವಿವಿಧ ರಾಜ್ಯಗಳಲ್ಲಿ ವಿದ್ಯಾರ್ಥಿ ಸಂಘಗಳು ತ್ವರೆಯಿಂದ ರೂಪುಗೊಂಡವು. ಇವುಗಳ ಫಲವಾಗಿ ಅಖಿಲ ಚೀನಾ ವಿದ್ಯಾರ್ಥಿ ಒಕ್ಕೂಟ ರೂಪುಗೊಂಡಿತು. ಈ ಚಟುವಟಿಕೆಗಳು ಇಡೀ ಮೇ ತಿಂಗಳು ಪೂರ್ತಿ ನಡೆದು ಜೂನ್‌ನಲ್ಲಿ ಬೀಜಿಂಗ್‌ನ ವಿದಾರ್ಥಿಗಳು, ಎರಡು ಸಾವಿರ ವಿದ್ಯಾರ್ಥಿಗಳು ಬೀಜಿಂಗ್ ನಗರದಲ್ಲಿ ಸಾವಿರಾರು ಬೀದಿ ಬದಿ ಸಭೆಗಳನ್ನು ನಡೆಸಿ ದೇಶಕ್ಕೆ ಆಗುತ್ತಿರುವ ಅನ್ಯಾಯ, ಪರಾಧೀನತೆಯ ಪರಿಸ್ಥಿತಿಯನ್ನು ವಿವರಿಸಿದರು. ವಿದ್ಯಾರ್ಥಿಗಳ ಈ ಕ್ರಮ ಸರ್ಕಾರಕ್ಕೆ ಗಾಬರಿಯನ್ನುಂಟು ಮಾಡಿತು. ಜೂನ್ 3ರಂದು 170 ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ಇದರಿಂದ ಮರುದಿನ ಬೀದಿ ಬದಿ ಭಾಷಣ ಮಾಡಲು ಭಾಗವಹಿಸಿದ ವಿದ್ಯಾರ್ಥಿಗಳ ಸಂಖ್ಯೆ ದುಪ್ಪಟ್ಟಾಯಿತು. ಆ ದಿನ 700 ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ಹೀಗೆ ವಿದ್ಯಾರ್ಥಿಗಳು ಚಳುವಳಿಯನ್ನ ತಮ್ಮ ಮಟ್ಟಿಗೆ ಸೀಮಿತಗೊಳಿಸಿಕೊಳ್ಳದೆ ಜನ ಸಾಮಾನ್ಯರ ಬಳಿಗೆ ಕೊಂಡೊಯ್ದರು.



ಮೇ 4ರ ಬಂಡಾಯ – ಬೀಜಿಂಗ್‌ನಲ್ಲಿ

ಕಾರ್ಮಿಕರ ಪ್ರವೇಶ

ಹೀಗೆ ಇಡೀ ಚೀನಾದ ಜನತೆಗೆ ಏನು ನಡೆಯುತ್ತಿದೆ ಎಂಬುದರ ಅರಿವಾಗತೊಡಗಿತು. ಆ ಸಮಯಕ್ಕೆ ಚೀನಾದ ಕಾರ್ಮಿಕರ ಸಂಖ್ಯೆ ಬಹಳಷ್ಟು ಹೆಚ್ಚಾಗಿತ್ತು. ಮೊದಲನೇ ಮಹಾಯುದ್ಧದ ಸಮಯದಲ್ಲಿ ಜಗತ್ತಿನೆಲ್ಲಾ ಸಾಮ್ರಾಜ್ಯಶಾಹಿಗಳು ತಮ್ಮ ಕೈಗಾರಿಕೆಗಳ ಸಾಮರ್ಥ್ಯವನ್ನು ಯುದ್ಧದ ಸಿದ್ಧತೆಗಾಗಿ ತೊಡಗಿಸಿದ್ದಾಗ ಚೀನಾಕ್ಕೆ ಅವರು ಮಾಡುತ್ತಿದ್ದ ರಫ್ತು ಗಣನೀಯವಾಗಿ ಕುಗ್ಗಿತು. ಜೊತೆಗೆ ಯುದ್ಧಕ್ಕೆ, ಸೈನಿಕರಿಗೆ ಬೇಕಾದ ಹಲವು ವಸ್ತುಗಳನ್ನು ತುರ್ತಾಗಿ ತಯಾರಿಸ ಬೇಕಾದಾಗ ಅವರು ತಮ್ಮ ಅಧೀನ ವಸಾಹತುಗಳನ್ನು ಅವಲಂಬಿಸ ಬೇಕಾಯಿತು. ಈ ಸಂದರ್ಭವನ್ನು ಬಳಸಿಕೊಂಡು ಚೀನಾದಲ್ಲಿ ಅನೇಕ ಹೊಸ ಚೀನೀ ಮಾಲಿಕತ್ವದ ಕೈಗಾರಿಕೆಗಳು ಆರಂಭಗೊಂಡವು. ಇದರಿಂದಾಗಿ ಒಂದು ಕಡೆ ಚೀನಾದ ರಾಷ್ಟ್ರೀಯ ಬಂಡವಾಳಗಾರ ವರ್ಗ ಉದಯಿಸಿತು. ಮತ್ತೊಂದು ಕಡೆ ಕಾರ್ಮಿಕರ ಸಂಖ್ಯೆ ಬಡಾಯಿಸಿತು. 1911ರಲ್ಲಿ 5ರಿಂದ ಆರು ಲಕ್ಷದಷ್ಟಿದ್ದ ಕಾರ್ಮಿಕರ ಸಂಖ್ಯೆ 1919ರ ವೇಳೆಗೆ ಇಪ್ಪತ್ತು ಲಕ್ಷದಷ್ಟು ಹೆಚ್ಚಾಗಿತ್ತು.

ಹೀಗೆ ಚೀನಾದ ವಾಣಿಜ್ಯ ನಗರಿಯಾಗಿದ್ದ ಶಾಂಘೈ ಕೈಗಾರಿಕಾ ನಗರವಾಗಿ ರೂಪುಗೊಂಡಿತ್ತು. ಅನೇಕ ಕಾರ್ಮಿಕ ಮುಷ್ಕರಗಳೂ ಸ್ವಯಂ ಆಗಿ ನಡೆದಿದ್ದುವು. 1911ರಲ್ಲಿ ಸಾಮ್ರಾಟರನ್ನು ಕಿತ್ತೊಗೆಯುವ ಸಂದರ್ಭದಲ್ಲಿ, ಹಾಗೆಯೇ ಜಪಾನ್ ಇಪ್ಪತ್ತೊಂದು ಅಂಶಗಳನ್ನು ಹೇರುವ ಸಂದರ್ಭದಲ್ಲಿಯೂ ಕಾರ್ಮಿಕರು ಕೇವಲ ತಮ್ಮ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರವಲ್ಲದೆ ದೇಶಕ್ಕಾಗಿ ನಡೆದ ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. ಹೀಗೆ ಕಾರ್ಮಿಕರಿಗೆ ರಾಜಕೀಯ ಹೋರಾಟಗಳಲ್ಲಿ ಭಾಗವಹಿಸುವುದು ಹೊಸದೇನೂ ಆಗಿರಲಿಲ್ಲ. ಆದರೆ ಕಾರ್ಮಿಕರ ಶಕ್ತಿ ಇಂದು ಬಹಳ ಹೆಚ್ಚಾಗಿತ್ತು.



ಜಪಾನಿ ವಸ್ತುಗಳ ದಹನ – ಮೇ 4ರ ಬಂಡಾಯದಲ್ಲಿ

ಶಾಂಘೈ ನಗರದ ಕಾರ್ಮಿಕರು ಜೂನ್ 5 ರಿಂದ ಮುಷ್ಕರಕ್ಕಿಳಿದರು. ಜಪಾನ್ ಮಾತ್ರವೇ ಅಲ್ಲದೆ ಬ್ರಿಟಿಷ್, ಫ್ರೆಂಚ್ ಮೊದಲಾದ ಸಾಮ್ರಾಜ್ಯಶಾಹೀ ದೇಶಗಳ ಕೈಗಾರಿಕೆಗಳ, ವಾಣಿಜ್ಯ ಸಂಸ್ಥೆಗಳ ಕಾರ್ಮಿಕರೂ ಮುಷ್ಕರಕ್ಕಿಳಿದದ್ದು ಈ ಮುಷ್ಕರದ ಸ್ಪಷ್ಟ ಸಾಮ್ರಾಜ್ಯಶಾಹೀ ವಿರೋಧೀ ಸ್ವರೂಪಕ್ಕೆ ಸಾಕ್ಷಿಯಾಗಿತ್ತು. ಇವುಗಳ ಜೊತೆಗೆ ನಗರದ ಸಾರಿಗೆ ಕಾರ್ಮಿಕರೂ, ಶಾಂಘೈ–ಬೀಜಿಂಗ್ ಮಾರ್ಗದ ರೈಲ್ವೆ ಕಾರ್ಮಿಕರೂ ಮುಷ್ಕರಕ್ಕಿಳಿದರು. ಇದು ರೈಲ್ವೆ ಕಾರ್ಮಿಕರನ್ನು ಹೊರತುಪಡಿಸಿ ಎಪ್ಪತ್ತು ಸಾವಿರಕ್ಕೂ ಹೆಚ್ಚು ಜನ ಮುಷ್ಕರದಲ್ಲಿ ಪಾಲ್ಗೊಂಡರು. ಇದು ಚೀನಾವನ್ನು ಅದರಲ್ಲಿಯೂ ಶಾಂಘೈ ನಗರವನ್ನು ತಮ್ಮ ಹಿಡಿತಲ್ಲಿಟ್ಟುಕೊಂಡಿದ್ದ ಸಾಮ್ರಾಜ್ಯಶಾಹಿಗಳಿಗೆ ದೊಡ್ಡ ನಷ್ಟವನ್ನೂ, ಆಳುತ್ತಿದ್ದ ಸರ್ಕಾರಕ್ಕೆ ಆಘಾತವನ್ನೂ ತಂದಿತು. ಮುಷ್ಕರ ದಿನದಿಂದ ದಿನಕ್ಕೆ ಬಲಗೊಳ್ಳುತ್ತಾ ನಡೆಯಿತು. ಸರ್ಕಾರ ಮಣಿಯಲೇ ಬೇಕಾಯಿತು.

ಕೊನೆಗೆ ಜೂನ್ ಹತ್ತರಂದು ಸರ್ಕಾರ ಬಂಧಿಸಿದ ವಿದ್ಯಾರ್ಥಿಗಳನ್ನು ಬಿಡುಗಡೆ ಮಾಡುವುದಾಗಿಯೂ, ಮೂರು ಜನ ಜಪಾನ್ ಏಜೆಂಟರಾಗಿದ್ದ ಮಂತ್ರಿಗಳನ್ನು ತೆಗೆದು ಹಾಕುವುದಾಗಿಯೂ, ಪ್ಯಾರಿಸ್ ಮಾತುಕತೆಗಳ ಫಲವಾಗಿ ಬಂದ ವರ್ಸೈಲ್ಸ್ ಒಪ್ಪಂದಕ್ಕೆ ಸಹಿ ಹಾಕುವುದಿಲ್ಲವೆಂದೂ ಘೋಷಿಸಿತು. ಇದು ಇಡೀ ಚಳುವಳಿಗೆ ಸಿಕ್ಕ ಮಹತ್ವದ ವಿಜಯವಾಯಿತು. ನಂತರವೇ ಜೂನ್ ಹನ್ನೊಂದರಂದು ಏಳು ದಿನಗಳ ನಂತರ ಮುಷ್ಕರವನ್ನು ಕೊನೆಗೊಳಿಸಲಾಯಿತು. ಈ ವಿಜಯ ಇಡೀ ಚೀನಾದ ಜನತೆಯಲ್ಲಿ ವಿಜಯೋತ್ಸಾಹವನ್ನು ಹೊಮ್ಮಿಸಿತು. ಚಳುವಳಿಗಳಲ್ಲಿ ವಿಶ್ವಾಸವನ್ನು ಮೂಡಿಸಿತು.

ಜಪಾನ್ ವಸ್ತುಗಳ ಬಹಿಷ್ಕಾರ

ಈ ಚಳುವಳಿಯ ಸಂದರ್ಭದಲ್ಲಿ ಜಪಾನ್ ತಯಾರಿಕೆಯ ವಸ್ತುಗಳ ಬಹಿಷ್ಕಾರಕ್ಕೆ ಕರೆ ಕೊಡಲಾಯಿತು. ಈ ವಸ್ತುಗಳನ್ನು ಚೀನಾದ ನಗರಗಳಲ್ಲಿ ಒಟ್ಟು

ಪುಟ 15 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH